ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 52 | ಡಿಸೆಂಬರ್ 23-29, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com





ಮಂಗಳೂರಿನಲ್ಲಿ ಪೂರ್ವಯೋಜಿತ ಕೊಲೆಗಳು



ಸಿ.ಎ.ಎ. ವಿರುದ್ಧ ದೇಶಾದ್ಯಂತ ಉಕ್ಕೇರುತ್ತಿದೆ ಪ್ರತಿರೋಧ

ಪೌರತ್ವ ತಿದ್ದುಪಡಿ ಕಾಯ್ದೆ CAA





ವಿರೋಧಿಸಿ ರಾಜ್ಯಾದ್ಯಂತ ಹೋರಾಟ



"ಮೋದಿ ಸರ್ಕಾರದ ಕಾರ್ಪೋರೇಟ್ ಕಂಪೆನಿಗಳ ಪರವಾದ ನೀತಿಗಳಿಂದ ಆಳವಾಗುತ್ತಿದೆ ಕಾರ್ಷಿಕ ಬಿಕ್ಕಟ್ಟು"

- ಎ.ವಿಜಯರಾಘವನ್

ತುರ್ತು ಪರಿಸ್ಥಿತಿಯನ್ನೂ ಮೀರಿಸುವ ಸರ್ವಾಧಿಕಾರಶಾಹೀ ಪ್ರಯತ್ನ-ಸೀತಾರಾಂ ಯೆಚುರಿ

ಡಿಸೆಂಬರ್ 19ರಂದು ದೇಶದ ರಾಜಧಾನಿ ದಿಲ್ಲಿಯಲ್ಲಿನ ಪರಿಸ್ಥಿತಿ ತುರ್ತು ಪರಿಸ್ಥಿತಿಯ (1975-77ರ) ಅವಧಿಯಲ್ಲಿ ಇದ್ದುದಕ್ಕಿಂತಲೂ ಕೆಟ್ಟದಾಗಿತ್ತು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾವ್ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಅವರ ಜತೆಗೂಡಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತ ಹೇಳಿದ್ದಾರೆ.

ಇಂಟರ್ನೆಟ್ ಸ್ಥಗಿತಗೊಳಿಸಲಾಯಿತು, ಮೆಟ್ರೋ ಸ್ಟೇಷನ್‌ಗಳನ್ನು ಮುಚ್ಚಲಾಯಿತು ಮತ್ತು ಸಿಎಎ ವಿರುದ್ಧ ಪ್ರತಿಭಟಿಸುವವರ ಮೇಲೆ ದಮನಚಕ್ರ ನಡೆಸಲಾಯಿತು. ಯೆಚುರಿ, ರಾಜ ಮತ್ತಿತರ ಎಡಪಕ್ಷಗಳ ಹಾಗೂ ಇತರ ಮುಖಂಡರನ್ನು ಬಂಧಿಸಲಾಯಿತು. ಆದರೂ ಈ ವಿವಾದಾಸ್ಪದ ಕಾಯ್ದೆಯ ವಿರುದ್ಧ ಪ್ರತಿಭಟನೆ ನಡೆದೇ ನಡೆಯಿತು.

ಐದು ಎಡಪಕ್ಷಗಳು, 92 ವರ್ಷಗಳ ಹಿಂದೆ 1927ರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕೋಮು ಐಕ್ಯತೆಯನ್ನು ಎತ್ತಿ ಹಿಡಿಯುತ್ತ ಬ್ರಿಟಿಶರ ಗಲ್ಲುಗಂಬಗಳನ್ನೇರಿ ರಾಂಪ್ರಸಾದ್ ಬಿಸ್ಮಿಲ್, ಅಷ್ಫಾಕುಲ್ಲಾಖಾನ್ ಮತ್ತು ರೋಷನ್ ಸಿಂಗ್ ಹುತಾತ್ಮರಾದ ಡಿಸೆಂಬರ್ 19ರಂದು ಮತ್ತೆ ಅದೇ ಕೋಮು ಸೌಹಾರ್ದವನ್ನು ಎತ್ತಿ ಹಿಡಿಯಲು, ಅದನ್ನು ನಾಶಪಡಿಸುವ ಪ್ರಯತ್ನಗಳನ್ನು ಪ್ರತಿಭಟಿಸಲು ಈ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕರೆ ನೀಡಿದ್ದವು.

ಈ ಕರೆಗೆ ದೇಶಾದ್ಯಂತ ದೊರೆತಿರುವ ಸ್ಪಂದನೆಯ ಬಗ್ಗೆ ಇಬ್ಬರೂ ಮುಖಂಡರು ಸಂತೋಷ ವ್ಯಕ್ತಪಡಿಸಿದರು. ಈ ಹೋರಾಟ ಮುಂದುವರೆಯುತ್ತದೆ, ಎಡಪಕ್ಷಗಳು ಹಾಗೂ ಈ ಹೋರಾಟದಲ್ಲಿ ಭಾಗವಹಿಸುತ್ತಿರುವ ಎಲ್ಲ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯತೀತ ಸಂಘಟನೆಗಳ ಜೊತೆಗೆ ಸಮಾಲೋಚಿಸಿ ಇದನ್ನು ಮುಂದುವರೆಸಲಾಗುತ್ತದೆ ಎಂದು ಇಬ್ಬರೂ ಮುಖಂಡರು ಹೇಳಿದರು.

ಪ್ರತಿಭಟನೆಯನ್ನು ಮುರಿಯಲು ದಿಲ್ಲಿಯಲ್ಲಿ ಸೆಕ್ಷನ್ 144 ಹಾಕಲಾಗಿತ್ತು(ಬಿಜೆಪಿ ಆಳ್ವಿಕೆಯ ಉತ್ತರಪ್ರದೇಶ ಮತ್ತು ಕರ್ನಾಟಕದಲ್ಲೂ ಸೆಕ್ಷನ್ 144 ಹಾಕಲಾಗಿತ್ತು). ದಿಲ್ಲಿಯಲ್ಲಿ ಎರಡು ಕಡೆ ನಡೆಯಲಿದ್ದ ಪ್ರತಿಭಟನೆಗಳಲ್ಲಿ ಜನಗಳು ಭಾಗವಹಿಸದಂತೆ ಮಾಡಲು 20 ಮೆಟ್ರೋ ಸ್ಟೇಷನ್‌ಗಳನ್ನು ಮುಚ್ಚಲಾಗಿತ್ತು. ಇದನ್ನೆಲ್ಲ ಎದುರಿಸಿ ಬಂದ ನೂರಾರು ವಿದ್ಯಾರ್ಥಿಗಳು, ಕಾರ್ಯಕರ್ತರು ಮತ್ತು ಪ್ರತಿಪಕ್ಷಗಳ ಮುಖಂಡರು ಪ್ರತಿಬಂಧಕಾಜ್ಞೆಗಳನ್ನು ಮುರಿದು ಪ್ರತಿಭಟನೆ ನಡೆಸಲಾರಂಭಿಸಿದಾಗ ಬಂಧಿಸಿ ದಿಲ್ಲಿಯ ಹೊರವಲಯಗಳಿಗೆ ಒಯ್ಯಲಾಯಿತು.

ಇದು ನಾವು ತುರ್ತು ಪರಿಸ್ಥಿತಿಗಳ ದಿನಗಳಲ್ಲಿ ಕಂಡುದಕ್ಕಿಂತಲೂ ಕೆಟ್ಟ ಪರಿಸ್ಥಿತಿ. ಪ್ರಜಾಸತ್ತಾತ್ಮಕ ಪ್ರತಿಭಟನೆಗಳೊಂದಿಗೆ ಇಂತಹ ವರ್ತನೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಯೆಚುರಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

"ಇಂದಿನ ಪ್ರತಿಭಟನೆಗಳು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲು ಬಿಡುವದಿಲ್ಲ ಎಂಬ ಯುವಜನರ ದೃಢನಿರ್ಧಾರವನ್ನು ತೋರಿಸಿದೆ. ಇದು ಒಂದು ದಿನದ ಪ್ರತಿಭಟನೆಯಲ್ಲ, ಇಂತಹ ಪ್ರತಿಭಟನೆಗಳು ಮುಂದುವರೆಯುತ್ತವೆ" ಎಂದು ಯೆಚುರಿ ಹೇಳಿದರು. ಇದು ಹಿಂದು-ಮುಸ್ಲಿಂ ಪ್ರಶ್ನೆಯಲ್ಲ, ದೇಶದ ಜಾತ್ಯತೀತ



ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ ಹೋರಾಟ ಎಂದು ಮುಂದುವರೆದು ಅವರು ಹೇಳಿದರು. ಇಂದು ಭಾರತವನ್ನು ಒಂದು ಸರ್ವಾಧಿಕಾರಶಾಹಿಯಾಗಿ ರೂಪಾಂತರಗೊಳಿಸುವ ಪ್ರಯತ್ನ ನಡೆಯುತ್ತಿದೆ, ಅದು ನಿಲ್ಲಬೇಕು ಎಂದರು.

"ನಾವು ತುರ್ತುಪರಿಸ್ಥಿತಿಯ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಿದ ತಲೆಮಾರಿನವರು. ಜನಗಳು ಎದ್ದು ನಿಂತಾಗ ಹೀಗೆಯೇ ಆಗುತ್ತದೆ" ಎಂದು ಯೆಚುರಿ ಹೇಳಿದರು. ಈಗ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ಸಂಸತ್ತಿನಲ್ಲಿ ಈ ಮಸೂದೆಯನ್ನು ಬೆಂಬಲಿಸಿದವರೂ ಕೂಡ ಈಗ ಇದನ್ನು ಬೆಂಬಲಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿರುವತ್ತ ಅವರು ಗಮನ ಸೆಳೆದರು.

ಈ ವಿಷಯ ಈಗ ಸುಪ್ರಿಂ ಕೋರ್ಟ್ ಮುಂದಿದೆ. ಹಲವರು ಇದರ ವಿರುದ್ಧ ಅರ್ಜಿಗಳನ್ನು ಸಲ್ಲಿಸಿದ್ದಾರೆ, ಸಿಪಿಐ(ಎಂ) ಕೂಡಾ ಸಲ್ಲಿಸಿದೆ. ಸುಪ್ರಿಂ ಕೋರ್ಟ್ ಈ ವಿಷಯದಲ್ಲಿ ಸಂವಿಧಾನವನ್ನು ಎತ್ತಿ ಹಿಡಿಯುತ್ತದೆ ಎಂದು ಆಶಿಸೋಣ ಎಂದು ಯೆಚುರಿ ಹೇಳಿದರು.

ಪೌರತ್ವ ನೀಡಿಕೆಗೆ ಮತ-ಧರ್ಮ ಆಧಾರವಾಗಲು ಸಾಧ್ಯವಿಲ್ಲ ಎಂಬ ಎಡಪಕ್ಷಗಳ ನಿಲುವನ್ನು ಪುನರುಚ್ಚರಿಸುತ್ತ ಡಿ. ರಾಜ ಅವರು ಇದೀಗ ಸಂವಿಧಾನವನ್ನು ಬುಡಮೇಲು ಮಾಡಲು ಮೋದಿ-ಷಾ ಜೋಡಿ ನಡೆಸುತ್ತಿರುವ ಅಘೋಷಿತ ಕೃತ್ಯ, ಬಿಜೆಪಿ ತಾನು ಬಹುವಾಗಿ ಉದ್ಧರಿಸುತ್ತಿರುವ ಸರ್ದಾರ್ ಪಟೇಲರ ಪರಂಪರೆಯ ವಿರುದ್ಧವೇ ಕೆಲಸ ಮಾಡುತ್ತಿದೆ ಎಂದರು, ಇದರ ವಿರುದ್ಧ ಹೋರಾಟ ಮುಂದುವರೆಯುತ್ತದೆ ಎಂದು ಪುನರುಚ್ಚರಿಸಿದರು.

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಸಿಪಿಐ(ಎಂ) ಅರ್ಜಿ

ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ಅಸಂವಿಧಾನಿಕ ಮಾತ್ರವಲ್ಲ, ಸಂವಿಧಾನ ವಿರೋಧಿಯೂ ಆಗಿದೆ, ಸಂವಿಧಾನದ ಮೂಲ ಆಶಯಗಳಿಗೇ ವಿರುದ್ಧವಾಗಿದೆ, ಆದ್ದರಿಂದ ಸಿಪಿಐ(ಎಂ) ಇದಕ್ಕೆ ಸವಾಲು ಹಾಕಿ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸುತ್ತಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಡಿಸೆಂಬರ್ 16ರಂದು ಕೇಂದ್ರ ಸಮಿತಿ ಕಚೇರಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಸಿಎಎ ಅಸ್ಸಾಂ ಒಪ್ಪಂದವನ್ನು ಕೂಡ ಉಲ್ಲಂಘಿಸುತ್ತದೆ. ಏಕೆಂದರೆ ಅದರಲ್ಲಿ ನಮೂದಿಸಿರುವ ದಿನಾಂಕ ಮಾರ್ಚ್ 24, 1971, ಈ ತಿದ್ದುಪಡಿ ಅದನ್ನು ಡಿಸೆಂಬರ್31, 2014ಕ್ಕೆ ಒಯ್ದಿದೆ. ಅಲ್ಲದೆ ಅಲ್ಲಿ ಯಾವುದೇ ಧರ್ಮದ ಪ್ರಸ್ತಾಪವಿಲ್ಲ.

ಈ ತಿದ್ದುಪಡಿಯ ವಿರುದ್ಧ ಈಶಾನ್ಯ ಭಾರತದಲ್ಲಿ ನಡೆಯುತ್ತಿರುವ ಪ್ರತಿಭಟನೆಯಿಂದ ಉಂಟಾಗಿರುವ ಉದ್ರಿಕ್ತ ಪರಿಸ್ಥಿತಿ, ಮತ್ತು ದೇಶಾದ್ಯಂತವೂ ವ್ಯಕ್ತವಾಗುತ್ತಿರುವ ಪ್ರತಿಭಟನೆ, ಅದರಲ್ಲೂ ಜಾಮಿಯಾ ಮಿಲಿಯದಲ್ಲಿ ಪೋಲೀಸರ ಅಮಾನುಷ ವರ್ತನೆಗೆ ದೇಶಾದ್ಯಂತ ವಿದ್ಯಾರ್ಥಿಗಳು ವ್ಯಕ್ತಪಡಿಸುತ್ತಿರುವ ಆಕ್ರೋಶದ ಬಗ್ಗೆಯೂ ಯೆಚುರಿ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದರು.

ಪ್ರಧಾನ ಮಂತ್ರಿಗಳ ಸ್ಥಾನಕ್ಕೆ ಕುಂದು ತರುವ ಮಾತುಗಳು:

ದೇಶದಲ್ಲಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದೇ ಇದರ ಉದ್ದೇಶ ಎಂಬುದು ಪ್ರಧಾನ ಮಂತ್ರಿಗಳಿಂದ ಹಿಡಿದು ಕೆಳಗಿನ ವರೆಗೂ ಬಿಜೆಪಿಯ ಮುಖಂಡರುಗಳ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ. ಅವರೆಲ್ಲ ಇದಕ್ಕೆ ಹಿಂದು-ಮುಸ್ಲಿಂ ಬಣ್ಣ ಕೊಡಲು ಪ್ರಯತ್ನಿಸುತ್ತಿದ್ದಾರೆ. ಸ್ವತಃ ಮೋದಿಯವರು ಝರ್ಖಂಡ್‌ನಲ್ಲಿ ಚುನಾವಣಾ ಸಭೆಯೊಂದರಲ್ಲಿ ಇದನ್ನು ವಿರೋಧಿಸುವವರು ಯಾರು ಎಂಬುದನ್ನು ಅವರು ತೊಟ್ಟಿರುವ ಬಟ್ಟೆಗಳಿಂದಲೇ ಗುರುತಿಸಬಹುದು ಎಂದಿದ್ದಾರೆ. ಇದು ಭಾರತದ ಪ್ರಧಾನ ಮಂತ್ರಿಯವರ ಸ್ಥಾನದಲ್ಲಿರುವ ಒಬ್ಬ ವ್ಯಕ್ತಿಗೆ ಶೋಭೆ ತರುವಂತಹ ಮಾತು ಖಂಡಿತಾ ಅಲ್ಲ ಎಂದು ಯೆಚುರಿ ಬಲವಾಗಿ ಟೀಕಿಸಿದರು.

ನೆರೆ ದೇಶವೊಂದರ ಕುಮ್ಮಕ್ಕಿನಿಂದ ಇದನ್ನು ವಿರೋಧಿಸಲಾಗುತ್ತಿದೆ ಎಂದೂ ಪ್ರಧಾನಿಗಳು ಹೇಳಿದ್ದಾರೆ, ಆ ಮೂಲಕ ಸಿಎಎ ಯನ್ನು ದೇಶಾದ್ಯಂತ ವಿರೋಧಿಸುತ್ತಿರುವವರೆಲ್ಲರೂ ರಾಷ್ಟ್ರ-ವಿರೋಧಿಗಳು ಎಂಬ ಹಣೆಪಟ್ಟಿ ಹಚ್ಚಲಾಗುತ್ತಿದೆ. ಇದು ಸಂಪೂರ್ಣ ತಪ್ಪು. ವಾಸ್ತವವಾಗಿ ಭಾರತದ ಸಂವಿಧಾನವನ್ನು ರಕ್ಷಿಸುವುದು ಅತ್ಯುನ್ನತ ದೇಶಪ್ರೇಮೀ ಕರ್ತವ್ಯ, ಪ್ರತಿಭಟನಾಕಾರರು ಅದನ್ನೇ ಮಾಡುತ್ತಿದ್ದಾರೆ ಎಂದು ಅವರು ನೆನಪಿಸಿದರು.

ಈಶಾನ್ಯ ಭಾರತದಲ್ಲಿ ಉದ್ರಿಕ್ತ ಪರಿಸ್ಥಿತಿ:

ಈಶಾನ್ಯ ಭಾರತದಲ್ಲಿ ಪ್ರತಿಭಟನಾಕಾರರ ವಿರುದ್ಧ ದಮನಕಾರೀ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ, ಕರ್ಫ್ಯೂ ಹೇರಲಾಗಿದೆ, ಸೇನಾಪಡೆಗಳನ್ನು ತರಲಾಗಿದೆ, ಐದು ಸಾವುಗಳೂ ವರದಿಯಾಗಿವೆ, ಹಲವರನ್ನು

ಪುಟ 12 ನೋಡಿ

ಸಿಎಎ: ಬಿಜೆಪಿಯ ಸುಳ್ಳು ಪ್ರಚಾರ ಬಯಲು – ಸಿಪಿಐ(ಎಂ) ಪೊಲಿಟ್‌ಬ್ಯುರೊ

ಬಿಜೆಪಿ ತನ್ನ ನೇತೃತ್ವದ ಕೇಂದ್ರ ಸರಕಾರ ತಂದಿರುವ ಅಸಮರ್ಥನೀಯ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ)ಯನ್ನು ಸಮರ್ಥಿಸಿಕೊಳ್ಳಲು ಸುಳ್ಳುಗಳ ಮೊರೆ ಹೊಕ್ಕಿದೆ. ನಿಜ ಸಂಗತಿಗಳನ್ನು ತಿರುಚಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪಪ್ರಚಾರ ನಡೆಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಸಿಪಿಐ(ಎಂ) ಮತ್ತು ಕಮ್ಯುನಿಸ್ಟರು ಪೂರ್ವ ಪಾಕಿಸ್ತಾನದಿಂದ, ನಂತರ ಬಾಂಗ್ಲಾದೇಶದಿಂದ ಬಂದ ನಿರಾಶ್ರಿತರಿಗೆ ಪೌರತ್ವ ಕೊಡುವ ಪ್ರಶ್ನೆಯಲ್ಲಿ ಇಬ್ಬಂದಿತನವನ್ನು ಪ್ರದರ್ಶಿಸಿದ್ದಾರೆ ಎಂದು ಸಾಬೀತು ಮಾಡಲು ಅದು ಮೇ 12, 2012ರಲ್ಲಿ ಆಗಿನ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ಆಗಿನ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಅವರಿಗೆ ಪೌರತ್ವ ಕಾಯ್ದೆಗೆ ತಿದ್ದುಪಡಿ ತಂದು ಬಂಗಾಲೀ ನಿರಾಶ್ರಿತರಿಗೆ ಪೌರತ್ವ ಕೊಡಬೇಕೆಂದು ಆಗ್ರಹಿಸಿ ಬರೆದ ಪತ್ರವನ್ನು ಉದ್ಧರಿಸಿದೆ.

ಬಾಂಗ್ಲಾದೇಶದಿಂದ ಅಲ್ಪಸಂಖ್ಯಾತ ಬಂಗಾಲೀ ನಿರಾಶ್ರಿತರಿಗೆ ಪೌರತ್ವ ಕೊಡಬೇಕು ಎಂದು ಪ್ರತಿಪಾದಿಸಿದ್ದ ಸಿಪಿಐ(ಎಂ) ಈಗ ಅದನ್ನೇ ಮಾಡಿರುವ ಸಿಎಎಯನ್ನು ವಿರೋಧಿಸುತ್ತಿದೆ ಎಂದು ಬಿಜೆಪಿ ಸಾಮಾಜಿಕ ಮಾಧ್ಯಮಗಳಲ್ಲಿ ತನ್ನ ವಕ್ತಾರರುಗಳ ಮೂಲಕ ಅಪಪ್ರಚಾರ ಮಾಡುತ್ತಿದೆ.

ಇಂತಹ ಸುಳ್ಳು ಆಪಾದನೆ ಮಾಡಲು ಅದು ಹೇಗೆ ನಿಜ ಸಂಗತಿಗಳನ್ನು ತಿರುಚಿಟ್ಟಿದೆ ಎಂಬುದನ್ನು ಪೊಲಿಟ್‌ಬ್ಯುರೊ ತನ್ನ ಹೇಳಿಕೆಯಲ್ಲಿ ಬಯಲಿಗೆಳೆದಿದೆ.

ಮೊದಲನೆಯದಾಗಿ, ಸಿಪಿಐ(ಎಂ) ಸದಾ ಹಿಂದಿನ ಪೂರ್ವ ಪಾಕಿಸ್ತಾನ ಮತ್ತು ನಂತರ ಬಾಂಗ್ಲಾದೇಶದಿಂದ ಬಂದ ಅಲ್ಪಸಂಖ್ಯಾತ ನಿರಾಶ್ರಿತರಿಗೆ ಪೌರತ್ವ ಕೊಡಬೇಕು ಎಂದು ಆಗ್ರಹಿಸಿಕೊಂಡೇ ಬಂದಿದೆ. ಆದರೆ ಸಿಎಎ ಈಗ ಅದನ್ನು ಕೊಡುತ್ತಿರುವುದು ಧಾರ್ಮಿಕ ಗುರುತಿನ ಆಧಾರದಲ್ಲಿ ಮತ್ತು ಮುಸ್ಲಿಂ ವಲಸೆಗಾರರನ್ನು ಹೊರತುಪಡಿಸುವ ಮೂಲಕ ಎಂಬುದನ್ನು ಅದು ಒತ್ತಿ ಹೇಳಿದೆ. ಆದರೆ ಸಿಪಿಐ(ಎಂ) ಎಂದೂ ಪೌರತ್ವ ಕೊಡುವಾಗ ಮುಸ್ಲಿಮರನ್ನು ಹೊರತುಪಡಿಸಬೇಕು ಎಂದು ಹೇಳಿಲ್ಲ. ಪಕ್ಷ ಸಿಎಎಯನ್ನು ಬಲವಾಗಿ ವಿರೋಧಿಸಿರುವುದು ಇದೇ ಕಾರಣಕ್ಕಾಗಿ.

ಎರಡನೆಯದಾಗಿ, ಸಿಪಿಐ(ಎಂ) ಎಪ್ರಿಲ್ 2012ರಲ್ಲಿ ತನ್ನ 20ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ "ಬಂಗಾಲೀ ನಿರಾಶ್ರಿತರ ಹಕ್ಕುಗಳಿಗಾಗಿ" ಎಂಬ ನಿರ್ಣಯದಲ್ಲಿ ತನ್ನ ನಿಲುವನ್ನು ಸ್ಪಷ್ಟವಾಗಿ ನಿರೂಪಿಸಿದೆ. ಬಾಂಗ್ಲಾದೇಶದಿಂದ ಬರುವ ನಿರಾಶ್ರಿತರಿಗೆ ಪೌರತ್ವವನ್ನು ಪರಿಶೀಲಿಸುವಾಗ ಅಸ್ಸಾಂ ಒಪ್ಪಂದವನ್ನು ಕಾಪಾಡಬೇಕು ಎಂದು ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಂದರೆ ಅಸ್ಸಾಂ ಒಪ್ಪಂದದಲ್ಲಿ ಇರುವ ಮಾರ್ಚ್ 1971 ರ ವರೆಗಿನ ಗಡುವನ್ನು ಕದಡಿಸಬಾರದು ಎಂದರ್ಥ. ಬಿಜೆಪಿ ಸರಕಾರದ ಸಿಎಎ ಇದನ್ನು ಉಲ್ಲಂಘಿಸುತ್ತದೆ. ಸಂಸತ್ತಿನಲ್ಲಿ ಸಿಎಬಿಯನ್ನು ಸಿಪಿಐ(ಎಂ) ವಿರೋಧಿಸಲು ಇದು ಇನ್ನೊಂದು ಕಾರಣ.

ಸಿಪಿಐ(ಎಂ) ಎಂಪಿಗಳು ಸಂಸತ್ತಿನಲ್ಲಿ ಮೂರು ತಿದ್ದುಪಡಿಗಳನ್ನು ಮಂಡಿಸಿದರು ಎಂಬ ಸಂಗತಿಯತ್ತ ಪೊಲಿಟ್‌ಬ್ಯುರೊ ತನ್ನ ಹೇಳಿಕೆಯಲ್ಲಿ ಗಮನ ಸೆಳೆದಿದೆ.

ಎರಡು ತಿದ್ದುಪಡಿಗಳು ಎಲ್ಲ ನೆರೆ ದೇಶಗಳಿಂದ ಬಂದಿರುವ ವಲಸಿಗರನ್ನು ಅವರ ಧರ್ಮ ಯಾವುದೇ ಇದ್ದರೂ ಪೌರತ್ವ ನೀಡಿಕೆಗೆ ಪರಿಗಣಿಸಲು ಸಾಧ್ಯವಾಗುವಂತೆ ಮಸೂದೆಯಲ್ಲಿದ್ದ ಧಾರ್ಮಿಕ ವರ್ಗೀಕರಣವನ್ನು ತೆಗೆಯಬೇಕು ಎಂಬುದಕ್ಕಾಗಿ. ಉದಾಹರಣೆಗೆ, ತಮಿಳುನಾಡಿನಲ್ಲಿರುವ ಶ್ರೀಲಂಕಾದ ತಮಿಳು ನಿರಾಶ್ರಿತರಿಗೆ ಪೌರತ್ವ ನೀಡಿಕೆಯನ್ನು ಪರಿಶೀಲಿಸಲು ಅನುವು ಮಾಡಿಕೊಡಬೇಕು ಎಂದು.

ಮೂರನೇ ತಿದ್ದುಪಡಿ ಅಸ್ಸಾಂ ಮತ್ತು ಈಶಾನ್ಯ ಭಾರತದ ರಾಜ್ಯಗಳಿಗೆ ಈ ಮಸೂದೆಯ ವ್ಯಾಪ್ತಿಯಿಂದ ವಿನಾಯ್ತಿ ಕೊಡಬೇಕು ಎಂದು.

ಈ ಸಂಗತಿಗಳು ಬಿಜೆಪಿಯ ಸುಳ್ಳು ಪ್ರಚಾರವನ್ನು ಬಯಲಿಗೆಳೆಯುತ್ತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ನಾವು ಸಂವಿಧಾನಕ್ಕೆ ಹೊಣೆಗಾರರು, ಆರೆಸ್ಸೆಸ್ ಅಜೆಂಡಾಕ್ಕಲ್ಲ-ಪಿ.ವಿಜಯನ್

ಅಲ್ಪಸಂಖ್ಯಾತರಿಗೆ ಪೌರತ್ವ ಕೊಡಲು ಸಾಧ್ಯವಿಲ್ಲ ಎಂದು ಯಾರೇ ಹೇಲಲಿ, ಅದನ್ನು ಕೇರಳದಲ್ಲಿ ನಾವು ಒಪ್ಪುವುದಿಲ್ಲ"- ಇದು ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪಿಣರಾಯಿ ವಿಜಯನ್ ಕೇರಳದಲ್ಲಿ ಸಿಎಎ-ಎನ್‌ಆರ್‌ಸಿ ವಿರುದ್ಧ ಎಲ್‌ಡಿಎಫ್ ಮತ್ತು ಯುಡಿಎಫ್ ಜತೆಗೂಡಿ ನಡೆಸಿದ ಧರಣಿಯಲ್ಲಿ ಮಾತಾಡುತ್ತ ಹೇಳಿದ ಮಾತು.

"ನಾನು ಹೀಗೆ ಹೇಳುವಾಗ ಹಲವರಿಗೆ ಆತಂಕವಾಗಬಹುದು. ಇಂತಹ ವಿಷಯಗಳಲ್ಲಿ ಒಂದು ರಾಜ್ಯ ಸರಕಾರ ನಿರ್ಧರಿಸಬಹುದೇ ಎಂದು. ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ಎಲ್ಲ ಪೌರತ್ವ ಕಾಯ್ದೆಗಳನ್ನು ರಚಿಸುವುದು ಭಾರತದ ಸಂವಿಧಾನದ ಆಧಾರದಲ್ಲಿ. ನಾವು ಸರಕಾರವನ್ನು ರಚಿಸಿದಾಗ ಈ ಸಂವಿಧಾನದ ಮೇಲೆಯೇ ಪ್ರತಿಜ್ಞೆ ಕೈಗೊಂಡಿರುವುದು. ಯಾರಾದರೂ ಸಂವಿಧಾನವನ್ನು ಬುಡಮೇಲು ಮಾಡಲು ಪ್ರಯತ್ನಿಸಿದರೆ, ನಾವು ಅದನ್ನು ಪ್ರತಿರೋಧಿಸುತ್ತೇವೆ. ಕೇರಳ ಸರಕಾರ ಸಂವಿಧಾನಕ್ಕೆ ಹೊಣೆಗಾರಿಕೆ ನಿಭಾಯಿಸಬೇಕಾಗಿದೆ, ಆರೆಸ್ಸೆಸ್‌ನಂತವರು ಮುಂದಿಡುತ್ತಿರುವ ಅಜೆಂಡಾಕ್ಕೆ ಅಲ್ಲ" ಎಂದು ಮುಂದುವರೆದು ವಿಜಯನ್ ಹೇಳಿದರು.

ಸಂಪಾದಕೀಯ

ಮಂಗಳೂರಿನಲ್ಲಿ ಪೂರ್ವಯೋಜಿತ ಕೊಲೆಗಳು !

ಯಡಿಯೂರಪ್ಪರವರು ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡು ಮತ್ತೊಮ್ಮೆ ಇಬ್ಬರು ಅಮಾಯಕರನ್ನು ಬಲಿತೆಗೆದುಕೊಂಡಿದ್ದಾರೆ. ಹಿಂದೆ ರೈತರ ಹೆಸರಿನಲ್ಲಿ ಅಧಿಕಾರ ಗ್ರಹಣಮಾಡಿ ಇಬ್ಬರು ರೈತರನ್ನು ಬಲಿ ತೆಗೆದುಕೊಂಡಿದ್ದರು. ಅಮಾಯಕರ ರಕ್ತ ಹರಿಸುವುದು ಯಡಿಯೂರಪ್ಪರವರಿಗೆ ಕರಗತವಾಗುತ್ತಿದೆ ಎಂಬಂತೆ ಕಾಣುತ್ತಿದೆ.

ಪೌರತ್ವ (ತಿದ್ದುಪಡಿ) ಕಾಯ್ದೆ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟಿಸುತ್ತಿದ್ದವರ ಮೇಲೆ ಯಡಿಯೂರಪ್ಪನವರ ಪೊಲೀಸರು ಹಾರಿಸಿದ ಗುಂಡಿಗೆ ಇಬ್ಬರು ಬಲಿಯಾಗಿದ್ದಾರೆ. ಇದು ಯಡಿಯೂರಪ್ಪ ಸರಕಾರದ ಪೂರ್ವಯೋಜಿತ ಸಂಚು ಅಂದರೆ ತಪ್ಪಾಗದು. ಯಾವುದೇ ಪ್ರಚೋದನೆ ಇಲ್ಲದೆ ಮೂರು ದಿನಗಳ ನಿಷೇದಾಜ್ಞೆಯನ್ನು ಘೋಷಿಸುವ ಮೂಲಕ ಸರಕಾರವೇ ಜನರನ್ನು ಪ್ರಚೋದಿಸಿತು. ಅಂದು ಮಂಗಳೂರಿನಲ್ಲಿ ಪ್ರತಿಭಟನೆಗೆ ಇಳಿದವರ ಸಂಖ್ಯೆ 200 ದಾಟಿರಲಿಲ್ಲ. ಪ್ರತಿಭಟನಾಕಾರರಿಗಿಂತಲೂ ಪೊಲೀಸರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಪೊಲೀಸರು ಮಾನಸಿಕ ಸಿದ್ಧತೆಯೊಂದಿಗೆ ಬಂದಂತೆ ಕಾಣುತಿತ್ತು. 'ಲಾಠಿ ಚಾರ್ಜ್ ಮಾಡಕೂಡದು.' ಎಂಬ ಮುಖ್ಯ ಮಂತ್ರಿ ಮಾತುಗಳು ಪ್ರತಿಧ್ವನಿಸುತ್ತಿದ್ದವು. ಆದರೆ 'ಗುಂಡು ಹಾರಿಸಬಾರದು' ಎಂದು ಅವರು ಅಪ್ಪಿತಪ್ಪಿಯೂ ಹೇಳಿರಲಿಲ್ಲ. ಪೊಲೀಸ್ ಅಧಿಕಾರಿಗಳಿಗೆ ಸರ್ಕಾರದ ಒಲವು, ನಿಲುವು ಅರ್ಥವಾಗುತ್ತಿತ್ತು,

ಪ್ರತಿಭಟನಾಕಾರರು ಕಲ್ಲು ತೂರುತ್ತಿದ್ದರು ಎಂದು ಹೇಳಲಾಗುತ್ತದೆ. ಕಲ್ಲು ತೂರಾಟದಿಂದ ಪೊಲೀಸರು ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿ ಇರುವುದು ವರದಿಯಾಗಿಲ್ಲ. ಪೊಲೀಸರು ಗುಂಡು ಹಾರಿಸಲೇ ಬೇಕಾದ ಪರಿಸ್ಥಿತಿ ಉಂಟಾಗಿರಲಿಲ್ಲ. ಲಾಠಿ ಬಳಕೆ ಮಾಡಬಾರದು ಎಂದು ಮುಖ್ಯಮಂತ್ರಿ ನೀಡಿದ ಎಚ್ಚರಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ಸಿಕ್ಕ ಸಿಕ್ಕವರ ಮೇಲೆ ಪೊಲೀಸರು ಲಾಠಿ ಬೀಸಿದ್ದಾರೆ. ಗಾಳಿಯಲ್ಲಿ ಗುಂಡು ಹಾರಿಸಿ ಪ್ರತಿಭಟನಾಕಾರರನ್ನು ಚದುರಿಸಬಹುದಾಗಿತ್ತು. ಆದರೆ, ಮೊದಲೇ ಆದೇಶ ಪಡೆದುಕೊಂಡು ಬಂದವರಂತೆ ಪೊಲೀಸರು ಪ್ರತಿಭಟನಾಕಾರರ ಎದೆಗೆ ಗುಂಡಿಟ್ಟಿದ್ದಾರೆ.

'ಯಾರೂ ಪ್ರತಿಭಟನೆಗಳಲ್ಲಿ ಭಾಗವಹಿಸಬಾರದು' ಇದು ದಕ್ಷಿಣದಲ್ಲಿ ಬೆಳೆಯುತ್ತಿರುವ ಹಿಟ್ಲರ್ ಶಾಹಿಯ ಇನ್ನೊಂದು ಆದೇಶ! ಸರ್ಕಾರ ಜನತೆಯ ಹಕ್ಕುಗಳನ್ನು ದಮನಮಾಡಲು ಹೋರಾಟಾಗ,. ಜನ ಪ್ರತಿಭಟಿಸಬಾರದೆಂದು ಆದೇಶಿಸಲು ದೇಶದಲ್ಲಿ ತುರ್ತು ಪರಿಸ್ಥಿತಿ ಇದೆಯಾ? ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿ ಅದನ್ನು ಹಿಮ್ಮೆಟ್ಟಿಸಿದ ದೇಶ ನಮ್ಮದು.

ಮಂಗಳೂರಿನಲ್ಲಿ ಕೇರಳದವರು ಬಂದು ಪ್ರಚೋದಿಸುತ್ತಿದ್ದಾರೆ ಎಂದು ಬಿಜೆಪಿ ನಾಯಕರ ಆರೋಪ. ಆಧಾರವಿಲ್ಲದ ಆರೋಪ ! ಕೇರಳಲ್ಲೂ ಸಿಎಎ ವಿರುದ್ಧ ಪ್ರತಿಭಟನೆ ನಡೆದಿದೆ. ಕೇರಳದ ಯುವಕರಿಗೆ ಸಿಎಎ ವಿರುದ್ಧ ಚಳುವಳಿಯನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಇದೆ. ಸಿಎಎ ವಿಷಯದಲ್ಲಿ ಯಾರೂ ಯಾರನ್ನೂ ಪ್ರಚೋಧಿಸುವ ಅಗತ್ಯವಿಲ್ಲ. ಅದು ನಮ್ಮ ದೇಶದ ಸಂವಿಧಾನದ ವಿರುದ್ಧವಾಗಿದೆ. ನಮ್ಮ ಪರಂಪರೆಗೆ ವಿರುದ್ಧವಾಗಿದೆ. ಇದನ್ನು ಎಲ್ಲರೂ ಪಕ್ಷಾತೀತವಾಗಿ ವಿರೋಧಿಸಬೇಕಾದ ಕಾಯ್ದೆ. ಸಂಸತ್ತಿನಲ್ಲಿ ಬಹುಮತ ಇದೇ ಎಂಬ ಅಹಂಕಾರದಿಂದ ಬಲವಂತವಾಗಿ ಹೇರಲ್ಪಟ್ಟ ಕಾಯ್ದೆ. ದೇಶದಲ್ಲಿ ವಾಸ ಇರುವ ಅಲ್ಪಸಂಖ್ಯಾತರಲ್ಲಿ ಭೀತಿಯನ್ನು ಹುಟ್ಟಿಸಿ ಅವರನ್ನು ನಿರಾಶ್ರಿತರನ್ನಾಗಿ ಮಾಡುವ ದುರುದ್ದೇಶ ಇದರ ಹಿಂದೆ ಇದೆ. ಮಸೀದಿಗಳನ್ನು ಧ್ವಂಸಮಾಡಿ ದೇವಸ್ಥಾನಗಳನ್ನು ಕಟ್ಟುವ, ಮುಸ್ಲಿಂ ಪ್ರಾಬಲ್ಯದ ಜಮ್ಮು ಕಾಶ್ಮೀರ ರಾಜ್ಯವನ್ನು ತುಂಡರಿಸಿ ಬಲಹೀನಗೊಳಿಸುವ, ಮುಸ್ಲಿಂ ಎನ್ನುವ ಒಂದೇ ಕಾರಣಕ್ಕೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಾ ರಣರಂಗದಲ್ಲಿ ಪ್ರಾಣತೆತ್ತ ಟಿಪ್ಪು ಸುಲ್ತಾನರನ್ನು ಖಳನಾಯಕರಂತೆ ಬಿಂಬಿಸುವುದು ಮುಂತಾದ ಕ್ರಮಗಳಂತೆಯೇ ಈಗ ಮುಸಲ್ಮಾನರಿಗೆ ಪೌರತ್ವ ನೀಡುವ ವಿಷಯದಲ್ಲಿ ತಾರತಮ್ಯ ಮಾಡುವುದು ಇನ್ನೊಂದು ಕ್ರಮವಾಗಿದೆ.

ಮಂಗಳೂರು ಕಳೆದ ಕೆಲವು ವರ್ಷಗಳಿಂದ ಸಂಘ ಪರಿವಾರದ ಪ್ರಯೋಗ ಶಾಲೆಯಾಗಿ ಪರಿವರ್ತನೆ ಆಗಿದೆ. ಇಂತಹ ಹಿನ್ನೆಲೆ ಇರುವ ರಾಜ್ಯದ ಕರಾವಳಿ ಪ್ರದೇಶದಲ್ಲಿ ಸರ್ಕಾರ ವಿಶೇಷ ಮುನ್ನೆಚ್ಚರಿಕೆ ವಹಿಸಬೇಕಾಗಿತ್ತು. ನಿಷೇದಾಜ್ಞೆ ಹೇರುವ ಮೂಲಕ ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸುವ ಬದಲಾಗಿ ಮಾತುಕತೆ, ಸಂವಾದದ ಮೂಲಕ ಪರಿಸ್ಥಿಯನ್ನು ತಿಳಿಗೊಳಿಸುವ ಪ್ರಯತ್ನ ಆಗಬೇಕಾಗಿತ್ತು. ಆದರೆ ಯಡಿಯೂರಪ್ಪ ಸರ್ಕಾರ ಯಾರನ್ನೋ ತೃಪ್ತಿ ಪಡಿಸುವ ಉದ್ದೇಶದಿಂದ ಗುಂಡು ಹಾರಿಸುವ ಪೂರ್ವಸಿದ್ಧಾತೆ ಮಾಡಿಕೊಂಡಂತೆ ಕಾಣುತ್ತದೆ.

ಇಷ್ಟಾದ ಮೇಲೂ ಸಿಎಎ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿ ಮಾಡುತ್ತೇವೆ ಎಂದು ಬಿಜೆಪಿಯ ಕೆಲವು ಮಂತ್ರಿಗಳು ಹೇಳತೊಡಗಿದ್ದಾರೆ. ಅವರಿಗೆ ರಾಜ್ಯದ ಜನತೆಯ ಕಾಳಜಿಗಿಂತ ರಾಜ್ಯದಲ್ಲಿ ಮಂತ್ರಿ ಆಗುವುದು, ಉಪಮುಖ್ಯಮಂತ್ರಿಯಾಗುದು ಇದೇ ಮುಖ್ಯವಾಗಿದೆ. ಸರ್ಕಾರದ ಧೋರಣೆಯನ್ನು ಅರಿತ ಹಿರಿಯ ಪೊಲೀಸ್ ಅಧಿಕಾರಿಗಳೂ ಸಹ ಸಂಘ ಪರಿವಾರದವರ ಮಾತುಗಳನ್ನೇ ಆಡುತ್ತಾರೆ. ಪರಿಸ್ಥಿತಿ ಹೀಗೇ ಮುಂದುವರೆದರೆ ಕರ್ನಾಟಕ ಬಹುಬೇಗ 'ಪೊಲೀಸ್ ರಾಜ್ಯ'ವಾಗಿ ಪರಿವರ್ತನೆಯಾಗುವ ಅಪಾಯವಿದೆ. ಪೋಲಿಸ್ ಪಡೆಗಳಲ್ಲಿ ಬಹುದೊಡ್ಡ ವಿಭಾಗದವರ ಮೆದುಳು ಕೇಸರಿಮಯವಾಗಿದೆ. ಅವರು ಆರೆಸ್ಸೆಸ್ ಸ್ವಯಂ ಸೇವಕರಂತೆ ದಾಳಿ ಮಾಡಲು ಹಿಂಜರಿಯುವುದಿಲ್ಲ. ಇಂತಹ ಸನ್ನಿವೇಶದಲ್ಲಿ ನಮ್ಮ ದೇಶದ ಯುವಕರು ತಮ್ಮ ಜಾತಿ ಧರ್ಮಗಳ ಸಂಘಟನೆಗಳಲ್ಲಿ ತೊಡಗುವ ಬದಲು ಜಾತ್ಯಾತೀತರಾಗಿ ಒಂದಾಗಿ ಪರಸ್ಪರ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಳ್ಳಲು ಮುಂದಾಗಬೇಕು.

ರಾಜ್ಯ ಸರಕಾರದ ಹೊಣೆಗೇಡಿತನವೇ ಗೋಲಿಬಾರ್ ಗೆ ಕಾರಣ – ಸಿಪಿಐಎಂ ಖಂಡನೆ

ರಾಜ್ಯದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣಕ್ಕೆ ಮತ್ತು ಮಂಗಳೂರಿನಲ್ಲಿ ನಡೆದಿರುವ ಗೋಲಿಬಾರ್ ಘಟನೆಗಳಿಗೆ ಜನತೆಯ ಆತಂಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಲ್ಲಿ ಘೋರವಾಗಿ ವಿಫಲವಾದ ಕರ್ನಾಟಕ ರಾಜ್ಯ ಸರಕಾರವೇ ನೇರ ಹೊಣೆಗಾರನಾಗಿದೆಯೆಂದು ಭಾರತ ಕಮ್ಯುನಿಷ್ಠ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಮಂಗಳೂರು ಗೋಲಿಬಾರ್ ಘಟನೆಯನ್ನು ಬಲವಾಗಿ ಖಂಡಿಸಿದೆ.

ಕೂಡಲೇ ಮಂಗಳೂರು ಗೋಲಿಬಾರ್ ಘಟನೆಯನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಸಿಪಿಐಎಂ ಒತ್ತಾಯಿಸುತ್ತದೆ.

ಕೇಂದ್ರ ಸರಕಾರ ಸಂವಿಧಾನ ಹಾಗೂ ಜಾತ್ಯಾತೀತ ಪ್ರಜಾಪ್ರಭುತ್ವ ವಿರೋಧಿಯಾದ ಅಂಶಗಳನ್ನೊಳಗೊಂಡು ತಿದ್ದುಪಡಿಯನ್ನು ಪೌರತ್ವ ಕಾಯ್ದೆಗೆ ತಂದಿರುವುದು ದೇಶದ ಎಲ್ಲಾ ಪ್ರಜಾಪ್ರಭುತ್ವ ವಾದಿಗಳಲ್ಲಿ ಆತಂಕ ಉಂಟು ಮಾಡಿದೆ. ಅದರ ಭಾಗವಾಗಿಯೇ ದೇಶದಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ.

ಕರ್ನಾಟಕ ರಾಜ್ಯ ಸರಕಾರ ಜನತೆಯ ಆತಂಕ ನಿವಾರಣೆಗೆ ಕ್ರಮ ವಹಿಸುವ ಬದಲು ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತಹ ರೀತಿಯಲ್ಲಿ ಜನರ ಅಸಮಾಧಾನವನ್ನು ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸುವ ಮೂಲಕ ಹೊರಗೆಡಹಲು ಅವಕಾಶ ನೀಡುವ ಬದಲು, ರಾಜ್ಯದಾದ್ಯಂತ ನಿಷೇಧಾಜ್ಞೆ ಹೇರಿ ಪ್ರಜಾಪ್ರಭುತ್ವ ವಿರೋದಿ ಕ್ರಮ ವಹಿಸಿದ್ದು ಮತ್ತಷ್ಟು ವಾತಾವರಣವನ್ನು ಹದಗೆಡಿಸಿತು. ಇದರ ಪರಿಣಾಮವೇ ಇದು.

ರಾಜ್ಯ ಹಾಗೂ ಮಂಗಳೂರಿನ ಜನತೆ ಸಂಯಮ ಕಾಯ್ದುಕೊಂಡು ಶಾಂತಿ ಕಾಪಾಡಬೇಕೆಂದು ಸಿಪಿಐಎಂ ಮನವಿ ಮಾಡುತ್ತದೆ.

ಅದೇ ಸಂದರ್ಭದಲ್ಲಿ ಗೋಲಿಬಾರ್ ನಲ್ಲಿ ಸತ್ತವರ ಕುಟುಂಬಕ್ಕೆ ತಲಾ 25 ಲಕ್ಷ ರೂಗಳ ಪರಿಹಾರ ಮತ್ತು ಗಾಯಗೊಂಡ ಎಲ್ಲರಿಗೂ ಸೂಕ್ತ ವೈದ್ಯಕೀಯ ನೆರವು ಹಾಗೂ ಪರಿಹಾರವನ್ನು ರಾಜ್ಯ ಸರಕಾರ ನೀಡಬೇಕೆಂದು ಸಿಪಿಐಎಂ ಒತ್ತಾಯಿಸುತ್ತದೆ.

ಯು. ಬಸವರಾಜ
ಕಾರ್ಯದರ್ಶಿಗಳು

ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಲು ಸಿಪಿಐಎಂ ಒತ್ತಾಯ

ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಮಸೂದೆ(ಸಿಎಬಿ.) ಮತ್ತು ರಾಷ್ಟ್ರೀಯ ಪೌರರ ದಾಖಲಾತಿ (ಎನ್‌ಆರ್‌ಸಿ) ವಿರುದ್ದ ದೇಶದಾದ್ಯಂತ ಪ್ರತಿಭಟನೆಗಳು ಸಂಸತ್ತಿನ ಒಳಗೂ ಹಾಗೂ ಹೊರಗೂ ವ್ಯಾಪಕಗೊಳ್ಳುತ್ತಿವೆ.

ಸಂಸತ್ತಿನ ಎರಡೂ ಸದನಗಳು ಈ ಸಿಎಬಿಯನ್ನು ಪಾಸು ಮಾಡಿವೆ. ಈ ಕಾಯ್ದೆಯು ಡಿಸೆಂಬರ್ 31, 2014 ರ ಪೂರ್ವ ಅಫಘಾನಿಸ್ತಾನ ಪಾಕಿಸ್ಥಾನ ಮತ್ತು ಬಾಂಗ್ಲಾ ದೇಶದಿಂದ ವಲಸೆಬಂದ ಹಿಂದೂ, ಸಿಖ್, ಬೌದ್ಧ, ಜೈನಾ ಹಾಗೂ ಕ್ರಿಶ್ಚಿಯನ್ ಧರ್ಮಗಳ ಜನ ಸಮುದಾಯಗಳನ್ನು ಕಾನೂನು ಬದ್ಧವೆಂದು ಪರಿಗಣಿಸಿ ಪೌರತ್ವವನ್ನು ನೀಡುವುದಾಗಿ ಹೇಳುತ್ತಿದೆ, ಆದರೇ ಅದೇ ದೇಶಗಳಿಂದ ಅದೇ ಸಮಯಗಳಲ್ಲಿ ವಲಸೆ ಬಂದ ಮುಸ್ಲಿಮರನ್ನು ಮಾತ್ರ ಕಾನೂನು ಬಾಹಿರ ವಲಸೆಗಾರರೆಂದು ಪರಿಗಣಿಸುತ್ತದೆ. ಇದು ಭಾರತೀಯ ಸಂವಿಧಾನದ ನಗ್ನ ಉಲ್ಲಂಘನೆಯಾಗಿದೆ,

ನಮ್ಮ ಸಂವಿಧಾನವು ಕಾನೂನಿನ ಮುಂದೆ ಈ ದೇಶದ ಪ್ರತಿಯೊಬ್ಬ ಪ್ರಜೆ ಸಮಾನರೆಂದು ಪರಿಗಣಿಸಿದೆ. ಕಾನೂನಿನ ರಕ್ಷಣೆಯ ವಿಚಾರವೂ ಸೇರಿದಂತೆ ಇದರಲ್ಲಿ ತಾರತಮ್ಯ ಎಸಗದಂತೆ ಪ್ರಭುತ್ವಕ್ಕೆ ಹೇಳಿದೆ. ಮಾತ್ರವಲ್ಲಾ ಈ ದೇಶದ ಪ್ರಜೆಗೆ ಧರ್ಮ, ಜಾತಿ, ಭಾಷೆ, ಪ್ರದೇಶ ಹಾಗೂ ಲಿಂಗದ ಆಧಾರದ ತಾರತಮ್ಯ ಮಾಡುವುದನ್ನು ನಿಷೇಧಿಸಿದೆ.

ಆದ್ದರಿಂದ ಸದರಿ ಕಾಯ್ದೆಯು ಧರ್ಮದ ಆಧಾರದಲ್ಲಿ ತಾರತಮ್ಯ ಎಸಗುತ್ತಿರುವುದು ಸ್ಪಷ್ಟವಿದೆ, ಆದ್ದರಿಂದ ಇದು ಸಂವಿಧಾನದ ವಿರೋಧಿ ಮಾತ್ರವಲ್ಲಾ, ಇದು ಭಾರತೀಯ ಗಣತಂತ್ರದ ಪ್ರಜಾಸತ್ತಾತ್ಮಕ ಬುನಾದಿಯನ್ನು ನಾಶಪಡಿಸುವುದೇ ಅದರ ಹಿಂದಿನ ಉದ್ದೇಶವಾಗಿದೆ, ಇದು ಪೌರತ್ವವನ್ನು ಒಬ್ಬ ವ್ಯಕ್ತಿಯ ಧಾರ್ಮಿಕ ನೆಲೆಯೊಂದಿಗೆ ಜೋಡಿಸುತ್ತದೆ, ಇದು ಜಾತ್ಯತೀತತೆಗೆ ತದ್ವಿರುದ್ಧವಾದ ಸಂಗತಿಯಾಗಿದೆ,

ದೇಶದಲ್ಲಿ ಕೋಮು ವಿಭಜನೆ ಮತ್ತು ಸಾಮಾಜಿಕ ಧ್ರುವೀಕರಣವನ್ನು ಇನ್ನಷ್ಟು ತೀವ್ರಗೊಳಿಸುವುದು ಈ ಮಸೂದೆಯ ಹಿಂದಿನ ಉದ್ದೇಶ, ಇದು ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಅಪಾಯಕಾರೀ ಹಾನಿಯುಂಟು ಮಾಡುತ್ತದೆ. ಇಂತಹ ಮಸೂದೆ ಪಾಸಾಗಿರುವುದು ಮತ್ತು ಎನ್,ಆರ್,ಸಿಯನ್ನು ಇಡೀ ದೇಶಕ್ಕೆ ವಿಸ್ತರಿಸಲಾಗುವುದು ಎಂದು ಮೋದಿ–ಷಾ ಸರಕಾರ ಸಾರಿರುವುದು ಭಾರತೀಯ ಗಣತಂತ್ರದ ಸ್ವರೂಪವನ್ನೇ ಬುಡಮೇಲು ಮಾಡುವ ಒಂದು ಅವಳಿ ಸಂಯೋಜನೆ, ಇದು ನಮ್ಮ ಜಾತ್ಯತೀತ ಪ್ರಜಾಪ್ರಭುತ್ವ ಗಣತಂತ್ರವನ್ನು ಹಿಂದೂ ರಾಷ್ಟವಾಗಿ ಪರಿವರ್ತಿಸುವ ಆರೆಸ್ಸೆಸ್‌ನ ರಾಜಕೀಯ ಯೋಜನೆಯ ಭಾಗವಾಗಿದೆ.ಸಂವಿಧಾನ ವಿರೋಧಿಯಾದ ಇದನ್ನು ತಕ್ಷಣವೇ ವಾಪಾಸು ಪಡೆಯಬೇಕೆಂದು ಸಿಪಿಐಎಂ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ.

ಆರ್ಥಿಕ ಬಿಕ್ಕಟ್ಟು ನಿವಾರಣೆಗೆ ಒತ್ತಾಯಿಸಿ ದೇಶದಾದ್ಯಂತ ಸಿಪಿಐಎಂ ಜನಾಂದೋಲನ

ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರಂತರವಾಗಿ ಕಳೆದ 1991 ರಿಂದ ಜಾರಿಗೊಳಿಸುತ್ತಿರುವ ಲೂಟಿಕೋರ ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ದೇಶೀಯ ಶ್ರೀಮಂತರ ಪರವಾದ ಜಾಗತೀಕರಣಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳು ದೇಶದ ಆಂತರೀಕ ಮಾರುಕಟ್ಟೆಯನ್ನು ನಾಶಗೊಳಿಸಿ ದೇಶವನ್ನು ಒಂದು ಗಂಭೀರ ಬಿಕ್ಕಟ್ಟಿನೆಡೆಗೆ ತಳ್ಳಿದೆ, ಇದರ ಪರಿಣಾಮವಾಗಿ ದೇಶದೊಳಗಿನ ಎಲ್ಲರೀತಿಯ ಆಂತರಿಕ ಉತ್ಪಾದನೆ ಕುಸಿದು ಹೋಗಿದೆ, ದೇಶದ ಕೃಷಿ ಹಾಗೂ ಸಣ್ಣ ಮಧ್ಯಮ ಕೈಗಾರಿಕೆಗಳು ನಾಶ ವಾಗುತ್ತಿವೆ, ಹೊಸ ಉದ್ಯೋಗಗಳು ಸೃಷ್ಟಿಗೊಳ್ಳುವ ಬದಲು ಇರುವ ದಶ ಲಕ್ಷಾಂತರ ಉದ್ಯೋಗಗಳು ಇಲ್ಲವಾಗುತ್ತಿವೆ. ರೈತರು ಕೂಲಿಕಾರರು ಮತ್ತು ಕಾರ್ಮಿಕರು, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಯುವಜನರು ಅತ್ಯಂತ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ,

ಕೇಂದ್ರ ಸರಕಾರ ಸಂಕಷ್ಟದಲ್ಲಿರುವ ಸಾಮಾನ್ಯ ಜನತೆಗೆ ನೆರವು ನೀಡುವ ಬದಲು ದೇಶದ ಬಹು ರಾಷ್ಟ್ರೀಯ ಸಂಸ್ಥೆಗಳ ಹಿತ ರಕ್ಷಣೆಗಾಗಿ ಬಿಕ್ಕಟ್ಟಿನ ಹೊರೆಯನ್ನು ಸಂಕಷ್ಟದಲ್ಲಿರುವ ಸಾಮಾನ್ಯ ದುಡಿಯುವ ಜನತೆಯ ಮೇಲೆ ಅಗತ್ಯ ವಸ್ತುಗಳ ಬೆಲೆಗಳು ಮತ್ತು ಕರ ಏರಿಕೆಗಳನ್ನು ಹೇರುತ್ತಿರುವುದರಿಂದ ಜನತೆ ಮತ್ತಷ್ಟು ಸಂಕಷ್ಟವನ್ನು ಅನುಭವಿಸುವಂತಾಗಿದೆ.

ಆದ್ದರಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೂಡಲೇ ಜನ ವಿರೋಧಿಯಾದ ಆ ಆರ್ಥಿಕ ನೀತಿ ಜಾರಿ ಮಾಡುವುದನ್ನು ಕೈಬಿಟ್ಟು, ದೇಶದ ಆರ್ಥಿಕ ಬಿಕ್ಕಟ್ಟಿನ ನಿವಾರಣೆಗೆ ದೇಶದ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಿ ಬಲಗೊಳಿಸುವ ಪರ್ಯಾಯ ಜನಪರ ಅರ್ಥಿಕ ನೀತಿಗಳನ್ನು ಜಾರಿಗಳಿಸಬೇಕೆಂದು ಒತ್ತಾಯಿಸಿ ಸಿಪಿಐಎಂ ಬಲವಾಗಿ ಒತ್ತಾಯಿಸುತ್ತದೆ, ಮಾತ್ರವಲ್ಲಾ ದೇಶದಾದ್ಯಂತ ಜನತೆ ಜನಾಂದೋಲನದಲ್ಲಿ ತೊಡಗುವಂತೆ ಕರೆ ನೀಡಿದೆ. ರಾಜ್ಯದಲ್ಲಿ ಡಿಸೆಂಬರ್ ತಿಂಗಳಿಡೀ ವ್ಯಾಪಕವಾದ ಜನಾಂದೋಲನ ನಡೆಸಲು ನಿರ್ಧರಿಸಿದೆ.

ಜನರ ಪ್ರತಿಭಟನಾ ಹಕ್ಕಿನ ಮೇಲಿನ ದಾಳಿ_ನಿಷೇಧಾಜ್ಞೆ – ಸಿಪಿಐಎಂ ಖಂಡನೆ

ಕರ್ನಾಟಕ ಸರಕಾರ ರಾಜ್ಯದಾದ್ಯಂತ ಮೂರು ದಿನಗಳ ಕಾಲ ನಿಷೇಧಾಜ್ಞೆ ಹೇರುವ ಮೂಲಕ ಜನರ ಪ್ರತಿಭಟನಾ ಹಕ್ಕಿನ ಮೇಲೆ ಧಾಳಿ ನಡೆಸಿದೆಯೆಂದು ಭಾರತ ಕಮ್ಯುನಿಷ್ಠ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಸಂವಿಧಾನ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವದ ವಿರುದ್ದವಾದ ಜನ ವಿರೋಧಿ ತಿದ್ದುಪಡಿಯನ್ನು ಪೌರತ್ವ ಕಾಯ್ದೆಗೆ ಸೇರ್ಪಡೆ ಮಾಡುತ್ತದೆ. ಸದರಿ ಕಾಯ್ದೆಯ ಈ ಸಂವಿಧಾನ ವಿರೋಧಿ ಹಾಗೂ ಜಾತ್ಯತೀತ ಪ್ರಜಾಪ್ರಭುತ್ವದ ವಿರೋಧಿಯಾದ ಅಂಶಗಳನ್ನು ಕೂಡಲೇ ವಾಪಾಸು ಪಡೆಯಬೇಕೆಂದು ಒತ್ತಾಯಿಸಿ ನಡೆಯುವ ಎಡಪಕ್ಷಗಳ ಮತ್ತು ಪ್ರಜೆಗಳ ಹೋರಾಟವನ್ನು ಹತ್ತಿಕ್ಕಲು ಶ್ರೀ ಯಡಿಯೂರಪ್ಪನವರ ಸರಕಾರ ಸರ್ವಾಧಿಕಾರಿಯಂತೆ ಕ್ರಮ ವಹಿಸಿ ಜನತೆಯನ್ನು ಬೆದರಿಸುತ್ತದೆ. ಎಂದು ಸಿಪಿಐಎಂ ಕಟುವಾಗಿ ಟೀಕಿಸಿದೆ.

ಜನತೆ ಮತ್ತು ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳು ನಡೆಸುವ ಅವರ ಸಂವಿಧಾನಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಮತ್ತು ಶಾಂತ ರೀತಿಯ ಪ್ರತಿಭಟನ ಹಕ್ಕಿನ ಮೇಲಿನ ನಿಷೇಧಾಜ್ಞೆಯನ್ನು ಈ ಕೂಡಲೇ ವಾಪಾಸು ಪಡೆದು

ಪ್ರತಿಭಟನಾ ಹಕ್ಕನ್ನು ಎತ್ತಿ ಹಿಡಿಯಲು ಕ್ರಮವಹಿಸಬೇಕೆಂದು ರಾಜ್ಯದ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ನವರನ್ನು ಸಿಪಿಐಎಂ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಯು. ಬಸವರಾಜ
ರಾಜ್ಯ ಸಮಿತಿ ಕಾರ್ಯದರ್ಶಿ

NRC ಹಾಗೂ CAA ವಿರೋಧಿಸಿ ಸಿಪಿಐ(ಎಂ) ಪ್ರತಿಭಟನೆ ಮುಖಂಡರ ಬಂಧನ

ಸಂವಿಧಾನ ವಿರೋಧಿ, ವಿಭಜನಕಾರಿ ರಾಷ್ಟ್ರೀಯ ಪೌರರ ನೊಂದಣಿ ಹಾಗೂ ಪೌರತ್ವ ತಿದ್ದುಪಡಿ ಕಾನೂನು–2019 ಕೂಡಲೇ ರದ್ದಾಗಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮಂಡ್ಯ ಜಿಲ್ಲಾ ಸಮಿತಿ ಇಂದು ಪ್ರತಿಭಟನೆ ನಡೆಸುವ ಮೂಲಕ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ.

NRC ಹಾಗೂ CAA ಗಳನ್ನು ಹಿಂದೂ–ಮುಸ್ಲಿಂ ಸಮುದಾಯದ ಪ್ರಶ್ನೆಯೆಂಬಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಬಿಂಬಿಸುತ್ತಿದೆ. ಈ ಮೂಲಕ ನಮ್ಮ ಸಂವಿಧಾನದ ಧರ್ಮ ನಿರಪೇಕ್ಷ ಹಂದರವನ್ನು ನುಚ್ಚುನೂರು ಮಾಡುವ ದುರುದ್ದೇಶವನ್ನು ಜಗಜ್ಜಾಹೀರುಗೊಳಿಸಿದೆ. ಸ್ವತಃ ಪ್ರಧಾನ ಮಂತ್ರಿಯವರೇ, ತನ್ನ ಹುದ್ದೆಯ ಘನತೆಯನ್ನು ಮರೆತು, ಪ್ರತಿಭಟನಾನಿರತರನ್ನು ಬಟ್ಟೆ ಮೇಲೆ ಗುರುತಿಸಬಹುದು ಎಂದು ಬಾಲಿಶ ಹೇಳಿಕೆ ನೀಡಿದ್ದಾರೆ.

ಭಾರತೀಯರನ್ನು ಧರ್ಮದ ಆಧಾರದ ಮೇಲೆ ವಿಭಜಿಸುವುದು ಆತಂಕಕಾರಿಯಾದುದ್ದು ಎಂದು ಸಿಪಿಐಎಂ ಮಂಡ್ಯ ಜಿಲ್ಲಾ ಸಮಿತಿ ಟೀಕಿಸಿದೆ.

ಪೌರತ್ವ ತಿದ್ದುಪಡಿ ಕಾನೂನು ನಮ್ಮ ಸಂವಿಧಾನದ ಮೂಲಭೂತ ರಚನೆಯನ್ನು ಉಲ್ಲಂಘಿಸುತ್ತದೆ ಹಾಗೂ ನಮ್ಮ ದೇಶದ ಸಾಮಾಜಿಕ ಹಂದರಕ್ಕೂ ಗಂಭೀರವಾದ ಅಪಾಯವನ್ನು ಒಡ್ಡುತ್ತಿದೆ. 1955 ರ ಪೌರತ್ವ ಕಾಯ್ದೆಯಲ್ಲಿದ್ದ ಸಂವಿಧಾನದ ಅಂಶಗಳನ್ನು ತೆಗೆದು ತಿದ್ದುಪಡಿ ಆಗಿರುವ ಈ ಕಾನೂನು ಪೌರತ್ವ ನೀಡಲು ಧರ್ಮವನ್ನು ಆಧಾರವಾಗಿ ಇರಿಸಿದೆ ಹಾಗೂ ನಿರಾಶ್ರಿತರು ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನ ದಿಂದ ಮಾತ್ರ ಬಂದವರಾಗಿರಬೇಕು ಎಂಬ ಅಂಶಗಳನ್ನು ಒಳಗೊಂಡಿದೆ. ಇದು ನಮ್ಮ ಸಂವಿಧಾನದ ಆತ್ಮವಾದ ಧರ್ಮ ನಿರಪೇಕ್ಷತೆ, ಸಮಾನತೆ ತತ್ವಗಳಿಗೆ ವಿರುದ್ದವಾದುದ್ದು ಎಂದು ಸಿಪಿಐಎಂ ಅಭಿಪ್ರಾಯ ಪಡುತ್ತದೆ.

ಧರ್ಮದ ಆಧಾರದಲ್ಲಿ, ದೇಶಗಳ ಆಧಾರದಲ್ಲಿ ತಾರತಮ್ಯ ಎಸಗುವುದು ಹಾಗೂ ನಿರ್ದಿಷ್ಟ ಬಗೆಯ ದೌರ್ಜನ್ಯಕ್ಕೆ ಒಳಗಾಗಿದ್ದರೆ ಮಾತ್ರ ಪೌರತ್ವ ನೀಡಲಾಗುವುದು ಎಂದು ಘೋಷಿಸುವ ಈ ಕಾನೂನು, ಸದುದ್ದೇಶ ಹಾಗೂ ಮಾನವೀಯತೆ ಯಿಂದ ಕೂಡಿರದೇ ಭಾರತ ದೇಶದ ಹೆಗ್ಗುರುತಾದ ವಿವಿಧತೆಯಲ್ಲಿ ಏಕತೆಯನ್ನು, ಕೋಮು ಸಾಮರಸ್ಯವನ್ನು ಹಾಳುಗೆಡವಿ ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಹೀನ ಪ್ರಯತ್ನ ಎಂದು ಸಿಪಿಐ(ಎಂ) ಕಟುವಾಗಿ ಖಂಡಿಸುತ್ತದೆ.

ಕಪ್ಪು ಹಣ, ಖೋಟಾನೋಟು ಪತ್ತೆಗೆ ಇಡೀ ದೇಶದ ಚಲಾವಣೆಯಲ್ಲಿದ್ದ ನಗದು ಹಣವನ್ನು ರದ್ದು ಮಾಡಿದ ರೀತಿಯಲ್ಲೇ ಅಕ್ರಮ ನಿವಾಸಿಗಳನ್ನು ಪತ್ತೆ ಮಾಡಲು ಇಡೀ ದೇಶದ ಪೌರರ ಪೌರತ್ವ ವನ್ನೇ NRC ಮತ್ತು CAA ಕಾನೂನುಗಳ ಮೂಲಕ ರದ್ದುಗೊಳಿಸಿದೆ.

1971 ಕ್ಕಿಂತ ಮುಂಚಿನ ದಾಖಲೆಗಳ ಆಧಾರದಲ್ಲಿ ಭಾರತೀಯರೆಲ್ಲರೂ ಪೌರತ್ವ ಸಾಬೀತು ಮಾಡಬೇಕಾಗಿರುವುದು ಪ್ರದೇಶದಿಂದ ಪ್ರದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ವಸತಿಹೀನರು, ಕಾರ್ಮಿಕರು ಸೇರಿದಂತೆ ಬಹುತೇಕ ಬಡವರು ತಮ್ಮದಲ್ಲದ ತಪ್ಪಿಗೆ ಅಪಾರ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಇದು ದೇಶದಲ್ಲಿ ದೊಡ್ಡ ಅರಾಜಕತೆಗೆ ಕಾರಣವಾಗಲಿದೆ ಎಂದು ಸಿಪಿಐಎಂ ಆತಂಕ ವ್ಯಕ್ತಪಡಿಸುತ್ತದೆ.

ಪ್ರತಿಭಟನೆಯಲ್ಲಿ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎಂ. ಪುಟ್ಟಮಾದು, ಮುಖಂಡರುಗಳಾದ ಟಿ. ಯಶವಂತ, ಸಿ. ಕುಮಾರಿ, ಟಿ.ಎಲ್. ಕೃಷ್ಣೇಗೌಡ, ದೇವಿ, ಜಿ.ರಾಮಕೃಷ್ಣ, ಎನ್.ಎಲ್. ಭರತ್‌ರಾಜ್, ಶೋಭ, ಹನುಮೇಶ್ ಬಿ. ಬಸವರಾಜ್ ಮುಂತಾದವರು ಇದ್ದರು. ನಿಷೇದಾಜ್ಞೆ ಉಲ್ಲಂಘನೆ ಆರೋಪದ ಮೇಲೆ ಸಿಪಿಐಎಂ ಕಾರ್ಯಕರ್ತರನ್ನು ಬಂಧನಕ್ಕೆ ಒಳಪಡಿಸಲಾಗಿದೆ.

ಬಂಧಿತ ಮುಖಂಡರುಗಳು ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎಂ. ಪುಟ್ಟಮಾದು, ಜಿಲ್ಲಾ ಸಮಿತಿ ಸದಸ್ಯರಾದ ಟಿ.ಯಶವಂತ, ಟಿ.ಎಲ್. ಕೃಷ್ಣೇಗೌಡ, ಸಿ.ಕುಮಾರಿ, ದೇವಿ, ಜಿ.ರಾಮಕೃಷ್ಣ, ಶೋಭ, ಬಸವರಾಜ್, ಮುಖಂಡರು ಗಳಾದ ಟಿ.ಹೆಚ್. ಆನಂದ್, ಸುರೇಂದ್ರ, ತಿಮ್ಮೇಗೌಡ, ಮಹದೇವಮ್ಮ, ಲತಾ, ಚಂದ್ರಮ್ಮ, ಶಂಕರ್, ಜನಶಕ್ತಿಯ ಪೂರ್ಣಿಮ ಸೇರಿದ್ದಾರೆ.

ಅಕ್ಷರ ದಾಸೋಹ ಯೋಜನೆಯ ಖಾಸಗೀಕರಣ ವಿರೋಧಿಸಿ ಕನಿಷ್ಟ ವೇತನಕ್ಕಾಗಿ ಒತ್ತಾಯಿಸಿ ಡಿ.26 ರಿಂದ ಬಿಸಿಯೂಟ ನೌಕರರ ಅನಿರ್ದಿಷ್ಟ ಹೋರಾಟ

ಇಂದು ಭಾರತ ದೇಶ ಹಸಿವಿನ ಸೂಚ್ಯಂಕದಲ್ಲಿ 117 ದೇಶಗಳಲ್ಲಿ 112 ನೇ ಸ್ಥಾನವನ್ನು ಹೊಂದಿದೆ. ಮಾತ್ರವಲ್ಲ ಪಿರಿಯಾಡಿಕಲ್ ಲೇಬರ್ ಫೋರ್ಸ್ ಸರ್ವೆ 2017–18 ರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದ ಮಹಿಳೆಯರ ನಿರುದ್ಯೋಗ ಹೆಚ್ಚಾಗುತ್ತಿದೆ. ಮಾತ್ರವಲ್ಲದೇ ಇದೇ ಸರ್ವೆ ಪ್ರಕಾರ ಹಂಗಾಮಿ ಕಾರ್ಮಿಕರ ಸಂಖ್ಯೆಯು ಕೂಡಾ ಹೆಚ್ಚಾಗುತ್ತಿದೆ. ಇಂತಹ ಪರಿಸ್ಥಿತಿಗೆ ಮುಖ್ಯ ಕಾರಣವಾಗಿದ್ದು ಸರ್ಕಾರಗಳು ಕಲ್ಯಾಣ ಕಾರ್ಯಕ್ರಮಗಳನ್ನು ಸಂಪೂರ್ಣ ಸುಧಾರಿಸುವ ಬದಲು ಸುಧಾರಣೆಯ ಭಾಗವಾಗಿ ಯೋಜನೆಗಳ ರೂಪದಲ್ಲಿ ತರುವುದು. ಅಂತಹ ಒಂದು ಯೋಜನೆ 2001–02 ರಲ್ಲಿ ಬಂದದ್ದು ಅಕ್ಷರ ದಾಸೋಹ ಯೋಜನೆ. ಈ ಯೋಜನೆ ಅಕ್ಷರ ಕಲಿಯಲು ಬರುವ ಬಡತನದಲ್ಲಿಯೇ ಹುಟ್ಟಿ ಹಸಿವಿನಿಂದ ಬರುವ ಕಂದಮ್ಮನಿಗೆ ಅನ್ನನೀಡುವ ಕಾರ್ಯಕ್ರಮ. ನಮ್ಮ ಸರ್ಕಾರಗಳು ಅನ್ನ ನೀಡಬೇಕು ಎನ್ನುತ್ತದೆ ಹೊರತು ಅನ್ನ ತಯಾರು ಮಾಡುವ ತಾಯಂದಿರ ಅನ್ನದ ಬಗ್ಗೆ ಮಾತನಾಡದೇ ಕ್ರೌರ್ಯವನ್ನು ಮೆರೆಯುತ್ತವೆ. ಮಾತ್ರವಲ್ಲದೇ ದಿನಕ್ಕೆ 6 ಗಂಟೆಗಿಂತ ಹೆಚ್ಚು ದುಡಿಸಿಕೊಂಡು ಕಡಿಮೆ ಅವಧಿಯನ್ನು ನೋಡಿಸುತ್ತದೆ. ಮಾದರಿಯಾಗಬೇಕಾದ ಸರ್ಕಾರವೇ ಇಂದು ಖಾಸಗಿ ಮಾಲೀಕನಿಗಿಂತ ಹೆಚ್ಚಿನ ದರ್ಪವನ್ನು ನೋಡಿಸುತ್ತಿದೆ. ಹೇಗೆಂದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ.

2012 ಭಾರತೀಯ ಕಾರ್ಮಿಕ ಸಮ್ಮೇಳನ ಇವರನ್ನು ಕಾರ್ಮಿಕರೆಂದು ಪರಿಗಣಿಸಿ, ಕನಿಷ್ಠ ವೇತನ ನಿಗದಿ ಪಡಿಸಬೇಕೆಂದೂ ಹೇಳಿದೆ. 7 ನೇ ವೇತನ ಆಯೋಗ 18 ಸಾವಿರಕ್ಕಿಂತ ಕಡಿಮೆ ಯಾರನ್ನು ದುಡಿಸಬಾರದೆಂದು ಹೇಳಿದೆ. 1948 ಕನಿಷ್ಠ ವೇತನ ಕಾಯ್ದೆ ಕನಿಷ್ಠವೇತನಕ್ಕಿಂತ ಕಡಿಮೆ ಯಾರನ್ನು ದುಡಿಸಬಾರದೆಂದು ಹೇಳಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳು 21 ಸಾವಿರ ಕನಿಷ್ಠವೇತನ ನೀಡಬೇಕೆಂದು ಒತ್ತಾಯಿಸುತ್ತದೆ.

ಈ ಯೋಜನೆ ಕೇಂದ್ರ ಸರ್ಕಾರದ್ದೆ ಆದರೂ ಕೂಡಾ ಕೇಂದ್ರ ಸರ್ಕಾರ ಬಿಸಿಯೂಟ ನೌಕರರಿಗೆ 10 ವರ್ಷಗಳಿಂದಲೂ 10 ಪೈಸೆಯನ್ನೂ ಕೂಡಾ ಹೆಚ್ಚಳ ಮಾಡಲಿಲ್ಲ. ಬದಲಿಗೆ ಅನುದಾನವನ್ನು ಕಡಿತ ಮಾಡಿ ಈ ಯೋಜನೆಯನ್ನು ಕೇಂದ್ರೀಕೃತ ಅಡುಗೆ ಕೇಂದ್ರಗಳನ್ನಾಗಿ ಮಾಡಲು ಶಿಫಾರಸ್ಸು ಮಾಡಿದೆ. ಈಗಾಗಲೇ ಮಂಡ್ಯ–ಮೈಸೂರು ಜಿಲ್ಲೆಯಲ್ಲಿ ಅಕ್ಷಯಪಾತ್ರೆ ಫೌಂಡೇಷನ್ ಸಂಸ್ಥೆಯಿಂದ ಬಿಸಿಯೂಟ ನೀಡಲು ಚಿಂತನೆ ನಡೆಸಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಈ ಯೋಜನೆ ಖಾಸಗಿ ಸಂಘ ಸಂಸ್ಥೆಗಳಿಗೆ ಕೊಡುವ ಬಗ್ಗೆ ಸರ್ಕಾರ ಬಹಳಷ್ಟು ಆಸಕ್ತಿ ತೋರಿಸುತ್ತಿದೆ. ಕಳೆದ 18–19 ವರ್ಷದ ನಿಸ್ವಾರ್ಥ ಸೇವೆಯನ್ನು ಮಾಡಿ ಯೋಜನೆಯನ್ನು ಯಶಸ್ವಿಯತ್ತ ನಡೆಸುತ್ತಿದ್ದರೂ ಕೂಡಾ ಈ ರೀತಿಯ ಖಾಸಗೀಕರಣ ಕಡೆ ಗಮನ ಹರಿಸಿ ಮಹಿಳೆಯರನ್ನು ಬೀದಿ ಪಾಲು ಮಾಡಲು ಹೊರಟಿದೆ. ಇಂತಹ ಖಾಸಗೀಕರಣದ ವಿರುದ್ದ ನಮ್ಮ ಹೋರಾಟ ತೀವ್ರಗೊಳಿಸಬೇಕಿದೆ. ಕೆಲಸದ ಭದ್ರತೆ, ಸೇವಾ ನಿಯಮಾವಳಿ ಹಾಗೂ ಕನಿಷ್ಠಕೂಲಿ 21000 ರೂ. ಹಾಗೂ ನಿವೃತ್ತಿ ವೇತನಕ್ಕಾಗಿ ಒತ್ತಾಯಿಸಿ **ಡಿಸೆಂಬರ್ 26 ರಿಂದ ಅನಿರ್ದಿಷ್ಟ ಹೋರಾಟವನ್ನು ಬೆಂಗಳೂರಿನಲ್ಲಿ ನಡೆಸಲಾಗುತ್ತದೆ.**

ಎಂ.ಬಿ. ಪುಷ್ಪ

ದಾವಣಗೆರೆ : ಗ್ರಾಮ ಪಂಚಾಯತಿ ನೌಕರರ ಪ್ರತಿಭಟನೆ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ಸಿಐಟಿಯು ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ನೌಕರರ ವಿವಿದ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ದಾವಣಗೆರೆ ಜಿಲ್ಲಾ ಪಂಚಾಯತಿ ಆವರಣದಲ್ಲಿ ಬೃಹತ್ ಪ್ರತಿಭಟನೆ ಮಾಡಲಾಯಿತು ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ನೌಕರರ ಸಂಘದ ರಾಜ್ಯ ಖಜಾಂಚಿ ಬಸವರಾಜ ಜಿಲ್ಲಾ ಅದ್ಯಕ್ಷರಾದ ಕೈದಾಳೆ ಉಮೇಶ್ ಎಸ್‌ಎಫ್ಐ ಜಿಲ್ಲಾ ಅದ್ಯಕ್ಷ ಮಹಾಲಿಂಗಪ್ಪ ಸಿಐಟಿಯು ಜಿಲ್ಲಾ ಅದ್ಯಕ್ಷ ಆನಂದರಾಜ್ ಶ್ರೀನಿವಾಸ ಮೂರ್ತಿ ಮುಂತಾದವರು ಹಾಜರಿದ್ದರು.







16 ಡಿಸೆಂಬರ್ 2019 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (JMS) ರಾಜ್ಯ ಸಮಿತಿಯ ವತಿಯಿಂದ ವಿಧಾನ ಸೌಧ ಚಲೋ ನಡೆಸಲಾಯಿತು.



ಕೃಷಿ ಕೂಲಿಕಾರರ ಸಂಘ ಮತ್ತು ಪ್ರಗತಿ ಪರ ಸಂಘಟನೆಗಳಿಂದ ಮಾನವ ಸರಪಳಿ ಹಾಗೂ ಪ್ರತಿಭಟನೆ

NRC_CAA ರಾಷ್ಟ್ರೀಯ ಪೌರತ್ವ ಕಾಯಿದೆ ಹಿಂಪಡೆಯಲು ಒತ್ತಾಯಿಸಿ 15 ಡಿಸೆಂಬರ್ 2019 ರಂದು ಕಲಬುರಗಿಯ ಅಂಬೇಡ್ಕರ್ ಸರ್ಕಲ್ ಬಳಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಪ್ರಗತಿ ಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮಾನವ ಸರಪಳಿ ಹಾಗೂ ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿ ಗಳ ಮೂಲಕ ಮಾನ್ಯ ರಾಷ್ಟ್ರಪತಿ ರವರಿಗೆ ಮನವಿ ಸಲ್ಲಿಸಲಾಯಿತು. ಕೂಲಿಕಾರರ ಸಂಘದ ಮುಖಂಡರಾದ ನಿತ್ಯಾನಂದಸ್ವಾಮಿ, ಭೀಮಶೆಟ್ಟಿ ಯಂಪಳ್ಳಿ, ಚಂದ್ರಪ್ಪ ಪೂಜಾರಿ, ಕೆ. ಹನುಮೇಗೌಡ, ಕಾಶೀನಾಥ ಅಂಬಲಗೆ, ಶ್ರೀಮಂತ ಬಿರಾದಾರ್, ವಿರೂಪಾಕ್ಷಿ ತಡಕಲ್, ಶರಣಬಸಪ್ಪ ಮಮಶೆಟ್ಟಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನವಲಿತಾಂಡ ಆಶ್ರಮ ಶಾಲೆಗೆ ಸಮಾಜ ಕಲ್ಯಾಣ ಇಲಾಖೆ ಸಹಾಯ ನಿರ್ದೇಶಕ ಹಾಗೂ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಭೇಟಿ

ಇತ್ತೀಚೆಗೆ ನವಲಿತಾಂಡ ಆಶ್ರಮ ಶಾಲೆಗೆ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಅಮರೇಶ ಕಡಗದ ಹಾಗೂ ಶಿವುಕುಮಾರ, ಹನುಮೇಶ, ಶಿವು ಭೇಟಿ ಕೊಟ್ಟು ಆಶ್ರಮ ಶಾಲೆಯಲ್ಲಿ ಓದುತ್ತಿರುವ 1 ರಿಂದ 5 ನೇ ತರಗತಿಯ ಮಕ್ಕಳಿಗೆ ಸರಕಾರದ ಸೌಲಭ್ಯಗಳು ಮಕ್ಕಳಿಗೆ ಸರಿಯಾಗಿ ಮುಟ್ಟತ್ತ ಇದ್ದವು ಇಲ್ಲವೆ ಕುರಿತು ವಿದ್ಯಾರ್ಥಿಗಳ ಜೋತೆ ಚರ್ಚೆಮಾಡಿ ತುಂಬಾ ಚಿಕ್ಕ ವಯಸ್ಸಿನ ಮಕ್ಕಳು ಇದ್ದರು ಈ ಚಳಿಗಾಲದಲ್ಲಿ ಮಕ್ಕಳಿಗೆ ಸ್ನಾನಕ್ಕೆ ಬೀಸಿ ನೀರಿನ ವ್ಯವಸ್ಥೆ ಇಲ್ಲದಿರುವುದು, ಶೌಚಾಲಯಕ್ಕೆ ಹೆಣ್ಣು ಮಕ್ಕಳು ಮತ್ತು ಹುಡುಗರು ಹೊರಗಡೆ ಹೋಗಬೇಕು, ಸರಕಾರದ ನಿಯಮ ಪ್ರಕಾರ ಊಟದ ಮೇನುಚಾರ್ಟ ಇಲ್ಲ, ವಿದ್ಯಾರ್ಥಿಗಳಿಗೆ, ವಾರಕ್ಕೆ 3 ಮೊಟ್ಟೆ 3 ಬಾಳೆಹಣ್ಣು ಕೊಡವ ಬದಲು ಕೇವಲ ಒಂದು ಮೊಟ್ಟೆ ಒಂದು ಬಾಳೆಹಣ್ಣು ಕೊಡುತ್ತಿದ್ದರು, ವಾರಕ್ಕೆ ಒಮ್ಮೆ ಕೊಡಬೇಕಾದ ಸಿಹಿ ಊಟವನ್ನು ಅಮಾವಾಸ್ಯೆ ಮತ್ತು ಹುಣ್ಣುಮೆಗೆ ಮಾತ್ರ ಕೊಡುತ್ತಿರುವ ವಿಷಯವನ್ನು ಹಾಗೂ ಮೂಲಭೂತ ಸೌಲಭ್ಯಗಳ ಸಮಸ್ಯೆಗಳ ಕುರಿತು ದಿನಾಂಕ 10/12/2019 ರಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಅಮರೇಶ ಕಡಗದ ಹಾಗೂ ಇತರರು ದೂರ ನೀಡಿದ ಹಿನ್ನೆಲೆಯಲ್ಲಿ CEO ಮತ್ತು ಸಮಾಜ ಕಲ್ಯಾಣ ಇಲಾಖೆಯ ಉಪಾನಿರ್ದೇಶಕ ರವರ ಆದೇಶದ ಮೇರೆಗೆ ಇಂದು ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಪರಸಪ್ಪ ಆಶ್ರಮ ಶಾಲೆಗೆ ಭೇಟಿ ನೀಡಿ ಕಟ್ಟಡ ಹಾಗೂ ಶೌಚಾಲಯ ಸಮಸ್ಯೆ ಕುರಿತು ಬಗೆಹರಿಸಲು ವಾರ್ಡನಗೆ ಸೂಚಿನೆ ಕೊಟ್ಟು ನಂತರ ಊಟದ ಮೇನು ಚಾರ್ಟ್ ಬಗ್ಗೆ ಜಿಲ್ಲಾ ಉಪಾನಿರ್ದೇಶಕರ ಜೊತೆ ಚರ್ಚೆಮಾಡಿ ಪೈನಲ್ ಮಾಡುತ್ತವೆ ಮತ್ತು ಹಾಸ್ಟಲ್‌ನಿಂದ ಮಕ್ಕಳು ಬಳಕೆ ಮಾಡಿದ ನೀರು ಹೋರಗಡೆ ಹೋಗಲು ದಾರಿ ಇರದ ಕಾರಣ ಸಮಸ್ಯೆ ಆಗಿದ್ದು ಮೇಲಿನ ಅಧಿಕಾರಿಗಳಿಗೆ ವರದಿ ಕಳುಹಿಸುತ್ತನೆ ಎಂದರು.

ಪೌರತ್ವ ತಿದ್ದುಪಡಿ ಮಸೂದೆ 2019 ನ್ನು ತಿರಸ್ಕರಿಸಲು ಎಸ್‌ಎಫ್‌ಐ-ಡಿವೈಎಫ್‌ಐ ಒತ್ತಾಯ



ಲೋಕಸಭೆ, ರಾಜ್ಯಸಭೆಗಳಲ್ಲಿ ಮಂಜೂರು ಮಾಡಿದ ಪೌರತ್ವ (ತಿದ್ದುಪಡಿ) ಕಾಯ್ದೆ 2019 (Citizens (Amendment) Act-2019 CAA) ನ್ನು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್‌ಐ) ಸಂಘಟನೆಗಳು ಬಲವಾಗಿ ವಿರೋಧಿಸುತ್ತವೆ.

ಈ ಮಸೂದೆ ದೇಶದ ಪೌರತ್ವ (ಅಥವಾ ನಾಗರಿಕತ್ವ) ವನ್ನು ಮತಧರ್ಮದ ಆಧಾರದ ಮೇಲೆ ನಿರ್ಧರಿಸುತ್ತಿರುವುದು ಖಂಡನೀಯ. ಭಾರತ ಸಮಾನವಾಗಿ ಎಲ್ಲಾ ಮತಧರ್ಮಗಳ ಮತ್ತು ಎಲ್ಲಾ ಪ್ರದೇಶಗಳ ಜನರ ದೇಶ. ಆದ್ದರಿಂದ ಭಾರತ ಅವರೆಲ್ಲರನ್ನೂ ಸಮಾನವಾಗಿ ಕಾಣಬೇಕು.

ವಿಪರೀತ ತಾರತಮ್ಯ ತೋರುವ ಈ ಮಸೂದೆಯನ್ನು ಲೋಕಸಭೆ ಭಾರೀ ಬಹುಮತದಿಂದ ಹಾಗೂ ರಾಜ್ಯ ಸಭೆಯಲ್ಲಿಯೂ ಕೂಡ ಮಂಜೂರು ಮಾಡಿವೆ. ಆದರೆ, ಇದರ ವಿರುದ್ಧ ತೀವ್ರ ಅತೃಪ್ತಿ ಹೊಗೆಯಾಡುತ್ತಿದೆ. ಈ ಮಸೂದೆಯನ್ನು ಲೋಕಸಭೆ, ರಾಜ್ಯ ಸಭೆಯಲ್ಲಿ ಮಂಜೂರು ಮಾಡುತ್ತಿರುವಾಗ, ಈಶಾನ್ಯ ಭಾರತದ ವಿದ್ಯಾರ್ಥಿಗಳು 11 ಗಂಟೆಗಳ ಬಂದ್ ಆಚರಿಸುತ್ತಿದ್ದರು. ದೇಶವ್ಯಾಪಿ ಪ್ರತಿಭಟನೆಗಳು ನಡೆಯುತ್ತಿವೆ. ಈ ಮಸೂದೆಯು ನೆರೆಯ ಮೂರು ದೇಶಗಳ ಮುಸ್ಲಿಮರನ್ನು ನಮ್ಮ ದೇಶದ ಪೌರತ್ವಕ್ಕೆ ಅರ್ಜಿ ಸಲ್ಲಿಸುವುದರಿಂದ ಹೊರಗಿಡುತ್ತದೆ ಮಾತ್ರವಲ್ಲ, ಪೌರತ್ವದ ದಾಖಲೆಗಳನ್ನು ಒದಗಿಸಲಾಗದ ಭಾರತೀಯ ಮುಸ್ಲಿಮರ ಪೌರತ್ವವನ್ನು ರದ್ದುಗೊಳಿಸಿ ಕ್ಯಾಂಪ್ ಗಳಿಗೆ ತಳ್ಳುತ್ತದೆ. ಭಾರತದ ಪೌರತ್ವಕ್ಕೆ ಮತಧರ್ಮದ ಪರೀಕ್ಷೆ ಒಡ್ಡಿರುವುದರಿಂದ ಈ ಮಸೂದೆ, ನಮ್ಮ ದೇಶದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾಗಿರುವ ಸಮಾನತೆ ಮತ್ತು ಸೆಕ್ಯುಲರಿಸಂ ಗಳ ನೀತಿಗಳನ್ನು ಉಲ್ಲಂಘಿಸುತ್ತದೆ. ಪೌರತ್ವ ದಾಖಲಾತಿಯನ್ನು (ಒಖಲಅ) ದೇಶದಾದ್ಯಂತ ನಡೆಸುವುದೆ ರಾಜಕೀಯ ದುರುದ್ದೇಶಕ್ಕಾಗಿ. ಈಗ ಅದಕ್ಕೆ ತಿದ್ದುಪಡಿ ಮಸೂದೆಯ ಮೂಲಕ ಮತ್ತಷ್ಟು ಕೋರೆ ಹಲ್ಲುಗಳನ್ನು ಒದಗಿಸಿದೆ. ಇದು ಮುಸಲ್ಮಾನರಲ್ಲಿ ದಾಖಲೆ ಒದಗಿಸಲಾಗದಿದ್ದರೆ ನಾಗರಿಕ ಹಕ್ಕುಗಳನ್ನು ಕಳೆದುಕೊಳ್ಳುವ ಭೀತಿಯನ್ನು ಸೃಷ್ಟಿಸಿದರೆ, ಕೇಂದ್ರ ಸರಕಾರ ಕೇಳುವ ದಾಖಲೆ ಒದಗಿಸಲು ನೂರ ಮೂವತ್ತು ಕೋಟಿ ನಾಗರಿಕರೂ ಧರ್ಮ ಭೇದವಿಲ್ಲದೆ ತೀವ್ರ ಸಂಕಷ್ಟಗಳಿಗೆ ಗುರಿಯಾಗ ಬೇಕಾಗುತ್ತದೆ. ದಾಖಲೆಗಳು ಹೊಂದಿಲ್ಲದ ಆದಿವಾಸಿಗಳು, ಅಲೆಮಾರಿಗಳು, ಬಡವರು ಪೌರತ್ವ ಪಡೆಯಲು ಅಪಾರ ವೇದನೆಗೆ ಗುರಿಯಾಗಬೇಕಾಗುತ್ತದೆ. ಒಟ್ಟಾರೆ ಬಿಜೆಪಿ ಸರ್ಕಾರ ತನ್ನ ಆಡಳಿತ ವೈಫಲ್ಯಗಳಿಂದ ಸೃಷ್ಟಿಯಾಗುತ್ತಿರುವ ಜನಾಕ್ರೋಶದ ದಿಕ್ಕನ್ನು ತಪ್ಪಿಸಲು ಈ ಕಾಯ್ದೆಯನ್ನು ಮುಂದಕ್ಕೆ ತಂದಿದೆ. ಇದು ಬಿಜೆಪಿಯ ಒಡೆದಾಳುವ ನೀತಿಯ ಮುಂದುವರಿದ ಭಾಗ.

ಭಾರತವು, ಮ್ಯಾನ್ಮಾರ್ ನಲ್ಲಿ ತೀವ್ರ ಕಿರುಕುಳ ಮತ್ತು ದಮನಕಾರಿ ಹಿಂಸೆಗಳನ್ನು ಎದುರಿಸುತ್ತಿರುವ ರೊಹಿಂಗ್ಯನ್ ಮುಸ್ಲಿಂ ನಿರಾಶ್ರಿತರ ಆಗಮನವನ್ನು ಎದುರಿಸುತ್ತಿದೆ. ಅವರ ಬಳಿ ವಿಶ್ವಸಂಸ್ಥೆಯ ಮಾನ್ಯತೆ ಪಡೆದ ನಿರಾಶ್ರಿತ ಕಾರ್ಡು ಇದ್ದರೂ ಭಾರತ ಸರಕಾರ ಅವರನ್ನು ದೇಶದಿಂದ ಹೊರದಬ್ಬಲು ಪ್ರಯತ್ನಿಸುತ್ತಿದೆ. ಈ ಕ್ರಮವನ್ನು ಈ ಮಸೂದೆ ಕಾನೂನುಬದ್ಧಗೊಳಿಸುತ್ತದೆ. ಮತ, ಧರ್ಮದ ಮೇಲೆ ದೇಶವನ್ನು ವಿಭಜಿಸುವುದನ್ನು ಎಸ್‌ಎಫ್‌ಐ-ಡಿವೈಎಫ್‌ಐ ಸಂಘಟನೆಗಳು ಒಪ್ಪುವುದಿಲ್ಲ. ಅಲ್ಲದೇ ಪಾರ್ಲಿಮೆಂಟು ಮಂಜೂರು ಮಾಡಿದ ಈ ಭೀಕರ ಕಾಯ್ದೆಯನ್ನು ತಿರಸ್ಕರಿಸಲು ಹಾಗೂ ಅದನ್ನು ವಾಪಸು ಪಡೆಯಬೇಕೆಂದು ಎಸ್‌ಎಫ್‌ಐ-ಡಿವೈಎಫ್‌ಐ ಲಿಂಗಸ್ಗೂರು ತಾಲೂಕು ಸಮಿತಿಗಳು ಒತ್ತಾಯಿಸುತ್ತವೆ.

ರಮೇಶ ವೀರಾಪೂರು

ಕಿಚ್ಚಿಲ್ಲದ ಬೇಗೆಯ 'ಕುದಿ ಎಸರು' – ಗೀತಾ ವಸಂತ

ಅಭಿನಂದನೆಗಳು ಡಾ.ವಿಜಯಮ್ಮ ಅವರಿಗೆ....

ಅಮ್ಮನ 'ಆತ್ಮ ಚರಿತ್ರೆ' 'ಕುದಿ ಎಸರು'ಗೆ 2019ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದೆ. ಈ ಸಂದರ್ಭದಲ್ಲಿ ಅವರ ಪುಸ್ತಕ ಪ್ರಕಟವಾದಾಗ ಗೀತಾ ವಸಂತ ಅವರು 'ಏನ್ ಸುದ್ದಿ.ಕಾಂ' ವೆಬ್ ಪತ್ರಿಕೆಯ ತಮ್ಮ 'ಸಖೀಗೀತ' ಕಾಲಂನಲ್ಲಿ ಬರೆದ ಪುಸ್ತಕದ ವಿಮರ್ಶೆಯ ಆಯ್ದ ಭಾಗ.

(ಕೃಪೆ: ಏನ್ ಸುದ್ದಿ. ಕಾಂ ವೆಬ್ ಪತ್ರಿಕೆ)

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ
ಸುಖವಿಲ್ಲದೆ ಧಾವತಿಗೊಂಡೆನವ್ವಾ

ಎನ್ನುವ ಅಕ್ಕಮಹಾದೇವಿಯ ಆರ್ತಮೊರೆ ಕಾಲಚಕ್ರದಲ್ಲಿ ಉರುಳುತ್ತಾ ಇಂದಿಗೂ ಹೆಣ್ಣಿನ ತಪ್ತ ಹೃದಯಗಳಲ್ಲಿ ಮಾರ್ದನಿಸುತ್ತಲೇ ಇರುವುದು ಕಾಲದ ವ್ಯಂಗ್ಯ.

.. .. ..

ಅನುಭವದ ಸಂಕೀರ್ಣತೆ ಹಾಗೂ ಸಮಗ್ರತೆಗಳ ಅರಿವಿಲ್ಲದಿದ್ದರೆ ಆತ್ಮಕಥಾನಕ ಒಂದೋ ಗೋಳುತೊಡಿಕೊಳ್ಳುವಿಕೆ ಯಾಗುತ್ತದೆ ಅಥವಾ ಪಾರ್ಶ್ವಿಕ ನೋಟದಿಂದ ಕಂಡ ಪೂರ್ವಗ್ರಹಗಳ ನಿರೂಪಣೆಯಾಗಿಬಿಡುತ್ತದೆ. ವಿಜಯಮ್ಮ ಹೆಜ್ಜೆಹೆಜ್ಜೆಗೆ ಹಾಗಾಗಬಾರದೆಂಬ ಎಚ್ಚರ ಇರಿಸಿಕೊಳ್ಳುತ್ತಾರೆ. ತಮ್ಮೊಳಗೇ ತಾವು ಮೈಮರೆಯದಂತೆ ಪ್ರಜ್ಞೆಯನ್ನು ತಟ್ಟಿ ಎಚ್ಚರಿಸಿಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ಬರುವ ಯಾವುದೇ ಮನುಷ್ಯರು ಬ್ಲಾಕ್ ಆಂಡ್ ವೈಟ್‌ನಲ್ಲಿ ಮೂಡಿಲ್ಲ. ಯಾವ ಸಂದರ್ಭ, ಘಟನೆಗಳ ಬಗ್ಗೆಯೂ ಇಲ್ಲಿ ತೀರ್ಮಾನದ ಮಾತುಗಳಿಲ್ಲ. ಅವುಗಳನ್ನು ಇನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಬಹುದಿತ್ತೇನೋ, ನಿರ್ವಹಿಸಬಹುದಿತ್ತೇನೋ ಎಂಬ ಪ್ರಾಮಾಣಿಕ ಆತ್ಮವಿಮರ್ಶೆ ಅಲ್ಲಲ್ಲಿ ರಿಂಗಣಿಸುತ್ತ ಹೋಗುತ್ತದೆ. ವ್ಯಕ್ತಿ ಏಕೆ ಕ್ರೂರಿಯಾಗುತ್ತಾನೆ? ಅವನಲ್ಲಿ ಹಿಂಸೆ ಹೇಗೆ ಮೊಳೆಯುತ್ತದೆ? ಎಂದೆಲ್ಲ ಆಳಕ್ಕಿಳಿದು ಮನಃಶ್ಶಾಸ್ತ್ರೀಯ ನೆಲೆಯನ್ನು ಕಾಣಲು ವಿಜಯಮ್ಮ ಪ್ರಯತ್ನಿಸುತ್ತಾರೆ. ಅಥವಾ ಪಕ್ವ ಜೀವನದರ್ಶನದಿಂದ ಹುಟ್ಟುವ ವಿವೇಕವೆಂದರೂ ಸರಿಯೇನೊ. ಮಕ್ಕಳ ಸಿಟ್ಟಿನ ಹಿಂದಿನ ಹತಾಶೆ, ಸೋಲು, ಆತಂಕಗಳನ್ನು ಗಮನಿಸಿ ಸಂತೈಸುವ ಅಮ್ಮನಂತೆ, ಅವಳ ಅಭಯ ಹಸ್ತದಂತೆ, ನಿರುಮ್ಮಳತೆಯ ನಾದವೊಂದು ಕೃತಿಯಲ್ಲಿ ನಿನದಿಸುತ್ತದೆ. ಅಮೂಲಾಗ್ರ ಸಿಟ್ಟು, ದ್ವೇಷ, ಪ್ರತೀಕಾರ ಭಾವನೆಗಳು ಇಲ್ಲೆಲ್ಲೂ ಭುಸುಗುಡುವುದಿಲ್ಲ. "ಇಷ್ಟಾದರೂ ನನಗೆ ಯಾರನ್ನಾದರೂ ಬೈಯಬೇಕೆನಿಸಲಿಲ್ಲ. ನನಗೆ ಸಿಟ್ಟು ಬರುವುದಿಲ್ಲ. ಯಾರ ಬಗೆಗಾದರೂ ಹೋಗಲಿ ನನ್ನ ಗಂಡನ ಬಗ್ಗೆಯೇ ನನಗೆ ಸಿಟ್ಟು ಬರುವುದಿಲ್ಲ". ಸಂಬಂಧಗಳು ವಿಕಾಸಗೊಳ್ಳುವಾಗ ಸಂಘರ್ಷಗಳೂ ಸಹಜವೇನೋ! ಬೇರೆಬೇರೆ ಕೌಟುಂಬಿಕ, ಸಾಮಾಜಿಕ, ಭಾವನಾತ್ಮಕ ಪರಿಸರದಲ್ಲಿ ಬೆಳೆದ ಎರಡು ಜೀವಗಳು ಸಾಮರಸ್ಯದ ಹದದಲ್ಲಿ ಕರಗುವುದು ಸುಲಭದ ಮಾತಲ್ಲ. ಒಣ ಪ್ರತಿಷ್ಠೆ, ಶುಷ್ಕ ಮೌಲ್ಯಗಳು, ಜೊತೆಗೆ ಪುರುಷಾಹಂಕಾರವೂ ಸೇರಿ ಹೋದಾಗ ಸಂಬಂಧದಲ್ಲಿ ಹಿಂಸೆಯ ಆಯಾಮ ಪ್ರವೇಶಿಸಿ ಬಿಡುತ್ತದೆ. ಅಲ್ಲಿ ಹಿಂಸಿಸುವ ವ್ಯಕ್ತಿಯೂ ಸ್ವಯಂ ಹಿಂಸೆಗೊಳಗಾಗುತ್ತಿರುತ್ತಾನೆ. 'ಪೌರುಷ'ದ ಸಿದ್ಧ ಪರಿಕಲ್ಪನೆಯನ್ನೇ ಬದುಕಬೇಕಾದ ಒತ್ತಡದಲ್ಲಿರುವ ಪುರುಷ ಕೂಡಾ ಪೌರುಷವನ್ನು ಸ್ಥಾಪಿಸಲಾಗದ ಹತಾಶ ಸ್ಥಿತಿ ತಲುಪಿದಾಗ ಹಿಂಸ್ರಮೃಗದಂತಾಗುತ್ತಾನೆ. ಈ ಎಲ್ಲ ಒತ್ತಡಗಳನ್ನು ಮಾನವೀಯವಾಗಿ ಗ್ರಹಿಸುವ ಕಣ್ಣು 'ಕುದಿ ಎಸರ' ಕಟ್ಟಿದೆ. ಸಾಂಪ್ರದಾಯಿಕ ಬ್ರಾಹ್ಮಣ್ಯದ ಪರಿಸರ, ಆ ಜೀವನಕ್ರಮ, ಅಲ್ಲಿ ಆಧುನಿಕ ಜೀವನಕ್ರಮದ ಪ್ರವೇಶದಿಂದ ಉಂಟಾದ ಪಲ್ಲಟಗಳು, ತಲ್ಲಣಗಳು ಎಲ್ಲವನ್ನೂ ಸಾವಧಾನವಾಗಿ ಗ್ರಹಿಸುವ ಮನಸ್ಸು ಇಲ್ಲಿ ಕೆಲಸ ಮಾಡಿದೆ. ಆದ್ದರಿಂದಲೇ ಇದನ್ನು ಸ್ತ್ರೀವಾದಿ ಓದು, ಸಮಾಜಶಾಸ್ತ್ರೀಯ ಓದು, ಮನಃಶ್ಶಾಸ್ತ್ರೀಯ ಓದು – ಹೀಗೆ ಯಾವುದೇ ಏಕದೃಷ್ಟಿಯಿಂದ ನೋಡದೇ ಸಮಗ್ರತೆಯಲ್ಲಿ ಗ್ರಹಿಸಬೇಕಾದ ಅಗತ್ಯವನ್ನು ಕೃತಿ ತನ್ನ ನಿರೂಪಣೆಯ ಮೂಲಕವೇ ಓದುಗರಿಗೆ ಮನವರಿಕೆಮಾಡಿಕೊಡುತ್ತ ಹೋಗುತ್ತದೆ.


ಇದನ್ನೊಂದು ಜೀವನಯಾತ್ರೆಯೆಂದು ವಿಜಯಮ್ಮ ಭಾವಿಸುತ್ತಾರೆ. ಒಳಿತು–ಕೆಡಕು, ಸಿಹಿ–ಕಹಿಗಳೆಲ್ಲವೂ ಅಲ್ಲಿ ಸಹಜ. ಆದರೆ ಈ ಸಹಯಾನದಲ್ಲಿ ತುಂಬ ಅಸಹಜಗಳು ಘಟಿಸಿವೆ. ಓದುತ್ತ ಓದುತ್ತ ದಿಗ್ಭ್ರಮೆಗೊಳ್ಳುವಂತೆ ಮಾಡುವ ವಿವರಗಳು ಇಲ್ಲಿವೆ. ಮುಚ್ಚಿದ ಬಾಗಿಲುಗಳ ಹಿಂದೆ ಇಂಥ ಪರಮ ಹಿಂಸೆಯ ಬದುಕೊಂದು ಅಡಗಿರುವುದು ಸಾಧ್ಯವಾ? ಎಂದು ನಾವು ವಿಹ್ವಲಗೊಳ್ಳುವಂತೆ ಮಾಡುತ್ತದೆ. ಗಂಡನಿಂದ ಪರಿತ್ಯಕ್ತೆಯಾಗುವವರೆಗಿನ ಬದುಕಿನ ತಲ್ಲಣಗಳು ಒಂದು ಹಂತವಾದರೆ, ಆಮೇಲೆ ಬದುಕು ಕಟ್ಟಿಕೊಳ್ಳುವ ಛಲದ, ಹೋರಾಟದ ಕತೆ ಮತ್ತೊಂದು ಹಂತ. ಆದ್ದರಿಂದ ಈ ಬರಹ ಪ್ರಾರಂಭವಾಗುವುದೇ ಬದುಕು ವಿಘಟನೆಗೊಳ್ಳುವ ಘಟನೆಗಳಿಂದ. ಇಂಥ ವಿಘಟನೆಗಳು, ಹಠಾತ್ ತಿರುವುಗಳು, ಅನಿರೀಕ್ಷಿತವಾಗಿ ಎದುರಾಗುವ ಸಂಕಟಗಳು, ತಬ್ಬಲಿತನ, ಅನಾಥಪ್ರಜ್ಞೆ, ಹಸಿವು–ದುಡಿತ, ಅನಾದರ, ಪ್ರೀತಿಕಾಣದ ಜಡಸ್ಥಿತಿಗಳು ಒಂದನ್ನೊಂದು



ಹಿಂಬಾಲಿಸುತ್ತವೆ. ಸ್ವಪ್ರಜ್ಞೆ ಜಾಗೃತಗೊಳ್ಳುವ ಮೊದಲೇ ತಾಯಿಯನ್ನು ಕಳೆದುಕೊಂಡು, ಕಂಡವರ ಹಂಗಿನಲ್ಲಿ, ಅನಾಸ್ಥೆಯಲ್ಲಿ ಅರಳದೇ ಬೆಳೆಯುವ ಹೆಣ್ಣೊಬ್ಬಳ ಜೀವನಗಾಥೆ ಮನಸ್ಸನ್ನು ಹಿಂಡಿಹಾಕುತ್ತದೆ. ಇಂಥ ಹೆಣ್ಣಿನ ಬದುಕಿನಲ್ಲಿ ಪ್ರವೇಶಿಸುವ ಅತಿಕಾಮಿ ಗಂಡಸಿಗೆ ಅವಳು ಬರಿಯ ದೇಹ ಮಾತ್ರ! ಯಾವ ಸಹಜ ಪುಲಕಗಳನ್ನೂ ಕಾಣದೇ ಕೊರಡಿನಂತೆ ಬಿದ್ದುಕೊಳ್ಳುವ ದೇಹ, ಆದೇಹದ ಮೇಲೆ ನಿರಂತರ ನಡೆಯುವ ಕ್ರೌರ್ಯ, ವಿಕೃತ ಲೈಂಗಿಕ ಕ್ರಿಯೆಗಳು... ಇದನ್ನೆಲ್ಲ ಯಾರಬಳಿಯೂ ಹೇಳಿಕೊಳ್ಳಲಾಗದೇ ಕರ್ತವ್ಯವೆಂಬಂತೆ ಸಹಿಸಬೇಕಾದ ಅನಿವಾರ್ಯತೆ.. ಬೇಡದ ಬಸಿರುಗಳು... ಬಸಿರನ್ನು ಹಿಂಸ್ರವಿಧಾನದಲ್ಲಿ ನಿವಾರಿಸುವ ಗಂಡ... ವಿಪರೀತ ರಕ್ತಸ್ರಾವ, ನೋವು, ತಲ್ಲಣಗಳು.. ಪ್ರಾಣಿಗೂ ಕಡೆಯಾದ ನರಕ ಸದೃಶ ಬದುಕು! ನಿಜಕ್ಕೂ ಅವಳ ದೇಹವೇ ಅವಳ ವಿಧಿ! ಎಂಬ ಮಾತನ್ನು ನೆನಪಿಸುತ್ತ ನಮ್ಮನ್ನು ಕಲಕಿಬಿಡುತ್ತವೆ. ಇಪ್ಪತ್ತನೆಯ ಶತಮಾನದಲ್ಲೂ ಬೆಂಗಳೂರಿನಂತಹ 'ಸುಸಂಸ್ಕೃತ ನಗರ'ದಲ್ಲೂ ಇಂಥ ಅನಾಗರಿಕ ಬದುಕು ಇತ್ತಾ? ಎಂಬ ಪ್ರಶ್ನೆಗೆಳೆಸುತ್ತದೆ.

ದೊಡ್ಡ ಕುಂಕುಮ, ಕೆನ್ನೆತುಂಬಾ ಅರಿಶಿಣ, ಕತ್ತಿನಲ್ಲಿ ಅರಿಶಿನ ದಾರಕ್ಕೆ ತೂಗಾಡುವ ನಾಲ್ಕೈದು ತಾಳಿಗಳು... ಹೀಗೆ ದೇವಿಯನ್ನು ನೆನಪಿಸುವ ಲೇಖಕಿಯ 'ಮುತ್ತೈದೆ'ತನದ ಚಿತ್ರಗಳನ್ನು ಇಲ್ಲಿ ಕಾಣುತ್ತೇವೆ. ಆದರೆ ಈ ದೇವಿಯ ಹಿಂದಿರುವ ಅಸಹಾಯಕ ಹೆಂಗಸು, ನೋವು ತಾಳಿತಾಳಿ ಸಂವೇದನೆಯನ್ನೇ ಕಳೆದುಕೊಂಡು ದಡ್ಡುಬಿದ್ದ ಹೆಂಗಸು, ಚಲಿಸುತ್ತಿರುವ ಲೋಕಪ್ರವಾಹದ ಪರಿವೆಯೇ ಇಲ್ಲದೇ ಸಾಂಪ್ರದಾಯಿಕ ಜಡತೆಯಲ್ಲಿ ಹೆಪ್ಪುಗಟ್ಟಿದ ಹೆಂಗಸೊಬ್ಬಳು ಉಸಿರಾಡಲಾರದೇ ಉಸಿರಾಡುತ್ತಿದ್ದಳೆಂಬ ಸತ್ಯದ ದರ್ಶನವು ಓದುಗರನ್ನು ದಿಗ್ಭ್ರಮೆಗೀಡುಮಾಡುತ್ತದೆ. ಕಾಲ–ದೇಶಗಳನ್ನು ಫ್ರೀಸ್ ಮಾಡಿ, ಬೌದ್ಧಿಕ–ಮಾನಸಿಕ ನಿರ್ವಾತವೊಂದನ್ನು ಸೃಷ್ಟಿಸಿ ಅಲ್ಲಿ ಹೆಣಗಳಂತೆ ಬದುಕಿದ ಎಷ್ಟೋ ಹೆಣ್ಣುಗಳ ಆತ್ಮದ ಆರ್ತನಾದವನ್ನು ಈ 'ಕುದಿ ಎಸರು' ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆಯೆನಿಸುತ್ತದೆ. ಭಾರತೀಯ ಸಂಸ್ಕೃತಿಯ ವಿಜ್ರಂಭಣೆಯನ್ನು ಮಾತ್ರ ಕೇಳುತ್ತ ಬಂದ ಕಿವಿಗಳಿಗೆ ಸಂಸ್ಕೃತಿಯ ಹಿಂದಿರುವ ವಿಕೃತಿಗಳನ್ನೂ ಇದು ಎಗ್ಗಿಲ್ಲದೆ ದರ್ಶನಮಾಡಿಸುತ್ತದೆ. ಗಂಡನಿಗೆ 'ಬೇಕಾದ ಹಾಗೆ' ಇರಬೇಕಾದ ಪತಿವ್ರತಾ ಧರ್ಮದ ಉಪದೇಶವನ್ನೇ ಕೇಳುತ್ತ ಸ್ವಯಂ ನಾಶದ ಹಾದಿಯಲ್ಲಿ ನಡೆವ ಸಾಧ್ವೀಮಣಿಗಳ ಇನ್ನೊಂದು ಸುಪ್ತಮುಖವನ್ನಿಲ್ಲಿ ಅನಾವರಣ ಮಾಡಲಾಗಿದೆ.

ಪಾತಿವ್ರತ್ಯದ ಪರಿಕಲ್ಪನೆಯ ಮೂಲವೇ ಹೆಣ್ಣಿನ ಲೈಂಗಿಕತೆಯನ್ನು ನಿರ್ಬಂಧಿಸುವುದು. ಅದನ್ನು ಪುರುಷನ 'ಒಡೆತನ'ಕ್ಕೆ ಒಳಪಡಿಸುವುದು. ಇಲ್ಲಿ ಸಾಂಗತ್ಯದ ಭಾವ ಕ್ಷೀಣವಾಗಿ 'ಒಡೆತನ'ದ ಭಾವವೇ ಅಬ್ಬರಿಸತೊಡಗಿದಾಗ ನಿರ್ಬಂಧ–ಹಿಂಸೆ ಛಿಲ್ಲನೆ ಮೇಲೇಳುತ್ತದೆ. ನೀಲಿಚಿತ್ರಗಳನ್ನು ನೋಡುತ್ತಾ ಅದರ ವಿಕೃತಿಗಳನ್ನೆಲ್ಲ ದಿನವಿಡೀ ದುಡಿದು ಹೆಣವಾದ ಹೆಂಡತಿಯ ಮೇಲೆ ಪ್ರಯೋಗಿಸುವ ಗಂಡ, ಇದನ್ನೆಲ್ಲ ಯಾರಬಳಿಯೂ ಹೇಳಿಕೊಳ್ಳಲಾಗದ ಮೂಕ ವೇದನೆ, ತನಗಾಗಿ ಯೋಚಿಸಲು ಸಮಯ, ಸ್ಥಳ ಎರಡೂ ಇಲ್ಲದ ಕೂಡುಕುಟುಂಬದ ಅಸಹನೀಯ ಬದುಕು, ಬೆಲೆಯಿಲ್ಲದ, ಅಲ್ಪ ಕೃತಜ್ಞತೆಯೂ ಇಲ್ಲದ ಗಾಣದೆತ್ತಿನಂತಹ ದುಡಿಮೆ.. ತನ್ನನ್ನು ಹೇಗೆ ಅಸಹಾಯಕತೆಯ ಪಾತಾಳಕ್ಕೆ ತಳ್ಳುತ್ತಹೋಯಿತೆಂಬುದನ್ನು ಇಲ್ಲಿ ಎಳೆಎಳೆಯಾಗಿ ಕಟ್ಟಿಕೊಟ್ಟಿದ್ದಾರೆ ವಿಜಯಮ್ಮ. ಬದುಕಿಡೀ ಸಂಶಯದಿಂದ ಪೀಡಿತನಾದ ಗಂಡ, ಅದೇ ಸಂಶಯ, ಕೀಳರಿಮೆಗಳಿಂದ ನಲುಗುತ್ತಾ ಹಿಂಸೆಯನ್ನು ಹೆಚ್ಚುಮಾಡುತ್ತಲೇ ಹೋಗುತ್ತಾನೆ. ಕೊನೆಗೆ ಅದೇ ಅವನ ಅಭಿವ್ಯಕ್ತಿಯ ಭಾಷೆಯಾಗಿಬಿಡುತ್ತದೆ! ನಾಲ್ಕು ಗೋಡೆಗಳ ನಡುವೆ ನಡೆವ ಈ ಹಿಂಸಾಕ್ರಿಯೆ ಬಹಿರಂಗವಾಗಿ ನಡೆದಾಗ ವಿಜಯಮ್ಮನ ಬದುಕಿನಲ್ಲಿ ಹಠಾತ್ ತಿರುವು ಹಾಗೂ ಅಚಾನಕ್ ಧೈರ್ಯದ ಪ್ರವೇಶವಾಗಿಬಿಡುತ್ತದೆ. "ಆತ ನನ್ನನ್ನು ಎಳೆದಾಡಿದ.. ತನ್ನ ಬೂಟುಗಾಲಿನಿಂದ ನನ್ನನ್ನು ರಸ್ತೆಯಲ್ಲಿ ಉರುಳಿಸತೊಡಗಿದ. ಟ್ಯಾಕ್ಸಿಸ್ಟ್ಯಾಂಡಿನಿಂದ ಹತ್ತಿರ ಹತ್ತಿರ ಕೃಷ್ಣರಾವ್ ಪಾರ್ಕ್‌ವರೆಗೂ ಉರುಳಿಸುತ್ತಲೇ ಇದ್ದ. ರಸ್ತೆಯ ಎರಡೂ ಬದಿ ಓಡಾಡುತ್ತಿದ್ದ ವಾಹನಗಳು ಬ್ರೇಕ್ ಹಾಕಿದವು.. ಸಾಲುಗಟ್ಟಿ ನಿಂತವು..ಜನ ನುಗ್ಗಿ ನುಗ್ಗಿ ಬಂದರು. ನನ್ನ ಕೈಯಲ್ಲಿ ಆಗಷ್ಟೇ ಅಂಗಡಿಯಲ್ಲಿ ಬದಲಾಯಿಸಿ ತಂದಿದ್ದ ನನ್ನ ಮಗನ ಬೂಟುಗಳಿದ್ದವು...ಗಟ್ಟಿಯಾಗಿ ಹಿಡಿದಿದ್ದೆ. ಅದು ಬಿದ್ದು ಹಾಳಾಗಬಾರದು, ಮಗನಿಗೆ ಶಾಲೆಗೆ ಹೋಗಲು ತೊಂದರೆ ಆಗುತ್ತೆ ಎಂಬ ಒಳಗಿನ ಆತಂಕವಿರಬಹುದೇನೋ. ಜನರ ಹಾಹಾಕಾರ– ನನ್ನ ಚೀರಾಟ–ದಿಗ್ಭ್ರಮೆ.. ಆತ ದೂಡುತ್ತಲೇ ಇದ್ದ. ಅದ್ಯಾವ ದೈತ್ಯ ಆತನ ಒಳಗೆ ಹೊಕ್ಕಿದ್ದನೋ.. ಹೀಗೆ ವಿಜಯಮ್ಮ ಬದುಕಿನ ಕರಾಳ ಮುಖಗಳನ್ನು



ತೆರೆದಿಡುತ್ತಲೇ ಹೋದಂತೆ ಯಾರೇ ಆದರೂ ಒಂದು ಸಲ ಸ್ತಬ್ಧರಾಗದೇ ಇರಲು ಸಾಧ್ಯವಿಲ್ಲ!

ಅಲ್ಲಿಗೆ ಮರ್ಯಾದೆ, ಪ್ರತಿಷ್ಠೆ, ಪರಂಪರೆ.. ಏನೆಲ್ಲ ಸಮರ್ಥನೆಗೂ ತಾಳದ ತಾಳಿ ಕಳಚಿಬೀಳುತ್ತದೆ. ಆ ಕ್ರೌರ್ಯದ ಉತ್ತುಂಗದಲ್ಲೇ ಸ್ವಾತಂತ್ರ್ಯದ ಬದುಕಿನ ಬೀಜ ಮೊಳಕೆಯೊಡೆಯುತ್ತದೆ. 'ಇನ್ನು ಸಾಕು' ಎಂಬ ನಿರ್ಧಾರವೊಂದು ಸದ್ದಿಲ್ಲದೆ ಹುಟ್ಟುತ್ತದೆ. ಇದಕ್ಕೆ ಪೂರಕವಾಗಿ ಅನೇಕ ಪುರುಷರ ಬೆಂಬಲ–ಸಹಕಾರಗಳು ಅವರಿಗೆ ಲಭಿಸುತ್ತವೆ. ಅದರಲ್ಲಿ ಅಪ್ಪ, ಚಿಕ್ಕಪ್ಪರಂಥವರೂ ಇದ್ದರು. ನಾಟಕ–ಸಾಹಿತ್ಯ ಕ್ಷೇತ್ರದ ಪ್ರಸಿದ್ಧ ಪುರುಷರೂ ಇದ್ದರು. ಆದರೂ ಅನುದಿನದ ಹೋರಾಟ ಮಾತ್ರ ಹೆಣ್ಣಿನದೇ. ಎಂಥ ಸವಾಲಿಗೂ ಮೈಕೊಡುವ ಛಲ. ಆ ಛಲದ ಹಿಂದೆ ಪ್ರೇರಣೆಯಾಗಿ ನಿಂತ ಇಬ್ಬರು ಗಂಡುಮಕ್ಕಳು. ಅವರ ಬದುಕಿನ ಕ್ಷಿತಿಜವನ್ನು ಹಿಗ್ಗಿಸಿದ ಸಂಜೆ ಕಾಲೇಜಿನ ಶಿಕ್ಷಣ, ಪತ್ರಕರ್ತೆಯಾಗಿ ದುಡಿಯಲು ಅವಕಾಶಕೊಟ್ಟ ಪತ್ರಿಕೆಗಳು, ರಂಗಭೂಮಿ, ಸಾಹಿತ್ಯಕ್ಷೇತ್ರ ಎಲ್ಲ! ನಂತರದ ಬದುಕಿನ ಈ ಬಗೆಯ ಬೆಳವಣಿಗೆ ಮಾತ್ರ ಬೆರಗು ಹುಟ್ಟಿಸುತ್ತದೆ. ಇಷ್ಟುದಿನ ಈ ಧೈರ್ಯ, ಈ ಪ್ರತಿಭೆ ಎಲ್ಲಿ ಅಡಗಿತ್ತು ಎಂಬ ಬೆರಗು ಅದು. ಹೌದು, ಪ್ರತಿ ಹೆಣ್ಣಿನಲ್ಲೂ ಒಬ್ಬ ವಿಜಯಮ್ಮ ಇರುತ್ತಾಳೆ. ಅವಳನ್ನು ಕಾಣುವ, ಅವಳನ್ನು ಬಿಡುಗಡೆಗೊಳಿಸುವ ಸಂಕಲ್ಪ ಬೇಕು ಅಷ್ಟೆ! ಆ ಕ್ಷಣಗಳೇ ಬದುಕಿನ ನಿರ್ಣಾಯಕ ಘಟ್ಟ.

ಇದನ್ನು ಪರಿತ್ಯಕ್ತ ಮಹಿಳೆಯ ಜೀವನಗಾಥೆ ಎಂದುಕೊಳ್ಳಲು ಮನಸ್ಸೊಪ್ಪುವುದಿಲ್ಲ, ನಾನೇ ಗಂಡನಿಂದ ದೂರ ಸರಿದೆ ಎಂದು ಈಗ ನಿರಾಳವಾಗಿ ಹೇಳುತ್ತಾರೆ ವಿಜಯಮ್ಮ. "ಮುಂದಿನ ಜೀವನಯಾತ್ರೆ 'ಸಾಗಾ ಆಫ್ ಡೆಸರ್ಟೆಡ್ ವುಮನ್ ಅನ್ನಲೇ? ನನಗೆ ಈ ತ್ಯಕ್ತ, ಡೆಸರ್ಟೆಡ್‌ನಂಥ ಶಬ್ದಗಳು ಹಿಡಿಸುವುದಿಲ್ಲ. ಓದುಗರು ಇದೆಂಥ ಪ್ರಯಾಣ ಎಂದು ನಿರ್ಧರಿಸಲಿ". "ಹಾಗೆ ನೋಡಿದರೆ ನಾನು ಏನನ್ನಾದರೂ ಆಯ್ಕೆ ಮಾಡಿಕೊಂಡೆನೇ? ಆಯ್ಕೆ–ಅಗತ್ಯಗಳ ಬಗ್ಗೆ ಯೋಚಿಸುವುದಕ್ಕೂ ಮೊದಲೇ ಅವೆಲ್ಲ ನನ್ನ ಉಡಿಗೆ ಬಿದ್ದವು. ಉಡಿಯಲ್ಲಿ ಕೆಂಡ ತುಂಬಿತ್ತೋ ಕೆಂಡಸಂಪಿಗೆಯೇ ತುಂಬಿತ್ತೋ ನೋಡಲೂ ಇಲ್ಲ. ಹೊಟ್ಟೆಗೆ ಒತ್ತಿ ಕಟ್ಟಿಕೊಂಡೆ, ಒಡಲು ಬೆಂದದ್ದೂ ಹೌದು... ಆಗ ಈಗ ಹಿತವೆನಿಸುವ ಬೆಚ್ಚಗಿನ ಅನುಭವವೂ ಆಗಿರಬಹುದು!... 'ಗಂಡಬಿಟ್ಟವಳು' ಎಂಬ ಪಟ್ಟಹೊರಲು ಹೆದರಿ ಎಲ್ಲ ಹಿಂಸೆಗಳನ್ನೂ ಸಹಿಸಿಕೊಳ್ಳುವ ಅನಿವಾರ್ಯತೆ ಹೆಣ್ಣಿಗೆ. ಜೊತೆಗೆ ಆರ್ಥಿಕ ಅವಲಂಬನೆ ಬೇರೆ. ಸ್ವತಂತ್ರ ದುಡಿಯುವ ಹೆಣ್ಣನ್ನು ಒಪ್ಪಿಕೊಳ್ಳಲು ಅಂದಿನ ಸಮಾಜದ ಮನಸ್ಥಿತಿ ಸಿದ್ಧವಾಗಿರಲೂ ಇಲ್ಲ. ಬೆನ್ನಿಗೆ ನಿಂತವರೆಲ್ಲ ಹಿಂದೆಸರಿದರೂ ನೆಲಕಚ್ಚಿ, ಹಠತೊಟ್ಟು ನಿಲ್ಲುವ ಮರದಂತೆ ವಿಜಯಮ್ಮ ಭಾಸವಾಗುತ್ತಾರೆ.

ಪುಟ 14 ಕ್ಕೆ





ಡಿಸೆಂಬರ್ 19ರಂದು ಎಡಪಕ್ಷಗಳ ಪ್ರತಿಭಟನೆ

ಸಿ.ಎ.ಎ. ವಿರುದ್ಧ ದೇಶಾದ್ಯಂತ ಉಕ್ಕೇರುತ್ತಿರುವ ಪ್ರತಿರೋಧ

ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ)ಯ ರೂಪದಲ್ಲಿ ಜಾತ್ಯತೀತತೆ ಮತ್ತು ಸಂವಿಧಾನದ ಮೇಲಿನ ಹೊಚ್ಚ ಹೊಸ ಆಕ್ರಮಣಕ್ಕೆ ದೇಶಾದ್ಯಂತ ಬಲವಾದ ಪ್ರತಿರೋಧ ಎದುರಾಗುತ್ತಿದೆ. ಇಡೀ ಈಶಾನ್ಯ ಭಾರತದಲ್ಲಿ ಸಾಮೂಹಿಕ ಪ್ರತಿಭಟನೆಗಳು ಭುಗಿಲೆದ್ದಿವೆ, ಅಸ್ಸಾಂ ಇದರಲ್ಲಿ ಮುಂಚೂಣಿಯಲ್ಲಿದೆ. ಪೋಲೀಸ್ ಗೋಲೀಬಾರ್ ಐವರು ಯುವಕರನ್ನು ಸಾಯಿಸಿದೆ. ಕರ್ಫ್ಯೂ ಹೇರಲಾಗಿದೆ, ಇಂಟರ್ನೆಟ್ ಸಂಪರ್ಕವನ್ನು ಸ್ತಬ್ಧಗೊಳಿಸಲಾಗಿದೆ. ಆದರೆ ಇದರಿಂದ ಎಲ್ಲ ರಂಗಗಳ ಜನರು ಪ್ರತಿಭಟನೆಗಳನ್ನು ಮುಂದುವರೆಸದಂತೆ ತಡೆಯಲು ಸಾಧ್ಯವಾಗಿಲ್ಲ. ಅಸ್ಸಾಂ ಒಪ್ಪಂದದ 1971ರ ಗಡುವನ್ನು ನಿಷ್ಕ್ರಿಯಗೊಳಿಸಿರುವ ಸಿಎಎ ಯನ್ನು ಬೆಂಬಲಿಸಿರುವುದಕ್ಕಾಗಿ ಅಸ್ಸಾಂನ ಬಿಜೆಪಿ ನೇತೃತ್ವದ ಸರಕಾರವನ್ನು ಅಸ್ಸಾಂ ಜನಗಳ ಹಿತಾಸಕ್ತಿಗಳಿಗೆ ವಿಶ್ವಾಸಘಾತ ಬಗೆದವರು ಎಂದು ಕಾಣಲಾಗುತ್ತಿದೆ.

ಸಿಎಎ ಗೆ ವಿರೋಧದಲ್ಲಿ ವ್ಯಾಪಕವಾದ ವಿದ್ಯಾರ್ಥಿ ಪ್ರತಿಭಟನೆಗಳು ಗಮನಾರ್ಹವಾಗಿವೆ. ವಿದ್ಯಾರ್ಥಿ ಪ್ರತಿಭಟನೆಗಳು ಎರಡು ಕಾರಣಗಳಿಂದಾಗಿ ಮಹತ್ವದ್ದಾಗಿವೆ– ಸಂವಿಧಾನ ಮತ್ತು ಜಾತ್ಯತೀತತೆಯನ್ನು ರಕ್ಷಿಸುವ ವಿದ್ಯಾರ್ಥಿ ಚಳುವಳಿಯಾಗಿದೆ; ಅಲ್ಲದೆ, ಇದು ಜಾಮಿಯ ಮಿಲಿಯ ಇಸ್ಲಾಮಿಯ ವಿಶ್ವವಿದ್ಯಾಲಯ ಹಾಗೂ ಅಲಿಘಡ್ ಮುಸ್ಲಿಂ ವಿಶ್ವವಿದ್ಯಾಲಯ (ಎಎಂಯು) ದ ವಿದ್ಯಾರ್ಥಿಗಳೊಂದಿಗೆ ಸೌಹಾರ್ದದ ಮತ್ತು ಪ್ರಭುತ್ವದಿಂದ ಭಿನ್ನಮತದ ದಮನದ ವಿರುದ್ಧ ಪ್ರತಿಭಟಿಸುವ ದೇಶವ್ಯಾಪಿ ಚಳುವಳಿಯೂ ಅಗಿದೆ. ಐಐಟಿಗಳು, ಐಐಎಂಗಳು, ಐಐಎಸ್‌ಸಿ ಮುಂತಾದ ವೃತ್ತಿಪರ ಶಿಕ್ಷಣದ ಸಂಸ್ಥೆಗಳ ವಿದ್ಯಾರ್ಥಿಗಳೂ ಪ್ರತಿಭಟನೆಗಳಲ್ಲಿ ಸೇರಿಕೊಂಡಿರುವುದು ಇದರ ಮಹತ್ವವನ್ನು ಹೆಚ್ಚಿಸಿದೆ.

ಜಾಮಿಯ ವಿವಿ ಆವರಣದೊಳಕ್ಕೆ ಪ್ರವೇಶಿಸುವಲ್ಲಿ ಪೋಲೀಸ್ ದಮನದ ಅಮಾನುಷ ಪ್ರದರ್ಶನ ಕಾಣ ಬಂತು. ಲೈಬ್ರರಿಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳನ್ನೂ, ಹಾಸ್ಟೆಲ್‌ಗಳಿಂದಲೂ ಹುಡುಗರನ್ನೂ, ಹುಡುಗಿಯರನ್ನೂ ಎಳದೊಯ್ಯಲಾಯಿತು. ಅವರನ್ನು ಬಡಿಯಲಾಯಿತು. ಈ ಮೊದಲು ಜೆಎನ್‌ಯು ವಿದ್ಯಾರ್ಥಿಗಳ ವಿರುದ್ಧವೂ ಇಂತಹುದೇ ದಮನ ಪ್ರದರ್ಶನಗೊಂಡಿತ್ತು. ಇದು ಯಾವುದೇ ವಿದ್ಯಾರ್ಥಿ ಪ್ರತಿಭಟನೆಯ ಬಗ್ಗೆ ಮೋದಿ ಸರಕಾರದ ವೈರತ್ವದ ಒಂದು ಆಘಾತಕಾರೀ ಉದಾಹರಣೆ. ಎಎಂಯು ಆವರಣದಲ್ಲೂ ಪೋಲೀಸ್ ಅತಿರೇಕಗಳ ನಾಚಿಕಗೆಟ್ಟ ದೃಶ್ಯಗಳು ಕಾಣ ಬಂದವು, ಸ್ಟನ್ ಗ್ರೆನೇಡುಗಳನ್ನೂ ಬಳಸಲಾಯಿತು.



ಯಾರು ಹಿಂಸಾಚಾರಿ ಎಂಬುದನ್ನು ಅವರ ಉಡುಗೆಯಿಂದ ಕಾಣಬಲ್ಲೆ **–ವ್ಯಂಗ್ಯಚಿತ್ರ ಕೃಪೆ: ದಿ ಹಿಂದು**

ಈ ಪ್ರತಿಭಟನೆಗಳಿಗೆ ನರೇಂದ್ರ ಮೋದಿ ಮತ್ತು ಅಮಿತ್ ಷಾರಿಂದ ಅವರಿಗೇ ತಕ್ಕುದಾದ ಸರ್ವಾಧಿಕಾರಶಾಹೀ ಮತ್ತು ಕೋಮುವಾದಿ ಸ್ಪಂದನ ವ್ಯಕ್ತಗೊಂಡಿದೆ. ಮೋದಿ "ಬೆಂಕಿ ಹಚ್ಚುವವರನ್ನು ಅವರ ಉಡುಗೆಗಳಿಂದ ಗುರುತಿಸಬಹುದು" ಎಂದಿದ್ದಾರೆ, ಆಮೂಲಕ ಮುಸ್ಲಿಮರು ಮಾತ್ರವೇ ತೊಂದರೆ ಉಂಟುಮಾಡುತ್ತಿದ್ದಾರೆ ಎಂದು ಸೂಚ್ಯವಾಗಿ ಹೇಳಿದ್ದಾರೆ. "ನಗರ ನಕ್ಸಲರು" ಅವರನ್ನು ತಮ್ಮ ದುಷ್ಟ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದೂ ವಿದ್ಯಾರ್ಥಿಗಳನ್ನು ಎಚ್ಚರಿಸಿದ್ದಾರೆ. ಅಮಿತ್ ಷಾ "ಅವರೆಲ್ಲ ಎಷ್ಟೇ ಪ್ರತಿಭಟಿಸಲಿ, ಕಾಯ್ದೆಯಲ್ಲಿ ಎಳ್ಳಷ್ಟೂ ಬದಲಾವಣೆ ಇರುವುದಿಲ್ಲ" ಎಂದು ಸಾರಿದ್ದಾರೆ. ನಿರ್ಮಲಾ ಸೀತಾರಾಮನ್ ಇನ್ನೂ ಕರಾಳವಾಗಿ "ಜಿಹಾದಿಗಳು, ಮಾವೋವಾದಿಗಳು ಮತ್ತು ಪ್ರತ್ಯೇಕತಾವಾದಿಗಳು ವಿದ್ಯಾಥಿ ಚಳುವಳಿಗಳಲ್ಲಿ ಪ್ರವೇಶಿಸಿದ್ದಾರೆ" ಎಂದಿದ್ದಾರೆ.

ಇಷ್ಟೆಲ್ಲ ಬೆದರಿಕೆಗಳು, ಎಚ್ಚರಿಕೆಗಳು ಬಂದರೂ ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ಮತ್ತು ಸಂವಿಧಾನಿಕ ಮೌಲ್ಯಗಳನ್ನು ಕಾಯ್ದುಕೊಳ್ಳುವ ಹೋರಾಟ ಶಕ್ತಿಗೂಡಿಸಿಕೊಳ್ಳುತ್ತಿದೆ. ಬಿಜೆಪಿ–ಆರೆಸ್ಸೆಸ್ ಕೂಟ ಈ ಮೂಲಕ ಸಾಧಿಸ ಬಯಸುತ್ತಿರುವುದು ಹಿಂದೂರಾಷ್ಟ್ರವನ್ನೇ ಎಂಬುದು ಹೆಚ್ಚೆಚ್ಚು ಜನಗಳಿಗೆ ಮನವರಿಕೆಯಾಗುತ್ತಿದೆ. ಸಿಎಎ ವಿರುದ್ಧ ಹೋರಾಟ ಮುಂಬರುವ ರಾಷ್ಟ್ರೀಯ ಜನಸಂಖ್ಯಾ ನೋಂದಣಿ(ಎನ್‌ಪಿಆರ್) ಅಭಿಯಾನದ ವಿರುದ್ಧದ ಹೋರಾಟವಾಗಿ ವಿಸ್ತಾರಗೊಳ್ಳಬೇಕು. ಈ ಎನ್‌ಪಿಆರ್ ಎಂಬುದು ರಾಷ್ಟ್ರೀಯ ಪೌರತ್ವ ನೋಂದಣಿ(ಎನ್‌ಆರ್‌ಸಿ)ಯ ಮೊದಲ ಘಟ್ಟವಾಗಿದೆ.

ಬೆದರಿಕೆಗಳು, ಎಚ್ಚರಿಕೆಗಳನ್ನು ಒಡ್ಡಿದರೂ ಪೌರತ್ವದ ಜಾತ್ಯತೀತ ಪರಿಕಲ್ಪನೆಯನ್ನು ಮತ್ತು ಸಂವಿಧಾನಿಕ ಮೌಲ್ಯಗಳನ್ನು ಕಾಯ್ದುಕೊಳ್ಳುವ ಹೋರಾಟವನ್ನು ತಡೆದಿಡುವುದು ಮೋದಿ–ಷಾ ಆಳ್ವಿಕೆಗೆ ಸಾಧ್ಯವಾಗುತ್ತಿಲ್ಲ. ಇದರಲ್ಲಿ ವಿದ್ಯಾರ್ಥಿ ಪ್ರತಿಭಟನೆಗಳು ಗಮನಾರ್ಹ. ಬಿಜೆಪಿ– ಆರೆಸ್ಸೆಸ್ ಕೂಟ ಈ ಮೂಲಕ ಸಾಧಿಸಬಯಸುತ್ತಿರುವುದು ಹಿಂದೂರಾಷ್ಟ್ರವನ್ನಷ್ಟೇ ಎಂಬುದು ಹೆಚ್ಚೆಚ್ಚು ಜನಗಳಿಗೆ ಮನವರಿಕೆಯಾಗುತ್ತಿದೆ. ಸಿಎಎ ವಿರುದ್ಧ ಹೋರಾಟ ಮುಂಬರುವ ಎನ್‌ಆರ್‌ಸಿಯ ಮೊದಲ ಘಟ್ಟವಾದ ಎನ್‌ಪಿಆರ್ ಅಭಿಯಾನದ ವಿರುದ್ಧದ ಹೋರಾಟವಾಗಿ ವಿಸ್ತಾರಗೊಳ್ಳಬೇಕು.

ಪ್ರಕಾಶ ಕಾರಟ್

ಡಿಸೆಂಬರ್ 15–16ರ ರಾತ್ರಿ ದಿಲ್ಲಿ ಪೋಲಿಸ್ ಮುಖ್ಯ ಕಚೇರಿಯ ಎದುರು ವಿದ್ಯಾರ್ಥಿಗಳ ಮೇಲೆ ದಾಳಿಗಳ ವಿರುದ್ಧ ಭಾರೀ ಪ್ರತಿಭಟನೆ



"ಮೋದಿ ಸರ್ಕಾರದ ಕಾರ್ಪೋರೇಟ್ ಕಂಪೆನಿಗಳ ಪರವಾದ ನೀತಿಗಳಿಂದ ಆಳವಾಗುತ್ತಿದೆ ಕಾರ್ಷಿಕ ಬಿಕ್ಕಟ್ಟು" – ಎ. ವಿಜಯರಾಘವನ್

ವರದಿ: ವೆಂಕಟೇಶ ಕೋಣಿ

ಎಡಪಂಥೀಯ ಸಮರಧೀರ ಹೋರಾಟದ ಐತಿಹಾಸಿಕ ನೆಲ ಕೇರಳದ ಕಣ್ಣೂರು ನಗರದಲ್ಲಿ 31 ಡಿಸೆಂಬರ್ 2019 ರಿಂದ ಜನವರಿ 3, 2020 ರ ವರೆಗೆ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ರಾಷ್ಟ್ರ ಸಮ್ಮೇಳನ ನಡೆಯುವುದರ ಪೂರ್ವ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ 7 ನೇ ರಾಜ್ಯ ಸಮ್ಮೇಳನ 13, 14 ಮತ್ತು 15 ಡಿಸೆಂಬರ್ 2019 ರಂದು ಕಲಬುರಗಿಯ ರಾಜಾಪುರ ನಗರದಲ್ಲಿ ಅತ್ಯಂತ ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿತು.

ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಮಾಜಿ ರಾಜ್ಯ ಸಭಾ ಸದಸ್ಯರಾಗಿರುವ ಸಂಗಾತಿ ಎ. ವಿಜಯರಾಘವನ್ ಸಮ್ಮೇಳನದ ಪ್ರತಿನಿಧಿಗಳ ಅಧಿವೇಶನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ, ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಅತ್ಯಂತ ಗಂಭೀರ ಬಿಕ್ಕಟ್ಟಿನಲ್ಲಿ ಸಿಲುಕಿದ್ದು, ಮೋದಿಯವರ ಸರಕಾರ ಕೇಂದ್ರದಲ್ಲಿ ಎರಡನೆ ಅವಧಿಗೆ ಅತ್ಯಧಿಕ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣ ನೀತಿಯನ್ನು ಬಹಳ ರಭಸದಿಂದ ಜಾರಿಗೆ ತರುತ್ತಿದೆ.

ಸಾರ್ವಜನಿಕ ರಂಗವಾದ ಸರಕಾರಿ ಉದ್ದಿಮೆಗಳು ಖಾಸಗಿಯವರಿಗೆ ವರ್ಗಾಯಿಸುತ್ತಿದೆ. ವಿದ್ಯುತ್, ಸಿಮೆಂಟ್, ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಹಾಗೂ ದೇಶದ ಅಂತರಿಕ ಉತ್ಪಾದನೆ ಕೆಳಗಡೆ ಕುಸಿಯುತ್ತಿದೆ. ತೆರಿಗೆ ಸಂಗ್ರಹ ಕೂಡಾ ಕಡಿಮೆಯಾಗಿದೆ. ಜಿಡಿಪಿ ಶೇಕಡಾ 8 ರಿಂದ ಶೇಕಡಾ 4 ಕ್ಕೆ ಕುಸಿದಿದೆ. ದೇಶದ ಆರ್ಥಿಕತೆ 3 ರಿಂದ 4 ಲಕ್ಷ ಕೋಟಿ ನಷ್ಟದಲ್ಲಿ ಕುಸಿತಗೊಂಡಿದೆ. ಎಲ್ಲವನ್ನು ಖಾಸಗಿಯವರಿಗೆ ವಹಿಸಿ ಕೊಡಲಾಗುತ್ತದೆ ಎಂದು ಹೇಳಿದರು. ಅವರು ಮುಂದುವರಿದು ಮಾತನಾಡುತ್ತಾ ರಿಸರ್ವ್ ಬ್ಯಾಂಕಿನ ಕಾಯ್ದಿಟ್ಟ ನಿಧಿಯನ್ನು ಕೂಡಾ ಕೇಂದ್ರ ಸರಕಾರ ಕಿತ್ತು ಕೊಂಡಿದೆ. ರೂಪಾಯಿ 1,40,000 ಕೋಟಿ ರಿಯಾಯ್ತಿ ನೀಡಿ ಬೃಹತ್ ಕಾರ್ಪೋರೇಟ್ ಕಂಪೆನಿಗಳ ಪರ ಸರಕಾರವಾಗಿದೆ. ದೇಶದ ಆರ್ಥಿಕ ಪರಿಸ್ಥಿತಿ ಚೆಲ್ಲಾ ಪಿಲ್ಲಿ ಯಾಗಿದೆ. ಕೇವಲ ಅಂಕಿ ಅಂಶ ಅಲ್ಲ ಜನರ ಬದುಕಿನಲ್ಲಿ ಸಂಕಷ್ಟ ತಂದೊಡ್ಡಿದೆ. ಇನ್ನೊಂದು ಕಡೆ ಕಾಂಗ್ರೇಸ್ ಮತ್ತು ಪ್ರಾದೇಶಿಕ ಪಕ್ಷಗಳು ಇದೇ ನೀತಿಗಳನ್ನು ಬೆಂಬಲಿಸುತ್ತದೆ. ಆದರೆ ಕೇವಲ ಎಡಪಕ್ಷಗಳು ಮಾತ್ರ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ನಿರಂತರ ಹೋರಾಟ ಮಾಡುತ್ತಿದೆ. ಆದ್ದರಿಂದ ಹಳ್ಳಿಯ ಬಡವರ, ಕೂಲಿಕಾರ್ಮಿಕರ ಸಂಘವಾದ ನಾವು ಈ ಬಗ್ಗೆ ತಿಳಿದುಕೊಳ್ಳಬೇಕು ಎಂದು ಅವರು ಅಭಿಪ್ರಾಯ ಪಟ್ಟರು. ಭೂ ಸುಧಾರಣೆಯ ಮೂಲಕ ಭೂ ಹೀನ ಕೃಷಿಕೂಲಿಕಾರರಿಗೆ, ಬಡ ರೈತರಿಗೆ ಭೂಮಿ ವಿತರಣೆ ಮಾಡಬೇಕಾದ ಸರಕಾರ ಭೂ ಬ್ಯಾಂಕ್ ಮಾಡಿ ಖಾಸಗಿ ಉದ್ದಿಮೆದಾರರಿಗೆ ಭೂಮಿ



ಕೊಡುತ್ತಿದೆ. ಕೃಷಿ ಕೂಲಿಕಾರರಿಗೆ ಕೃಷಿ ಕ್ಷೇತ್ರದಲ್ಲಿ ಕೆಲಸ ಸಿಗುತ್ತಿಲ್ಲ. ಸರಕು ಸೇವಾ ತೆರಿಗೆ (ಜಿಎಸ್‌ಟಿ), ನೋಟು ನಿಷೇದ ತಂದು ಅರ್ಥಿಕತೆ ಕುಸಿದಿದೆ, ಬಡವರಿಗೆ, ಕೃಷಿಕೂಲಿಕಾರರಿಗೆ ಪೆಟ್ಟು ಬಿದ್ದಿದೆ, ಕೃಷಿ ಬಿಕ್ಕಟ್ಟಿನಲ್ಲಿದೆ. ಈ ಜನರ ಜೀವನ ಭದ್ರತೆಗೆ ಸಾಮಾಜಿಕ ಸುರಕ್ಷಾ ಯೋಜನೆ ಸಶಕ್ತ ಗೊಳಿಸಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಗೆ ಅನುದಾನ ಹೆಚ್ಚಿಸದೆ ಬಲಹೀನಗೊಳಿಸಲಾಗಿದೆ.

ನರೇಗಾ ಕೂಲಿಕಾರರಿಗೆ ವಾರ್ಷಿಕ 150 ದಿನಗಳ ಕೆಲಸದ ಭರವಸೆ ನೀಡಲಾಗಿದ್ದರೂ ಕೇವಲ 50 ಕ್ಕೂ ಕಡಿಮೆ ದಿನಗಳ ಕೆಲಸ ಮಾತ್ರ ಕೊಡಲಾಗಿದೆ. ನರೇಗಾ ಒಂದು ಯೋಜನೆಯಲ್ಲ ಇದು ಕಾನೂನು ಆಗಿದೆ. ಆದ್ದರಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಲಪಡಿಸಬೇಕು. ವಾರ್ಷಿಕ ಕನಿಷ್ಟ 250 ದಿನಗಳ ಕೆಲಸ, ಕನಿಷ್ಟ ಕೂಲಿ ದಿನ ಒಂದರ ರೂಪಾಯಿ 600.00 ವೇತನ, ಮಹಿಳಾ, ಪುರುಷ ಕೂಲಿಕಾರರಿಗೆ ಸಮಾನ ಕೆಲಸಕ್ಕೆ ಸಮಾನ ಕೂಲಿ ವೇತನ ಸಿಗಬೇಕು. 60 ವರ್ಷ ದಾಟಿದ ನರೇಗಾ ಕೂಲಿಕಾರರಿಗೆ ಮಾಸಿಕ ರೂಪಾಯಿ 3000.00 ಪಿಂಚಣಿ ಸೌಲಭ್ಯಕ್ಕಾಗಿ ಸರಕಾರವನ್ನು ಒತ್ತಾಯಿಸಲು ತೀವ್ರತರವಾದ ಹೋರಾಟ ರೂಪಿಸಬೇಕು ಎಂದು ಎ. ವಿಜಯ ರಾಘವನ್ ಸಮ್ಮೇಳನದಲ್ಲಿ ಕರೆ ನೀಡಿದರು.

ಕರ್ನಾಟಕದಲ್ಲಿ ರಾಜಕೀಯ ಡೊಂಬರಾಟ ನಡೆಯುತ್ತಿದ್ದು ಇಲ್ಲಿ ರಾಜಕೀಯ ಮಾರಾಟವಾಗುತ್ತಿದೆ. ಕಾಂಗ್ರೇಸ್, ಜೆಡಿಎಸ್ ಶಾಸಕರು ಅಧಿಕಾರದಾಹಿಯಾಗಿ ಬಿಜೆಪಿ ಗೆ ಹೋಗುತ್ತಿದ್ದಾರೆ. ಅನರ್ಹರಾದ ಇವರು ಚುನಾವಣೆಯಲ್ಲಿ ಗೆಲ್ಲುತ್ತಾರೆ. ಇದು ಪ್ರಜಾಪ್ರಭುತ್ವದ ಅಣಕವಾಗಿದೆ. ಆದ್ದರಿಂದ ಸಮ್ಮೇಳನದಲ್ಲಿ ಕೆಂಪಂಗಿ ಸಮವಸ್ತ್ರ ಧರಿಸಿ ಪ್ರತಿನಿಧಿಗಳಾಗಿ ಭಾಗವಹಿಸಿದ ನೀವು ಅದೇ ಉತ್ಸಾಹದಲ್ಲಿ ಬೀದಿಗಿಳಿದು ಕೆಂಬಾವುಟದ ಮೂಲಕ ಜನಪರ ಹೋರಾಟವನ್ನು ಕಟ್ಟಿ ಬೆಳೆಸಿ ಕರ್ನಾಟಕದಲ್ಲಿ ರಾಜಕೀಯ ಬದಲಾವಣೆಗೆ ಮುಂದಾಗಬೇಕು ಮತ್ತು ರಾಜ್ಯ ಸಮ್ಮೇಳನವನ್ನು ಬಹಳ ವಿಜೃಂಭಣೆಯಿಂದ ಅದ್ದೂರಿಯಾಗಿ ಭಾರಿ ದೊಡ್ಡ ಸಭಾಂಗಣದ ಹಾಲ್ ನಲ್ಲಿ ವ್ಯವಸ್ಥಿತವಾಗಿ ಯಶಸ್ವಿಯಾಗಿ ಕಾರ್ಯಕ್ರಮ ಮಾಡಿದರೆ ಮಾತ್ರ ಸಾಲದು, ಫಲಿತಾಂಶ ಬರುವ ರೀತಿಯಲ್ಲಿ ಸಮರಶೀಲ ಹೋರಾಟಗಳನ್ನು ಮುಂದಿನ ದಿನಗಳಲ್ಲಿ ಹೋರಾಟ ಮಾಡಬೇಕು. ನಮ್ಮ ಪ್ರತಿನಿಧಿ ಶಾಸಕರು ಇಲ್ಲ ಎಂದು ನಿರಾಸೆ ಪಡಬೇಕಾಗಿಲ್ಲ ಬೀದಿ ಬೀದಿ ಗಳಲ್ಲಿ ಜನಪರ ಹೋರಾಟ ಚಳವಳಿ ಕಟ್ಟಬೇಕು. ಸರಕಾರದ ನೀತಿ ಬದಲಾಯಿಸಲು ಸಾಧ್ಯ ಹೆಚ್ಚು ಹೆಚ್ಚು ಕೆಲಸ ಮಾಡಲು ನಮ್ಮನ್ನು ನಾವು ಸಮರ್ಪಿಸಿ ಕೊಳ್ಳಬೇಕು ಎಂದು ವಿಜಯ ರಾಘವನ್ ಕಿವಿಮಾತು ಹೇಳಿ ಎಚ್ಚರಿಸಿದರು.

ನೆರೆಯ ತೆಲಂಗಾಣ ರಾಜ್ಯ ಕೃಷಿಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟರಾಮುಲು ಸಮ್ಮೇಳನದ ಯಶಸ್ಸಿಗೆ ಶುಭಾಷಯ ಕೋರಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ. ಯು. ಬಸವರಾಜ, ಕಲಬುರಗಿ ರೈತ ಸಂಘದ ಜಿಲ್ಲಾಧ್ಯಕ್ಷ ಶರಣ ಬಸಪ್ಪ ಮಮಶೆಟ್ಟಿ, ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ (ಎನ್‌ಪಿಆರ್‌ಡಿ)ದ ಪ್ರಧಾನ ಕಾರ್ಯದರ್ಶಿ ರಂಗಪ್ಪ ದಾಸರ್, ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಜನವಾದಿ ಮಹಿಳಾ ಸಂಘದ ರಾಜ್ಯ ಉಪಾಧ್ಯಕ್ಷೆ ಡಾ. ಮೀನಾಕ್ಷಿ ಬಾಳಿ, ಅಖಿಲ ಭಾರತ ಜೀವವಿಮಾ ಪ್ರತಿನಿಧಿಗಳ ಸಂಘದ ರಾಜ್ಯ ಕಾರ್ಯದರ್ಶಿ ಶ್ರೀಮಂತ ಬೀರಾದಾರ್, ಕರ್ನಾಟಕ ರಾಜ್ಯ ಸರಕಾರಿ ಹಾಸ್ಟೇಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಮುಖಂಡ ಶಾಂತಪ್ಪ ಪೂಜಾರಿ ಸಮ್ಮೇಳನಕ್ಕೆ ಶುಭಾಷಯ ಕೋರಿ ಮಾತನಾಡಿದರು.

ಆದಿವಾಸಿ ಹಕ್ಕುಗಳ ಸಂಘಟನೆಯ ರಾಜ್ಯ ಸಂಚಾಲಕ ಎಸ್.ವೈ. ಗುರುಶಾಂತ ರವರು ಸಮ್ಮೇಳನಕ್ಕೆ ಶುಭಾಷಯ ಕೋರಿ ಕಳುಹಿಸಿದ ಸಂದೇಶ ಪತ್ರವನ್ನು ಹನುಮೇಗೌಡ ಓದಿ ಹೇಳಿದರು. ಈ ಸಂದರ್ಭದಲ್ಲಿ ಸಮ್ಮೇಳನವನ್ನು ವ್ಯವಸ್ಥಿತ ರೀತಿಯಲ್ಲಿ, ಯಶಸ್ವಿಯಾಗಿ ಜರಗಿಸಲು ಬಹಳ ದೊಡ್ಡ ವಿಶಾಲವಾದ ಹಾಲ್ ಎಚ್.ಬಿ. ಕೋಸಗಿ ಕಲ್ಯಾಣ ಮಂಟಪವನ್ನು ಉಚಿತವಾಗಿ ಒದಗಿಸಿ ಕೊಟ್ಟ ಮಾಲಕರಾದ ಡಾ. ಎಚ್.ಬಿ. ಕೋಸಗಿ ಯವರನ್ನು ಸಮ್ಮೇಳನದ ಸ್ವಾಗತ ಸಮಿತಿ ಪರವಾಗಿ ಸಮ್ಮೇಳನದಲ್ಲಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಹೃದಯ ಸ್ಪರ್ಷಿ ಸನ್ಮಾನ ಮಾಡಿ ಗೌರವಿಸಿದರು. ಸ್ವಾಗತ ಸಮಿತಿ ಅಧ್ಯಕ್ಷೆ ಕೆ.ನೀಲಾ, ಕಾರ್ಯಾಧ್ಯಕ್ಷ ಮಾರುತಿ ಗೋಖಲೆ, ಕೋಶಾಧಿಕಾರಿ ಎಂ.ಬಿ. ಸಜ್ಜನ್, ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ರಾಷ್ಟ್ರಾಧ್ಯಕ್ಷ ತಿರುನಾವುಕ್ಕರಸು, ಚಂದ್ರಪ್ಪ ಹೊಸ್ಕೇರ ಮೊದಲಾದವರು ಉಪಸ್ಥಿತರಿದ್ದರು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ 6ನೇ ಸಮ್ಮೇಳನ 2016 ರಲ್ಲಿ ಜರಗಿದ ನಂತರದ 3 ವರ್ಷ ಅವಧಿಯ ಚಟುವಟಿಕೆಯ ವರದಿಯನ್ನು ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರ ಮಂಡಿಸಿರುವುದರ ಮೇಲೆ 31 ಪ್ರತಿನಿಧಿ ಸಂಗಾತಿಗಳು ವಿಮರ್ಶೆಗೊಳಪಡಿಸಿ ಪ್ರತಿಕ್ರೀಯೆ ನೀಡಿ ಮಾತನಾಡಿದರು. ಚರ್ಚೆಯ ನಂತರ ವರದಿಯನ್ನು ಕೆಲವು ಸೇರ್ಪಡೆಗಳೊಂದಿಗೆ ಅಂಗೀಕರಿಸಲಾಯಿತು. ಆರಂಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಧ್ವಜಾರೋಹಣ ನೆರವೇರಿಸಿ, ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ, ಬಳಿಕ ಪ್ರತಿನಿಧಿ ಸಮಾವೇಶದ ಕಲಾಪ ನಡೆಯಿತು ಸಮ್ಮೇಳನದ ಕಲಾಪ ನಡೆಸಲು ಜಿ.ಎನ್. ನಾಗರಾಜ್, ದಾವಲ್ ಸಾಬ್ ನದಾಫ್, ಕೆ. ನಾಗರಾಜ, ವೆಂಕಟೇಶ ಕೋಣಿ, ಸರೋಜಮ್ಮ, ಮಲ್ಲಮ್ಮ ಕೋಡ್ಲಿ ಇವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಲಾಯಿತು.

ಅರ್ಹತಾ ಪತ್ರ ಪರಿಶೀಲನಾ ವರದಿಯನ್ನು ಸಂಚಾಲಕ ಕರಿಯಪ್ಪ ಅಚ್ಚೊಳ್ಳಿ ಮಂಡಿಸಿದರು. 15 ಜಿಲ್ಲೆಗಳಿಂದ 67 ಮಹಿಳಾ ಪ್ರತಿನಿಧಿಗಳನ್ನೊಳಗೊಂಡಂತೆ 215 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಖಿಲ ಭಾರತ ಸಮ್ಮೇಳನಕ್ಕೆ ಭಾಗವಹಿಸಲು ರಾಜ್ಯದಿಂದ 38 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಮುಂದಿನ ಸಾಲಿಗೆ ಅಧ್ಯಕ್ಷರಾಗಿ ನಿತ್ಯಾನಂದ ಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಚಂದ್ರಪ್ಪ ಹೊಸ್ಕೇರ ರವರನ್ನೊಳಗೊಂಡಂತೆ ನೂತನ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಮಾರೋಪ ಸಮಾರಂಭದಲ್ಲಿ ಸಂಘದ ರಾಷ್ಟ್ರಾಧ್ಯಕ್ಷ ತಿರುನಾವುಕ್ಕರಸು ಸಮಾರೋಪ ಭಾಷಣ ಮಾಡಿದರು. ಅಧ್ಯಕ್ಷ ಮಂಡಳಿಯ ಪರವಾಗಿ ಜಿ.ಎನ್. ನಾಗರಾಜ್ ಅಭಿನಂದಿಸಿ ಮಾತನಾಡಿದರು. ಸಮ್ಮೇಳನದ ಯಶಸ್ಸಿಗೆ ದುಡಿದ ಸಂಗಾತಿಗಳಿಗೆ ಅಭಿನಂದಿಸಲಾಯಿತು. 'ಗೆಲುವು ನಮ್ಮದು' ಹಾಡಿನೊಂದಿಗೆ ಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು.



ಸಮ್ಮೇಳನದಲ್ಲಿ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು

1) ಅಂಗನವಾಡಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ
2) ಉದ್ಯೋಗ ಖಾತರಿ ಯೋಜನೆಯಲ್ಲಿ ವರ್ಷಕ್ಕೆ 250 ದಿನ ಕೆಲಸ, 600 ರೂ ಕೂಲಿ ಕೊಡಲು, ಗುತ್ತಿಗೆದಾರರ ನ್ನು ತಡೆಗಟ್ಟಿ,ಕಾಯಕ ಬಂಧು ಗಳಿಗೆ ಗುರುತಿನ ಚೀಟಿ, ಪ್ರೋತ್ಸಾಹ ಧನ ನೀಡಲು ಒತ್ತಾಯಿಸಿ
3) ಅಸ್ಪೃಶ್ಯತೆ ಆಚರಣೆ ವಿರೋಧಿಸಿ ಒತ್ತಾಯಿಸಿ
4) ಹಾಸ್ಟೆಲ್ ಸಿಬ್ಬಂದಿಗಳ ಸೇವಾ ಭದ್ರತೆಗೆ ಒತ್ತಾಯಿಸಿ
5) ಕೃಷಿ ಕೂಲಿಕಾರರಿಗೆ ಆರ್.ಬಿ.ಐ. ನಿರ್ದೇಶನದಂತೆ ಬ್ಯಾಂಕ್ ಸಾಲಕ್ಕಾಗಿ ಇತರೆ ನಿಗಮಗಳ ಸಬ್ಸಿಡಿ ಸಹಿತ ಸಾಲ ನೀಡಲು ಒತ್ತಾಯಿಸಿ
6) ನೀರಾದಾರರ ಮೇಲಿನ ದಾಳಿ ನಿಲ್ಲಿಸುವ ಮತ್ತು ಸಮಗ್ರ ನೀರಾ ನೀತಿಯನ್ನು ರೂಪಿಸಲು ಒತ್ತಾಯಿಸಿ
7) ಪಡಿತರ ವ್ಯವಸ್ಥೆಯನ್ನು ಬಲಪಡಿಸಲು ಸಮರ್ಪಕ ಆಹಾರ ವಿತರಿಸಲು. ಹೆಬ್ಬೆಟು ಹಾಕಿಸುವ ಪದ್ಧತಿಯನ್ನು ಕೈಬಿಡಲು ಒತ್ತಾಯಿಸಿ
8) ಬಗರ ಹುಕುಂ ಸಾಗುವಳಿ ಮತ್ತು ಅರಣ್ಯ ಭೂಮಿ ಸಕ್ರಮ ಗೊಳಿಸಲು ಒತ್ತಾಯಿಸಿ
9) ಕೃಷಿ ಕೂಲಿಕಾರರಿಗೆ ಸಮಗ್ರ ಕಾನೂನು ಜಾರಿ ಮತ್ತು ಕೂಲಿಕಾರರ ಕಲ್ಯಾಣ ಮಂಡಳಿ ರಚನೆಗಾಗಿ ಒತ್ತಾಯಿಸಿ
10) ಸರ್ಕಾರಿ ವಾಸ ಮಾಡುತ್ತಿರುವ ಬಡವರಿಗೆ ಹಕ್ಕು ಪತ್ರ ನೀಡಲು, ನಿವೇಶನ ರಹಿತರಿಗೆ ನಿವೇಶನ ಒತ್ತಾಯಿಸಿ ಮತ್ತು ನೀಡದೇ ಇರುವುದನ್ನು ಖಂಡಿಸಿ
11) ಮಹಿಳೆಯರ ಮೇಲಿನ ದೌರ್ಜನ್ಯ ವನ್ನು ಖಂಡಿಸಿ
12) ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸಲು ಒತ್ತಾಯಿಸಿ

ಪೌರತ್ವ ತಿದ್ದುಪಡಿ ಕಾಯ್ದೆ CAA ವಿರೋಧಿಸಿ ರಾಜ್ಯದಾದ್ಯಂತ ಹೋರಾಟ



















ಪೌರತ್ವ ತಿದ್ದುಪಡಿ ಕಾಯ್ದೆಯ ಮೊದಲ ಬಲಿಪಶುಗಳು ದೇಶದ ಮೂಲ ನಿವಾಸಿಗಳು– ನ್ಯಾ.ಎಚ್.ಎಸ್. ನಾಗ್‌ಮೋಹನ್ ದಾಸ್

ದೇಶದ ಸಂವಿಧಾನಕ್ಕೆ 70 ವರ್ಷಗಳು ತುಂಬುತ್ತಿರುವ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುತ್ತಾ ಬಂದಿರುವ, ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರೂ ಹಾಲಿ ರಾಜ್ಯದ ಪರಿಶಿಷ್ಟ ಜಾತಿ ವರ್ಗಗಳ ಸೇರ್ಪಡೆಯ ಬಗ್ಗೆ ಸರಕಾರ ನೇಮಿಸಿರುವ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ರಾಂತ ನ್ಯಾ. ಎಚ್.ಎಸ್. ನಾಗ್‌ಮೋಹನ್ ದಾಸ್ ಈ ದೇಶದಲ್ಲಿ ಸಾಕಷ್ಟು ವಿವಾದ ಸೃಷ್ಟಿಸಿರುವ ಪೌರತ್ವ ತಿದ್ದುಪಡಿ ಕಾಯ್ದೆ ಬಗ್ಗೆ 'ವಾರ್ತಾಭಾರತಿ' ಜೊತೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

*** ದೇಶದ ಸಂವಿಧಾನಕ್ಕೆ 70 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ತಮ್ಮ ಅಭಿಪ್ರಾಯ ವೇನು?**

ನ್ಯಾ.ನಾಗ್‌ಮೋಹನ್ ದಾಸ್: ದೇಶದ ಸಂವಿಧಾನಕ್ಕೆ 70 ವರ್ಷಗಳಾಗಿವೆ. ಸಾಕಷ್ಟು ತಿದ್ದುಪಡಿಗಳು ಆಗಿವೆ. ದೇಶದ ಆಡಳಿತ ವ್ಯವಸ್ಥೆಯಲ್ಲಿ ಕಾರ್ಯಾಂಗ, ಶಾಸಕಾಂಗ ಎರಡೂ ವಿಫಲವಾಗಿವೆ. ದೇಶದ ಆರ್ಥಿಕ ವ್ಯವಸ್ಥೆ ದಿವಾಳಿಯ ಅಂಚಿಗೆ ತಲುಪಿದೆ. ದೇಶದಲ್ಲಿ 60 ಲಕ್ಷ ಉದ್ಯೋಗ ಭರ್ತಿಯಾಗದೆ ಸರಕಾರಿ ಕ್ಷೇತ್ರದಲ್ಲಿ ಖಾಲಿ ಇದೆ. ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣ, ಹೊರಗುತ್ತಿಗೆ ನೀಡುವ ತೀರ್ಮಾನ ತೆಗದುಕೊಳ್ಳಲಾಗುತ್ತಿದೆ. ನಮಗೆ ಇನ್ನೂ ಹಣ ಹೆಚ್ಚು ಕೊಟ್ಟರೆ ದಿನನಿತ್ಯದ ಸಾಮಗ್ರಿಗಳು, ಪೆಟ್ರೋಲ್ ದೊರೆಯುತ್ತದೆ ಎನ್ನುವುದು ಬಿಟ್ಟರೆ ಬೇರೆ ಆಶಾದಾಯಕ ಪರಿಸ್ಥಿತಿ ಇಲ್ಲ. ಸಂಸತ್ತಿನಲ್ಲಿ ಈ ವಿಚಾರಗಳ ಬಗ್ಗೆ ಧ್ವನಿ ಎತ್ತಬೇಕಾದವರು ಮೌನವಹಿಸಿದ್ದಾರೆ. ಗಂಭೀರ ಚರ್ಚೆಗಳು ನಡೆಯುತ್ತಿಲ್ಲ. ಎನ್‌ಆರ್‌ಸಿ, ಪೌರತ್ವ ಕಾಯ್ದೆ ತಿದ್ದುಪಡಿ ಇತ್ಯಾದಿ ರೊಟ್ಟಿ ಕೇಳುವವರಿಗೆ ದಾರಿ ತಪ್ಪಿಸಲು ಸರ್ಕಸ್ ತೋರಿಸಿದಂತೆ ಎನ್ನುವಂತಾಗಿದೆ. ಈಗ ನಮ್ಮ ಪಾಲಿಗೆ ಆಶಾದಾಯಕವಾಗಿರುವುದು ಮೂರನೇ ಅಂಗವಾದ ನ್ಯಾಯಾಂಗ. ನ್ಯಾಯಾಂಗ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಸಾಕಷ್ಟು ತೀರ್ಪುಗಳನ್ನು ನೀಡಿದೆ. ಸಂವಿಧಾನದ ಆಶಯವನ್ನು ಎತ್ತಿಹಿಡಿಯಬೇಕಾದುದು ಅದರ ಹೊಣೆಗಾರಿಕೆ. ಕೆಲವು ಸಂದರ್ಭದಲ್ಲಿ ನ್ಯಾಯಾಂಗ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯದೆ ಇದ್ದ ಉದಾಹರಣೆಗಳು ಕೂಡಾ ಇವೆ. ಉದಾಹರಣೆಗೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇಂತಹ ಪ್ರಕರಣ ನಡೆದಿದೆ. ಆದರೆ ನಾವು ನ್ಯಾಯಾಂಗದ ಮೇಲೆ ನಂಬಿಕೆ ಕಳೆದುಕೊಳ್ಳಬಾರದು.

*** ದೇಶದಲ್ಲಿ ಎನ್‌ಆರ್‌ಸಿ ಮತ್ತು ಪೌರತ್ವ ತಿದ್ದುಪಡಿ ಕಾಯ್ದೆ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಸುಪ್ರೀಂಕೋರ್ಟ್ ಸಂವಿಧಾನದ ಪರ ನಿಲುವು ತಳೆಯ ಬಹುದೇ?**

ನ್ಯಾ.ನಾಗ್ ಮೋಹನ್‌ದಾಸ್: ಸಂವಿಧಾನ ವಿರೋಧಿ ಕಾಯ್ದೆಯನ್ನು ರಾಜ್ಯ ಸರಕಾರಗಳು ಪಾಲಿಸದೆ ಇದ್ದರೆ ಕೇಂದ್ರ ಸರಕಾರ ರಾಜ್ಯ ಸರಕಾರದ ಮೇಲೆ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ. ಆದರೆ ಕೆಲವು ಕಾಯ್ದೆಗಳನ್ನು ರಾಜ್ಯ ಸರಕಾರಗಳು ಹಿಂದೆ ಜಾರಿ ಮಾಡಿದ್ದರೂ ಬಳಿಕ ಕೇಂದ್ರ ಸರಕಾರ ಅದೇ ವಿಷಯಕ್ಕೆ ಸಂಬಂಧಿಸಿದ ಕಾನೂನು ಜಾರಿಗೆ ತಂದಾಗ ಕೇಂದ್ರ ಸರಕಾರದ ಕಾನೂನು ವ್ಯಾಪ್ತಿ ರಾಜ್ಯಸರಕಾರಕ್ಕೂ ವಿಸ್ತರಿಸಲ್ಪಡುತ್ತದೆ. ಉದಾಹರಣೆಗೆ 1985ರಲ್ಲಿ ಕರ್ನಾಟಕದಲ್ಲಿ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕಾಲದಲ್ಲಿ ಹಿಂದೂ ಉತ್ತರದಾಯಿತ್ವ ಕಾಯ್ದೆಗೆ ತಿದ್ದುಪಡಿ ತಂದು ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲನ್ನು ನೀಡುವ ಕಾಯ್ದೆ ಜಾರಿಗೆ ತರಲಾಯಿತು. ಕೇಂದ್ರ ಸರಕಾರ ಈ ರೀತಿಯ ಕಾಯ್ದೆಯನ್ನು 2005ರಲ್ಲಿ ಜಾರಿಗೆ ತಂದಿದೆ. ಬಳಿಕ



ಕೇಂದ್ರದ ಕಾನೂನು ರಾಜ್ಯಕ್ಕೂ ಅನ್ವಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರಗಳು ತೆಗೆದುಕೊಳ್ಳುವ ನಿರ್ಧಾರ ಮುಖ್ಯವಾಗುತ್ತದೆ. ಕೇಂದ್ರ ಸರಕಾರಗಳು ರಾಜ್ಯಗಳ ಮೇಲೆ ಈ ಕಾನೂನನ್ನು ಜಾರಿಗೊಳಿಸಲು ಒತ್ತಡ ಹೇರುವಂತಿಲ್ಲ. ಸುಪ್ರೀಂ ಕೋರ್ಟ್ ಪೌರತ್ವ ತಿದ್ದುಪಡಿ ಕಾಯ್ದೆಯ ಬಗ್ಗೆ ಯಾವ ನಿಲುವು ತೆಗೆದುಕೊಳ್ಳುತ್ತದೆ ಎನ್ನುವ ಆತಂಕ ನನಗೂ ಇದೆ. ಒಂದು ವೇಳೆ ಅದು ನೀಡುವ ತೀರ್ಪಿನ ಬಗ್ಗೆ ಸಂದೇಹಗಳಿದ್ದರೆ ಆ ತೀರ್ಪನ್ನು ಪ್ರಶ್ನಿಸಬಹುದಾಗಿದೆ. ಆದರೂ ಇದು ಈಗಿನ ವಾತಾವರಣದಲ್ಲಿ ನೂರಕ್ಕೆ ನೂರು ಸಮರ್ಪಕವಾಗಿ ಇತ್ಯರ್ಥವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

*** ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮತ್ತು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಲು ಪ್ರಮುಖ ಕಾರಣಗಳೇನು?**

ನ್ಯಾ.ನಾಗ್‌ಮೋಹನ್ ದಾಸ್: ಭಾರತಕ್ಕೆ ಒಂದು ಕಾಲದಲ್ಲಿ ಆಹಾರ ಹುಡುಕಿಕೊಂಡು, ಕೃಷಿಗಾಗಿ, ನದಿ ತೀರದಲ್ಲಿ ವಾಸಮಾಡಲು, ವ್ಯಾಪಾರ ಮಾಡಲು, ಆಕ್ರಮಣಕಾರರಾಗಿ ಇಲ್ಲಿನ ವಿಶ್ವ ವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಲು ಸಾಕಷ್ಟು ಮಂದಿ ಬೇರೆ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ಬಂದಿದ್ದಾರೆ. ಇಂತಹ ವಲಸಿಗರು ಇಲ್ಲಿ ವಾಸಮಾಡುವುದರ ಜೊತೆ ಇಲ್ಲಿನ ಜನರ ಸಂಪರ್ಕ ಹೊಂದಿ ಹೊಸ ಜನಾಂಗ ಸೃಷ್ಟಿಯಾಗಿದೆ. ಇದು ಅಧ್ಯಯನವೊಂದರಿಂದ ಬೆಳಕಿಗೆ ಬಂದಿರುವ ಸಂಗತಿ. ಆ ಕಾರಣದಿಂದ ಭಾರತ ದೇಶದಲ್ಲಿರುವ ಜನಸಂಖ್ಯೆಯಲ್ಲಿ ಶೇ. 98 ವಲಸಿಗರ ಮೂಲದವರು, ಶೇ. 8 ಮಂದಿ ಮಾತ್ರ ಇಲ್ಲಿನ ಮೂಲನಿವಾಸಿಗಳಾಗಿರುವವರು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ 2011ರಲ್ಲಿ ಕೈಲಾಸಂ ಪ್ರಕರಣದಲ್ಲಿ ತೀರ್ಪು ನೀಡಿದೆ. ದೇಶದಲ್ಲಿ 4,635 ಜಾತಿ, ಉಪಜಾತಿಗಳಿವೆ. ಬೇರೆ ಬೇರೆ ಕಾರಣಗಳಿಗೆ ಈ ದೇಶಕ್ಕೆ ವಲಸೆ ಬಂದ ಜನರಿಂದ ರೂಪುಗೊಂಡ ಈ ಸಮುದಾಯವಿರುವಾಗ ಪೌರತ್ವ ತಿದ್ದುಪಡಿ ಕಾಯ್ದೆಯಲ್ಲಿ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ, ಕ್ರೈಸ್ತರು ಮಾತ್ರ ಗುರುತಿಸಿರುವುದು, ಅಫ್ಘಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾ ದೇಶದ ವಲಸಿಗರನ್ನು ಗುರಿ ಮಾಡಿ ಧರ್ಮದ ಆಧಾರವನ್ನು ಪ್ರಸ್ತಾಪಿಸಿ ಕಾನೂನು ರೂಪಿಸಿರುವುದು ಸಂವಿಧಾನ ಮೂಲ ಆಶಯಕ್ಕೆ ವಿರುದ್ಧವಾಗಿದೆ. ಭಾರತದ ಪೌರತ್ವ ತಿದ್ದುಪಡಿ ಕಾಯ್ದೆ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಎನ್‌ಆರ್‌ಸಿ ಪ್ರಕ್ರಿಯೆ ಮತ್ತು ಪೌರತ್ವ ತಿದ್ದುಪಡಿ ಕಾಯ್ದೆ ಈ ಹಿಂದೆ ಸಂವಿಧಾನ ನೀಡಿರುವ ಪೌರತ್ವಕ್ಕಿಂತ ಭಿನ್ನವಾಗಿದೆ. 1950ರಲ್ಲಿ ಸಂವಿಧಾನ ರಚನೆಯಾದಾಗ ದೇಶದ ಸಂವಿಧಾನದ ಅನುಚ್ಛೇದ 5ರಿಂದ 11 ಹೇಳಿರುವ ಪ್ರಕಾರ ಭಾರತದಲ್ಲಿ ಜನಿಸಿದವರು, ತಂದೆ ತಾಯಿಯ ಪೈಕಿ ಒಬ್ಬರು ಭಾರತದಲ್ಲಿ ಜನಿಸಿದ್ದರೆ ಅವರ ಮಕ್ಕಳು, ಭಾರತದಲ್ಲಿ ವಾಸಿಸುತ್ತಿದ್ದವರು, ಸಂವಿಧಾನ ಅನುಷ್ಠಾನ ಗೊಳಿಸುವ 5ವರ್ಷ ಹಿಂದೆ ಭಾರತದಲ್ಲಿ ವಾಸಿಸುತ್ತಿದ್ದವರು ಇಲ್ಲಿನ ನಾಗರಿಕರಾಗುತ್ತಾರೆ. ಈ ಪೌರತ್ವ ಕಾಯ್ದೆ ತಿದ್ದುಪಡಿಗೆ ಹೊರಟಿರುವುದು ನಾಗರಿಕತ್ವದ ಹಕ್ಕಿನ ಉಲ್ಲಂಘನೆಯಾಗಿದೆ, ಜೊತೆಗೆ ಭಾರತದ ಸಂವಿಧಾನದ ಅನುಚ್ಛೇದ 14 ಮತ್ತು 21ರಲ್ಲಿ ಹೇಳುವ ಸಮಾನತೆಯ ಹಕ್ಕಿನ ವಿರುದ್ಧವಾದ ಕಾಯ್ದೆಯಾಗಿದೆ. ಧರ್ಮದ ಆಧಾರದಲ್ಲಿ ಕಾನೂನು ರಚನೆ ಮಾಡುವುದು ಭಾರತದ ಸಂವಿಧಾನದ ಮೂಲಕ ಹೇಳಿರುವ ಮೂಲ ಸಂರಚನೆಯಾದ ಜಾತ್ಯತೀತತೆಯ ವಿರುದ್ಧವಾದ ಕಾಯ್ದೆಯಾಗಿದೆ. ಈ ಬಗ್ಗೆ 1970ರಲ್ಲಿ ಕೇಶವಾನಂದ ಭಾರತಿ ಸ್ವಾಮೀಜಿಗಳ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. ಇನ್ನೊಂದು ಪ್ರಮುಖ ಅಂಶ ಈ ದೇಶದ ಮೂಲನಿವಾಸಿಗಳ ಪ್ರಶ್ನೆ. ಅವರಲ್ಲಿ ಮುಖ್ಯವಾಗಿ ಬುಡಕಟ್ಟುಗಳ ಜನರು. ಅಕ್ಷರದಿಂದ ವಂಚಿತರಾದವರು. ಶತಮಾನಗಳಿಂದ ಬಡತನ, ಶೋಷಣೆಗೆ ಒಳಗಾದವರು. ಅವರ ಬಳಿ ಇಲ್ಲಿನವರು ಎಂದು ಹೇಳಿಕೊಳ್ಳುವ ಯಾವ ದಾಖಲೆಗಳೂ ಇಲ್ಲ. ಅವರು ಈ ಕಾಯ್ದೆಯ ಮೊದಲ ಬಲಿಪಶುಗಳಾಗುತ್ತಿದ್ದಾರೆ. ಆದುದರಿಂದ ಇದೊಂದು ಆದಿವಾಸಿಗಳ ವಿರುದ್ಧವಾದ ಕಾನೂನಾಗಿದೆ. ಭಾರತದ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಮುಖ್ಯ ಅಂಶ. ಇನ್ನೊಂದು ಈ ದೇಶದ ಬಹುತ್ವದ ಸಂರಕ್ಷಣೆಯ ಅನಿವಾರ್ಯ. ಇದು ಕೇವಲ ಹಿಂದೂ–ಮುಸ್ಲಿಮರ ನಡುವಿನ ವಿಷಯವಲ್ಲ. ಉದಾಹರಣೆಗೆ ದೇಶದಲ್ಲಿ ಪ್ರಥಮ ಬಾರಿಗೆ ಅಸ್ಸಾಮಿನಲ್ಲಿ ಎನ್‌ಆರ್‌ಸಿ ಪ್ರಕ್ರಿಯೆ ಆರಂಭವಾದ ಬಳಿಕ 19 ಲಕ್ಷ ಮಂದಿ ಎನ್‌ಆರ್‌ಸಿ ಪ್ರಕ್ರಿಯೆಯಿಂದ ಹೊರಗುಳಿದರು. ಈ ಪೈಕಿ 12 ಲಕ್ಷ ಮಂದಿ ಮುಸ್ಲಿಮರಲ್ಲ. ಆರು ಲಕ್ಷ ಮಂದಿ ಮಾತ್ರ ಮುಸ್ಲಿಮರು. ಈ 19 ಲಕ್ಷ ಜನ ಯಾವ ದೇಶದಿಂದ ಬಂದವರು ಎಂದು ಪತ್ತೆ ಹಚ್ಚಲು ಇನ್ನೂ ಸಾಧ್ಯವಾಗಿಲ್ಲ. ಇವರನ್ನು ಯಾವ ದೇಶಕ್ಕೆ ಕಳುಹಿಸುತ್ತಾರೆ? ಅವರನ್ನು ಬೇರೆ ದೇಶಕ್ಕೆ ಕಳುಹಿಸಿದರೆ ಆ ದೇಶದವರು ಇವರು ನಮ್ಮ ದೇಶದವರಲ್ಲ ಎಂದು ತಿರಸ್ಕರಿಸಿದರೆ ಅವರು ಎಲ್ಲಿಗೆ ಹೋಗಬೇಕು?. ಅವರ ಪರಿಸ್ಥಿತಿ ಏನಾಗಬಹುದು?. ಒಂದು ವೇಳೆ ಅವರನ್ನು ನಿರಾಶ್ರಿತರ ಶಿಬಿರದಲ್ಲಿ ಉಳಿಸಿದರೆ ಅವರ ಖರ್ಚುಗಳನ್ನು ಯಾರು ಭರಿಸುತ್ತಾರೆ? ಸ್ವಾತಂತ್ರ ಪೂರ್ವದಲ್ಲಿ ಬ್ರಿಟಿಷರು ಪ್ಲಾಂಟೇಶನ್ ಕಾರ್ಮಿಕರಾಗಿ ಭಾರತದ ಹೊರಗಿನ ದೇಶಗಳ ಕಾರ್ಮಿಕರನ್ನು, ದೇಶದ ವಿವಿಧ ರಾಜ್ಯಗಳ ಕಾರ್ಮಿಕರನ್ನು ತಂದು ದುಡಿಸುತ್ತಿದ್ದರು. ಅಂತಹ ಕಾರ್ಮಿಕರು ಸಂಘಟಿತರಾಗುವುದನ್ನು ತಡೆಯುವುದು ಬ್ರಿಟಿಷರ ಗುರಿಯಾಗಿತ್ತು. ಈಗ ಪೌರತ್ವದ ಪ್ರಶ್ನೆ ಬಂದಾಗ ಅವರು ಸಮಸ್ಯೆಗೊಳಗಾಗುತ್ತಾರೆ. ಈ ಎಲ್ಲಾ ಪ್ರಶ್ನೆಗಳಿಗೆ ಈಗಿನ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ ಮಾಡಲು ಹೊರಟವರ ಬಳಿ ಉತ್ತರ ಇಲ್ಲ. ಇದರಿಂದ ದೇಶದ ಎಲ್ಲಾ ವರ್ಗದ, ಸಮುದಾಯದ ಜನರು ಸಂಕಷ್ಟಕ್ಕೀಡಾಗುತ್ತಾರೆ. ಈ ಕಾಯ್ದೆಯ ಬಳಿಕ ಅತಿಕ್ರಮವಾಗಿ ಪ್ರವೇಶ ಮಾಡಿದವರು ಎಂದು ಜನರನ್ನು ಪ್ರತ್ಯೇಕಿಸಿದರೆ ಅವರಿಗೆ ಸಂವಿಧಾನ ದತ್ತವಾಗಿ ದೇಶದಿಂದ ಸಿಗಬೇಕಾದ ಸರಕಾರಿ ಸೌಲಭ್ಯಗಳಿಂದ, ಹಕ್ಕುಗಳಿಂದ ವಂಚಿತರಾಗುತ್ತಾರೆ. ಆದುದರಿಂದ ಇದೊಂದು ಜನ ವಿರೋಧಿಯಾದ ಕಾಯ್ದೆಯಾಗಿದೆ ಎಂದು ನಾನು ಹೇಳುತ್ತೇನೆ.

*** ಇಂತಹ ಮಹತ್ವದ ಬಿಲ್ ಸಂಸತ್‌ನಲ್ಲಿ ಹೇಗೆ ಸುಲಭವಾಗಿ ಮಂಜೂರಾಯಿತು?**

ನ್ಯಾ.ನಾಗ್‌ಮೋಹನ್ ದಾಸ್: ನಮ್ಮ ಸಂಸತ್‌ನಲ್ಲಿ ಇಂತಹ ವಿಚಾರಗಳ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿಲ್ಲ. ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವ ಹಕ್ಕು ನಮಗಿದೆ. ಕಳೆದ 18 ವರ್ಷಗಳಲ್ಲಿ ಶೇ. 47 ಕರಡು ಮಸೂದೆಗಳು ಚರ್ಚೆಗಳಿಲ್ಲದೆ ಸಂಸತ್‌ನಲ್ಲಿ ಪಾಸಾಗಿವೆ ಣಟಿಜಜಜುಟಿಜಜ. ಸಂಸತ್ತಿನ ಅಧಿವೇಶನದ ಕಡೆಯ ದಿನ ಶೇ. 60 ಬಿಲ್‌ಗಳು ಪಾಸಾಗುತ್ತವೆ. ಸಂಸತ್‌ನ ಅಧಿವೇಶನದ ಶೇ. 23 ಭಾಗ ಗಲಾಟೆಯಲ್ಲಿ ವ್ಯರ್ಥವಾಗುತ್ತವೆ. ಇಲ್ಲಿ ಆಯ್ಕೆಯಾಗುವವರು ಕಡಿಮೆ ಶಿಕ್ಷಣ ಪಡೆದವರಲ್ಲ. ಶೇ. 73 ಮಂದಿ ಪದವಿ, ಸ್ನಾತಕೋತ್ತರ ಪದವಿ ಪಡೆದವರು. ಶೇ.27ರಷ್ಟು ಪದವಿಗಿಂತ ಕಡಿಮೆ ಓದಿದವರು. ಇಲ್ಲಿ ಶಿಕ್ಷಣ ಹೆಚ್ಚು ಪಡೆದವರು ಬೇಕು ಎನ್ನುವುದು ಮುಖ್ಯವಲ್ಲ. ಸಂಸತ್‌ನಲ್ಲಿ ನಮಗೆ ಬೇಕಾಗಿರುವುದು ಜನರ ಬಗ್ಗೆ ಕಾಳಜಿ ಇರುವವರು ಎಷ್ಟಿದ್ದಾರೆ ಎನ್ನುವುದು ಮುಖ್ಯ.

*** ಈಶಾನ್ಯ ರಾಜ್ಯಗಳಲ್ಲಿ ಈ ಪ್ರತಿಭಟನೆ ಹೆಚ್ಚು ಏಕೆ?**

ನ್ಯಾ.ನಾಗ್‌ಮೋಹನ್ ದಾಸ್: ದೇಶದಲ್ಲಿ ಪ್ರಥಮ ಬಾರಿಗೆ ಎನ್‌ಆರ್‌ಸಿಯನ್ನು ಜಾರಿಗೆ ತಂದಿರುವುದು ಅಸ್ಸಾಮಿನಲ್ಲಿ. ನಾನು ತ್ರಿಪುರಾಕ್ಕೆ ಭೇಟಿ ನೀಡಿದಾಗ ಅಲ್ಲಿನ ಗಡಿ ಭಾಗಕ್ಕೆ ಒಂದು ಬಾರಿ ಹೋಗುವ ಸಂದರ್ಭ ಬಂತು. ಆಗ ಗಡಿಭಾಗದಲ್ಲಿ ಪ್ರತಿನಿತ್ಯ ಬಾಂಗ್ಲಾದಿಂದ ಕಾರ್ಮಿಕರು ಬೆಳಗ್ಗೆ ಬಂದು ಇಲ್ಲಿ ಕೆಲಸ ಮಾಡಿ ಸಂಜೆ ಹೋಗುತ್ತಿದ್ದರು. ವಿಚಾರಿಸಿದಾಗ ಅಲ್ಲಿ ಬಡತನ, ಅದಕ್ಕಾಗಿ ದುಡಿಯಲು ಇಲ್ಲಿಗೆ ಬರುತ್ತಾರೆ ಎನ್ನುತ್ತಾರೆ. ಹೀಗೆ ಬಂದವರು ಇಲ್ಲಿ ಮದುವೆಯಾಗಿ ನೆಲೆಸಿದವರು ಇದ್ದಾರೆ. ಇದು ಸಾಮಾನ್ಯ. ಎನ್‌ಆರ್‌ಸಿ ಪ್ರಕ್ರಿಯೆಯಲ್ಲಿ ಮುಸ್ಲಿಮರನ್ನು ಮಾತ್ರ ಗುರಿ ಮಾಡಿರಲಿಲ್ಲ. ಈಗ ಬಂದಿರುವ ಪೌರತ್ವ ತಿದ್ದುಪಡಿ ಕಾಯ್ದೆಯಲ್ಲಿ ಮುಸ್ಲಿಮರನ್ನು ಮಾತ್ರ ಗುರಿ ಮಾಡಲಾಗಿದೆ. ಸಹಜವಾಗಿ ಆದಿವಾಸಿಗಳು ಹೆಚ್ಚಾಗಿರುವ ಪ್ರದೇಶದಲ್ಲಿ ಅವರು ಹೆಚ್ಚು ಪ್ರತಿಭಟನೆ ಮಾಡುತ್ತಿದ್ದಾರೆ.

*** ಸಂವಿಧಾನದ ಆಶಯಗಳನ್ನು ರಕ್ಷಿಸಬೇಕಾದರೆ ಮುಂದೆ ಯಾವ ದಾರಿ?**

ನ್ಯಾ.ನಾಗ್ ಮೋಹನ್ ದಾಸ್: ಪೌರತ್ವ ತಿದ್ದುಪಡಿ ಕಾಯ್ದೆಯಿಂದ ಸರಕಾರ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಕೆಲ ಕಾಲ ಜನರಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸಬಹುದು. ವಾಸ್ತವದಲ್ಲಿ ಇದು ಜಾರಿಯಾಗುವ ಕಾಯ್ದೆಯಲ್ಲ. ದೇಶದ ಸಂವಿಧಾನಕ್ಕೆ ಬುದ್ಧನ ಧರ್ಮ, ಬಸವಣ್ಣನ ಸಮಾನತೆ, ಅಂಬೇಡ್ಕರರ ಸಾಮಾಜಿಕ ನ್ಯಾಯದ ತಳಹದಿ ಆಧಾರ. ಇವುಗಳ ಆಶಯದೊಂದಿಗೆ ಸಂವಿಧಾನ ನಿಂತಿದೆ. ಈ ಹಿನ್ನೆಲೆಯಲ್ಲಿ ಈ ರೀತಿಯ ಜನವಿರೋಧಿ ನೀತಿಯ ವಿರುದ್ಧ ಸೈದ್ಧಾಂತಿಕ ಸಂಘರ್ಷ ಅನಿವಾರ್ಯ.

ಪೌರತ್ವ ಕಾಯ್ದೆ ತಿದ್ದುಪಡಿಗೆ ಹೊರಟಿರುವುದು ನಾಗರಿಕತ್ವದ ಹಕ್ಕಿನ ಉಲ್ಲಂಘನೆಯಾಗಿದೆ, ಜೊತೆಗೆ ಭಾರತದ ಸಂವಿಧಾನದ ಅನುಚ್ಛೇದ 14 ಮತ್ತು 21ರಲ್ಲಿ ಹೇಳುವ ಸಮಾನತೆಯ ಹಕ್ಕಿನ ವಿರುದ್ಧವಾದ ಕಾಯ್ದೆಯಾಗಿದೆ. ಧರ್ಮದ ಆಧಾರದಲ್ಲಿ ಕಾನೂನು ರಚನೆ ಮಾಡುವುದು ಭಾರತದ ಸಂವಿಧಾನದ ಮೂಲಕ ಹೇಳಿರುವ ಮೂಲ ಸಂರಚನೆಯಾದ ಜಾತ್ಯತೀತತೆಯ ವಿರುದ್ಧವಾದ ಕಾಯ್ದೆಯಾಗಿದೆ. ಈ ಬಗ್ಗೆ 1970ರಲ್ಲಿ ಕೇಶವಾನಂದ ಭಾರತಿ ಸ್ವಾಮೀಜಿಗಳ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. ಇನ್ನೊಂದು ಪ್ರಮುಖ ಅಂಶ ಈ ದೇಶದ ಮೂಲನಿವಾಸಿಗಳ ಪ್ರಶ್ನೆ. ಅವರಲ್ಲಿ ಮುಖ್ಯವಾಗಿ ಬುಡಕಟ್ಟುಗಳ ಜನರು. ಅಕ್ಷರದಿಂದ ವಂಚಿತರಾದವರು. ಶತಮಾನಗಳಿಂದ ಬಡತನ, ಶೋಷಣೆಗೆ ಒಳಗಾದವರು. ಅವರ ಬಳಿ ಇಲ್ಲಿನವರು ಎಂದು ಹೇಳಿಕೊಳ್ಳುವ ಯಾವ ದಾಖಲೆಗಳೂ ಇಲ್ಲ. ಅವರು ಈ ಕಾಯ್ದೆಯ ಮೊದಲ ಬಲಿಪಶುಗಳಾಗುತ್ತಿದ್ದಾರೆ. ಆದುದರಿಂದ ಇದೊಂದು ಆದಿವಾಸಿಗಳ ವಿರುದ್ಧವಾದ ಕಾನೂನಾಗಿದೆ.

ಕೃಪೆ: ವಾರ್ತಭಾರತಿ

ಶತಮಾನೋತ್ಸವ ಲೇಖನ ಮಾಲೆ-7

ಕಾರ್ಮಿಕರ ಮತ್ತು ರೈತರ ಪಕ್ಷ ಸ್ಥಾಪನೆ



ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಸಾಧಿಸಲು ಕಾರ್ಮಿಕ ವರ್ಗ, ರೈತರು ಮತ್ತು ಪುಟ್ಟ ಬಂಡವಾಳಶಾಹಿಗಳ ಐಕ್ಯರಂಗದ ಸಂಘಟನಾ ರೂಪ ಎಂದು ಭಾವಿಸಲಾಗಿದ್ದ ವರ್ಕರ್ಸ್ ಅಂಡ್ ಪೆಸಂಟ್ಸ್ ಪಾರ್ಟಿ(ಡಬ್ಲ್ಯುಪಿಪಿ-ರೈತರು ಮತ್ತು ಕಾರ್ಮಿಕರ ಪಕ್ಷ) ಕಲ್ಕತಾ, ಮುಂಬೈ ಮುಂತಾದೆಡೆಗಳಲ್ಲಿ ಕೆಲಸ ಮಾಡುತ್ತಿದ್ದು, ಇನ್ನೂ ಕೆಲವೆಡೆಗಳಲ್ಲಿ ಅವನ್ನು ಆರಂಭಿಸಿ ಅಖಿಲ ಭಾರತ ಮಟ್ಟದಲ್ಲಿ ಅದನ್ನು ರಚಿಸುವ ಕೆಲಸ ಡಿಸೆಂಬರ್ 1928ರಲ್ಲಿ ಕಲ್ಕತ್ತಾದಲ್ಲಿ ಅಖಿಲ ಭಾರತ ಸಮ್ಮೇಳನವನ್ನು ನಡೆಸುವುದರೊಂದಿಗೆ ಈಡೇರಿತು. ಇದು ಕಾಮಿಕರನ್ನು, ರೈತರನ್ನು ಹಾಗೂ ಯುವಜನರನನು ಸಂಗಟಿಸುವ ಕೆಲಸದಲ್ಲಿ ನೆರವಾಯಿತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನ ಜರುಗಿದ ನಂತರದ ಅವಧಿಯಲ್ಲಿ ಭಾರತದ ಹಲವಾರು ಪ್ರಾಂತಗಳಲ್ಲಿ ಕಾರ್ಮಿಕರ ಮತ್ತು ರೈತರ ಪಕ್ಷಗಳು ರಚನೆಗೊಂಡವು. ಆ ನಂತರ 1928ರಲ್ಲಿ ಆ ಪಕ್ಷಗಳನ್ನೆಲ್ಲಾ ಒಟ್ಟುಗೂಡಿಸಿ ಅಖಿಲ ಭಾರತ ಕಾರ್ಮಿಕರ ಮತ್ತು ರೈತರ ಪಕ್ಷ(ಡಬ್ಲ್ಯುಪಿಪಿ)ವನ್ನು ಸ್ಥಾಪಿಸಲಾಯಿತು. ಹಲವಾರು ಪ್ರಾಂತಗಳಲ್ಲಿ ಈ ಪಕ್ಷಗಳಿಗೆ ಕಮ್ಯುನಿಸ್ಟರು ನೇತೃತ್ವ ಕೊಟ್ಟಿದ್ದಾಗ್ಯೂ, ಡಬ್ಲ್ಯುಪಿಪಿಯು ಕಮ್ಯುನಿಸ್ಟ್ ಪಕ್ಷವಾಗಿರಲಿಲ್ಲ ಅಥವಾ ಮುಸುಕಿನ ಕಮ್ಯುನಿಸ್ಟ್ ಪಕ್ಷ ಕೂಡ ಆಗಿರಲಿಲ್ಲ. ಡಬ್ಲ್ಯುಪಿಪಿಯನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮಾಡಲು ಕಾರ್ಮಿಕ ವರ್ಗ, ರೈತರು ಮತ್ತು ಪುಟ್ಟ ಬಂಡವಾಳಶಾಹಿಗಳ ಐಕ್ಯರಂಗದ ಸಂಘಟನಾ ರೂಪ ಎಂದು ಭಾವಿಸಲಾಗಿತ್ತು.

ಬಂಗಾಳದಲ್ಲಿ ಲೇಬರ್ ಸ್ವರಾಜ್ ಪಕ್ಷ(ಎಲ್.ಎಸ್.ಪಿ)ವನ್ನು ಬಂಗಾಳ ರೈತರ ಮತ್ತು ಕಾರ್ಮಿಕರ ಪಕ್ಷವನ್ನಾಗಿ 1926ರಲ್ಲಿ ಪರಿವರ್ತನೆ ಮಾಡುವುದರ ಮೂಲಕ ಡಬ್ಲ್ಯುಪಿಪಿಯನ್ನು ರಚಿಸಲಾಯಿತು. ನ್ಯೂನತೆಗಳನ್ನು ಹೊಂದಿದ್ದಾಗ್ಯೂ ಎಲ್.ಎಸ್.ಪಿ.ಯು ಉಗ್ರಗಾಮಿ ರಾಜಕೀಯ ಕಾರ್ಯಕರ್ತರ ಕೇಂದ್ರವಾಗಿ ಮಾರ್ಪಟ್ಟಿತ್ತು. ಪ್ರಸಿದ್ಧ ಬಂಗಾಳಿ ಕವಿ ಖಾಜಿ ನಜ್ರುಲ್ ಇಸ್ಲಾಮ್ ಅವರು **'ಲಂಗಾಲ್'** ಎಂಬ ಮುಖವಾಣಿಯ ಸಂಪಾದಕರಾಗಿ ಸಕ್ರಿಯ ಪಾತ್ರ ವಹಿಸಿದ್ದರು. ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಬೇಕೆಂದು ಮುಜಾಫರ್ ಅಹಮದ್ ನೀಡಿದ್ದ ಕರೆಯನ್ನು ಅದರಲ್ಲಿ ಪ್ರಕಟಿಸಲಾಗಿತ್ತು. ಫೆಬ್ರವರಿ 1926 ರಲ್ಲಿ ನಡೆದ ಎಲ್.ಎಸ್.ಪಿ.ಯ ಸಮ್ಮೇಳನದಲ್ಲಿ ಹೊಸ ಕಾರ್ಯಕ್ರಮವನ್ನು ಅಂಗೀಕರಿಸುವ ಮೂಲಕ ಡಬ್ಲ್ಯುಪಿಪಿಯನ್ನು ವಿಧ್ಯುಕ್ತವಾಗಿ ಘೋಷಿಸಲಾಯಿತು. ಡಬ್ಲ್ಯುಪಿಪಿಯು ಆರಂಭದಿಂದಲೂ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕ್ರಾಂತಿಕಾರಿ ರಾಷ್ಟ್ರೀಯವಾದಿಗಳಿಂದ ದೂರ ಇತ್ತು ಮತ್ತು ನಿಧಾನವಾಗಿ ಸ್ಥಿರವಾಗಿ ಶಕ್ತಿಯುತವಾಗಿ ಬೆಳೆಯಿತು. ಅದು **ಗಣವಾಣಿ** ಯನ್ನು ಅಧಿಕೃತ ಪತ್ರಿಕೆಯಾಗಿ ಹೊರತರಲು ಪ್ರಾರಂಭಿಸಿತು.

1927 ಜನವರಿ 16-18, ರಂದು ನಡೆದ ಸಿಪಿಐ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಮುಂಬೈ ಪ್ರಾಂತದಲ್ಲಿ ಡಬ್ಲ್ಯುಪಿಪಿಯನ್ನು ಸ್ಥಾಪಿಸಬೇಕೆಂಬ ತೀರ್ಮಾನವನ್ನು ಮಾಡಲಾಯಿತು. ಬಂಗಾಳದ ಹೊರಗೆ ಮೊಟ್ಟ ಮೊದಲ ಬಾರಿಗೆ ಅಂತಹ ಸಂಘಟನೆಯನ್ನು ಸ್ಥಾಪಿಸಲಾಯಿತು ಮತ್ತು ಮರಾಠಿ ವಾರಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಲಾಯಿತು. ಆ ಸಭೆಯಲ್ಲಿ ಮುಜಾಫರ್ ಅಹಮದ್ ಭಾಗವಹಿಸಿದ್ದರು. ತದನಂತರದಲ್ಲಿ, ಫೆಬ್ರವರಿ 13, 1927 ರಂದು ಬಂಗಾಳ ರೈತರ ಮತ್ತು ಕಾರ್ಮಿಕರ ಪಕ್ಷದ ಎರಡನೇ ಸಮ್ಮೇಳನ ಕಲ್ಕತ್ತಾದಲ್ಲಿ ನಡೆಯುವುದಕ್ಕೆ ಆರು ದಿನಗಳ ಮುಂಚೆ ಮುಂಬೈಯಲ್ಲಿ ಡಬ್ಲ್ಯುಪಿಪಿಯನ್ನು ಸ್ಥಾಪಿಸಲಾಯಿತು. **ಕ್ರಾಂತಿ** ಎಂಬ ವಾರಪತ್ರಿಕೆಯನ್ನು ಅದು ಹೊರತಂದಿತು.

ಮುಂಬೈಯ ಡಬ್ಲ್ಯುಪಿಪಿಯ ಮೂಲಗಳು ಬಂಗಾಳದ ರೀತಿಯನ್ನೇ ಹೋಲುತ್ತವೆ. ಎಡಪಂಥೀಯ ಉಗ್ರಗಾಮಿಗಳ ಮತ್ತು ಕಮ್ಯುನಿಸ್ಟರ ಸಣ್ಣ ಗುಂಪೊಂದು ಪಕ್ಷದ ಕೇಂದ್ರ ಬಿಂದುವಾಗಿತ್ತು. ಅವರು ನವಂಬರ್ 1926 ರಲ್ಲಿ ಕಾಂಗ್ರೆಸ್ ಲೇಬರ್ ಪಕ್ಷ(ಸಿ.ಎಲ್.ಪಿ)ವನ್ನು ರಚಿಸಿದರು. ಸಿಪಿಐನ ಜನವರಿ 1927 ರ ತೀರ್ಮಾನದಂತೆ ಸಿ.ಎಲ್.ಪಿ.ಯನ್ನು ಡಬ್ಲ್ಯುಪಿಪಿಯಾಗಿ ಪರಿವರ್ತಿಸಲಾಯಿತು. ರಾಷ್ಟ್ರೀಯ ಕಾಂಗ್ರೆಸ್‌ನ ಒಳಗಡೆ ಕೆಲಸ ಮಾಡುವ ಮತ್ತು ಅಲ್ಲಿ ಎಡ ಗುಂಪಾಗಿ ಕಾರ್ಯ ನಿರ್ವಹಿಸುವ ಸಲುವಾಗಿ ಬೊಂಬಾಯಿಯ ಡಬ್ಲ್ಯುಪಿಪಿಯನ್ನು ಒಂದು ಸ್ವತಂತ್ರ ಪಕ್ಷವನ್ನಾಗಿ ಸಂಘಟಿಸಲಾಯಿತು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಲು ವಿಶಾಲ ಸಾಮ್ರಾಜ್ಯಶಾಹಿ ರಂಗವೊಂದನ್ನು ಸ್ಥಾಪಿಸಲು ಅದು ಮುಂದಾಯಿತು. ಪಕ್ಷದ ಘೋಷಿತ ಉದ್ದೇಶವು: 'ಉತ್ಪಾದನಾ ಸಾಧನಗಳು, ವಿತರಣೆ ಮತ್ತು ವಿನಿಮಯವು ಸಾರ್ವಜನಿಕ ಒಡೆತನ ಮತ್ತು ಸಾಮಾಜಿಕ ನಿಯಂತ್ರಣ ಹೊಂದಿದ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸ್ಥಾಪಿಸುವುದು' ಆಗಿತ್ತು.

ಬಂಗಾಳ ಮತ್ತು ಮುಂಬೈಯಲ್ಲಿ ಡಬ್ಲ್ಯುಪಿಪಿಯ ಉದಯವು ಕಾರ್ಮಿಕ ವರ್ಗದ ಚಳುವಳಿಯ ನಿರ್ಣಾಯಕ ಘಟ್ಟವಾಗಿತ್ತು. ಕಾರ್ಮಿಕರನ್ನು ಸಂಘಟಿಸುವಲ್ಲಿ ಕಮ್ಯುನಿಸ್ಟರು ವಹಿಸಿದ ಸಕ್ರಿಯ ಪಾತ್ರದಿಂದಾಗಿ ಎಸ್.ವಿ.ಘಾಟೆ ಎಐಟಿಯುಸಿಯ ಮೊದಲ ಕಮ್ಯುನಿಸ್ಟ್ ಪದಾಧಿಕಾರಿಯಾಗಿ ಆಯ್ಕೆಯಾದರು. 1927 ಕ್ಕಿಂತ ಮುಂಚೆ, ಡಬ್ಲ್ಯುಪಿಪಿಯು ರಾಜ್‌ಪುತಾನಾದಲ್ಲಿ ಕೂಡ ಅರ್ಜುನ್ ಲಾಲ್ ಸೇಥಿ ನೇತೃತ್ವದಲ್ಲಿ ಉದಯವಾಯಿತು; 1925ರ ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನದಲ್ಲಿ ಸೇಥಿ ಭಾಗವಹಿಸಿದ್ದರು. ಮೇ 31, 1927 ರ ಸಿಪಿಐನ ಮುಂಬೈ ಕೇಂದ್ರ ಕಾರ್ಯಕಾರಿ ಸಮಿತಿ(ಸಿಇಸಿ)ಯ ಸಭೆಯ ಹೊತ್ತಿಗೆ ಬಂಗಾಳ, ಮುಂಬೈ ಮತ್ತು ರಾಜ್‌ಪುತಾನಾ ಪ್ರಾಂತಗಳಲ್ಲಿ ಡಬ್ಲ್ಯುಪಿಪಿಗಳು ಸ್ಥಾಪಿಸಲ್ಪಟ್ಟಿದ್ದವು. ಈ ಮೂರು ಪ್ರಾಂತಗಳಲ್ಲಿನ ಡಬ್ಲ್ಯುಪಿಪಿಯು ರೂಪಿಸಿದ ಕಾರ್ಯಕ್ರಮಗಳನ್ನು ಸಿಇಸಿಯ ವಿಸ್ತರಿತ ಸಭೆಯು ಅನುಮೋದಿಸಿತು; ಮತ್ತು 'ಅಸ್ತಿತ್ವದಲ್ಲಿಲ್ಲದ ಕಡೆಗಳಲ್ಲಿ ಅಂತಹ ಸಂಘಟನೆಗಳನ್ನು ಸ್ಥಾಪಿಸಲು ಸಿಪಿಐ ಸದಸ್ಯರು ಯತ್ನಿಸಬೇಕು' ಎಂದು ನಿರ್ಣಯ ಕೈಗೊಂಡಿತು.

ಈ ತೀರ್ಮಾನಗಳ ಅನುಸಾರವಾಗಿ, ಏಪ್ರಿಲ್ 1928ರಲ್ಲಿ ಪಂಜಾಬಿನ ಹೋಶಿಯಾರ್‌ಪುರದಲ್ಲಿ ಸೋಹನ್ ಸಿಂಗ್ ಜೋಶ್ ಅವರ ಮುತುವರ್ಜಿಯಿಂದ ಡಬ್ಲ್ಯುಪಿಪಿಯನ್ನು ಸ್ಥಾಪಿಸಲಾಯಿತು. ನಂತರ ಅವರು ಅಖಿಲ ಭಾರತ ಡಬ್ಲ್ಯುಪಿಪಿಯ ಅಧ್ಯಕ್ಷರಾದರು. ಪಂಜಾಬಿನ ಡಬ್ಲ್ಯುಪಿಪಿ ಸ್ಥಾಪನೆಯಾದ ಸ್ವಲ್ಪ ದಿನಗಳಲ್ಲೇ ಯುನೈಟೆಡ್ ಪ್ರಾವಿನ್ಸ್(ಯುಪಿ-ಸಂಯುಕ್ತ ಪ್ರಾಂತ)ದಲ್ಲಿ ಪಕ್ಷದ ಸ್ಥಾಪನೆಯಾಯಿತು. ಯುಪಿಯ ಡಬ್ಲ್ಯುಪಿಪಿಯನ್ನು ಅಕ್ಟೋಬರ್ 1928ರಲ್ಲಿ ಮೀರಟ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಸ್ಥಾಪಿಸಲಾಯಿತು. ಕಾರ್ಮಿಕ ವರ್ಗ, ರೈತರು ಮತ್ತು ಮಧ್ಯಮ ವರ್ಗಗಳ ನಡುವೆ ಕಮ್ಯುನಿಸ್ಟ್ ಚಳುವಳಿಯನ್ನು ವಿಸ್ತರಿಸುವಲ್ಲಿ ಈ ನಾಲ್ಕು(ಬಂಗಾಳ, ಮುಂಬೈ, ಯುಪಿ ಮತ್ತು ಪಂಜಾಬ್) ಪ್ರಮುಖ ಪ್ರಾಂತಗಳಲ್ಲಿ ಡಬ್ಲ್ಯುಪಿಪಿಯ ಸ್ಥಾಪನೆಯು ಮಹತ್ವದ ಕೊಡುಗೆ ನೀಡಿದೆ.

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮದ್ರಾಸ್ ಅಧಿವೇಶನ(ಡಿಸೆಂಬರ್ 26-28, 1927)ದಲ್ಲಿ ಮುಜಾಫರ್ ಅಹಮದ್ ಅವರು ಫಿಲಿಪ್ ಸ್ಪ್ರಾಟ್ ಅವರ ಜತೆ ಸಮಾಲೋಚನೆ ಮಾಡಿ ಸಿದ್ಧಪಡಿಸಿದ ಪ್ರಣಾಳಿಕೆಯನ್ನು ವಿತರಿಸಲಾಯಿತು. ಕಾಂಗ್ರೆಸ್‌ನೊಂದಿಗಿನ ಧೋರಣೆಯನ್ನು ಮತ್ತು ಸ್ವತಂತ್ರ ಭಾರತದ ಸಂವಿಧಾನವೊಂದನ್ನು ಸಿದ್ಧಪಡಿಸುವ ಪ್ರಶ್ನೆಯ ಬಗ್ಗೆ ತನ್ನ ನಿಲುವನ್ನು ಈ ಪ್ರಣಾಳಿಕೆಯು ಕೂಲಂಕುಷವಾಗಿ ವಿವರಿಸಿತು. ಸಾರ್ವತ್ರಿಕ ವಯಸ್ಕ ಮತದಾನದ ಆಧಾರದಲ್ಲಿ ಜನರ ಆಸೆ ಆಕಾಂಕ್ಷೆಗಳನ್ನು ವ್ಯಕ್ತಪಡಿಸುವ ಒಂದು ಅತ್ಯುನ್ನತ ಧ್ವನಿಯಾಗಿ 'ರಾಷ್ಟ್ರೀಯ ಸಾಂವಿಧಾನಿಕ ಸಭೆ'(ನ್ಯಾಷನಲ್ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ')ಯೊಂದನ್ನು ಚುನಾಯಿಸಬೇಕೆಂದು ಪ್ರಣಾಳಿಕೆ ಕರೆ ನೀಡಿತು. ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಮದ್ರಾಸಿನಲ್ಲಿ ಸೇರಿದ್ದ ಸಿಪಿಐ ಸಿಇಸಿ ಸದಸ್ಯರು ಸಿಂಗಾರವೇಲು ಚೆಟ್ಟಿಯಾರ್ ಅವರ ಮನೆಯಲ್ಲಿ ಗುಪ್ತ ಸಭೆ ನಡೆಸಿದರು. ಅಖಿಲ ಭಾರತ ಕಾರ್ಮಿಕರ ಮತ್ತು ರೈತರ ಪಕ್ಷವೊಂದನ್ನು ಸ್ಥಾಪಿಸಲು ಕಲ್ಕತ್ತಾದಲ್ಲಿ ಸಮ್ಮೇಳನ ನಡೆಸಬೇಕೆಂದು ಆ ಸಭೆಯು ನಿರ್ಣಯ ಮಾಡಿತು. ಈ ಪ್ರಸ್ತಾಪಿತ ಸಮ್ಮೇಳನವನ್ನು ಸಂಘಟಿಸುವ ಹೊಣೆಯನ್ನು ಮುಜಾಫರ್ ಅಹಮದ್ ಅವರಿಗೆ ವಹಿಸಲಾಯಿತು.

ಸಂಪೂರ್ಣ ಸ್ವಾತಂತ್ರ್ಯಕ್ಕಾಗಿನ ಹೋರಾಟದಲ್ಲಿ ಸಾಧ್ಯವಾದಷ್ಟೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಮತ್ತು ರೈತರನ್ನು ಅಣಿನೆರೆಸುವ ಸಲುವಾಗಿ ಸೈಮನ್ ಆಯೋಗವನ್ನು ಬಹಿಷ್ಕರಿಸುವ ಚಳುವಳಿಯನ್ನು ಸಂಘಟಿಸುವಲ್ಲಿ ಡಬ್ಲ್ಯುಪಿಪಿಯು ಮಹತ್ವದ ಪಾತ್ರ ವಹಿಸಿತು. ಒಂದು ಬೃಹತ್ ಪ್ರತಿಭಟನಾ ರ‍್ಯಾಲಿಯನ್ನು ಜನವರಿ 1929 ರಲ್ಲಿ ಕಲ್ಕತ್ತಾದಲ್ಲಿ ಆಯೋಜಿಸಲಾಯಿತು; ಅಲ್ಲಿ ಮೊಟ್ಟ ಮೊದಲ ಬಾರಿಗೆ 'ಇಂಕ್‌ಲಾಬ್ ಜಿಂದಾಬಾದ್' ಘೋಷಣೆಯನ್ನು ಕೊಡಲಾಯಿತು.

ಮಾರ್ಚ್/ಏಪ್ರಿಲ್ 1928 ರಲ್ಲಿ ನಡೆದ ಬಂಗಾಳ ಡಬ್ಲ್ಯುಪಿಪಿ ಮೂರನೇ ಸಮ್ಮೇಳನದಲ್ಲಿ 'ಕಾರ್ಯಾಚರಣೆಗೊಂದು ಕರೆ' ಎಂಬ ದಸ್ತಾವೇಜಿನ ಅನುಮೋದನೆಯು ಅಂದಿನ ರಾಜಕೀಯ ಸನ್ನಿವೇಶದಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಈ ಸಮ್ಮೇಳನದ ತೀರ್ಮಾನಗಳು ಮತ್ತದರ ಜತೆಯಲ್ಲೇ 'ಕಾಂಗ್ರೆಸ್ ಹಾಗೂ ಪ್ರಸ್ತುತ ಕಾರ್ಮಿಕ ನಾಯಕತ್ವದ ಬಗ್ಗೆ ನಮ್ಮ ಧೋರಣೆ ಕುರಿತ ಪ್ರಬಂಧ'ದ ಆಧಾರದಲ್ಲಿ 'ಕಾರ್ಯಾಚರಣೆಗೊಂದು ಕರೆ'ಯನ್ನು ರೂಪಿಸಲಾಗಿತ್ತು.

ಸೈಮನ್ ಆಯೋಗ ವಿರೋಧಿ ಚಳುವಳಿ ಮತ್ತು ಭಾರತಕ್ಕೆ ಸಂವಿಧಾನದ ಕರಡು ಸಿದ್ಧಪಡಿಸುವ ವಿಚಾರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವದ ಡೋಲಾಯಮಾನ ಧೋರಣೆಯ ಹಿನ್ನೆಲೆಯಲ್ಲಿ, 'ಕಾರ್ಯಾಚರಣೆಗೊಂದು ಕರೆ'ಯು ಕಮ್ಯುನಿಸ್ಟರ ಮನೋಭಾವದಲ್ಲಿನ ಬದಲಾವಣೆಯನ್ನು ಪ್ರತಿಬಿಂಬಿಸಿತು. "ರಾಷ್ಟ್ರೀಯ ಚಳುವಳಿಯ ನಾಯಕರನ್ನಾಗಿ ಇಡಿಯಾಗಿ ಬಂಡವಾಳಶಾಹಿಗಳತ್ತ ನೋಡುವ ಕಾಲ ಮುಗಿದಿತ್ತು. .ಒಂದು ಬಲಿಷ್ಠ ಪ್ರಜ್ಞೆಯುಳ್ಳ ಹಾಗೂ ಶಿಸ್ತುಬದ್ಧ ಕಾರ್ಮಿಕರ ಮತ್ತು ರೈತರ ಪಕ್ಷವು ಇಂದು ಅತ್ಯಂತ ಅಗತ್ಯವಾಗಿದೆ. . . ಸಾಮ್ರಾಜ್ಯವಾದಿಗಳನ್ನು ವಿರೋಧಿಸುವ ಮಟ್ಟಿಗೆ ನಾವು ಕಾಂಗ್ರೆಸ್‌ನವರನ್ನು ಬೆಂಬಲಿಸಬೇಕು, ಆದರೆ ಕಾಂಗ್ರೆಸ್ ಮುಖಂಡರ, ಅವರು ಎಷ್ಟೆ ಗಣ್ಯರಾಗಿರಲಿ, ಶಾಮೀಲುಕೋರ ಪ್ರವೃತ್ತಿಯನ್ನು ಟೀಕಿಸಲು ಹಿಂಜರಿಯಬಾರದು. ಕಾಂಗ್ರೆಸ್ಸಿನ ಎಡ ಪುಟ್ಟಬಂಡವಾಳಶಾಹಿಗಳ ಜತೆಗಿನ ಪಕ್ಷದ ಮೈತ್ರಿಯನ್ನು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿನ ನೇರ ಕಾರ್ಯಾಚರಣೆ ಆಧಾರದಲ್ಲಿ, ಬಂಡವಾಳಶಾಹಿ ನಾಯಕತ್ವದ ಶಾಮೀಲಾಗುವ ಸ್ವಭಾವದ ವಿರುದ್ಧ ಕ್ರೋಢೀಕರಿಸಬೇಕು." ಎಂದು ದಸ್ತಾವೇಜು ಅಭಿಪ್ರಾಯಪಟ್ಟಿತು.

ವಿಶೇಷವಾಗಿ ಬಂಗಾಳ, ಪಂಜಾಬ್ ಮತ್ತು ಮುಂಬೈ ಪ್ರಾಂತಗಳಲ್ಲಿ ಬೆಳೆದುಬರುತ್ತಿದ್ದ ಸಂಘಟಿತ ಯುವಜನ ಚಳುವಳಿಯಲ್ಲಿ ಕಮ್ಯುನಿಸ್ಟರು ಮತ್ತು ಡಬ್ಲ್ಯುಪಿಪಿಯ ಮಧ್ಯಪ್ರವೇಶವು ಮಹತ್ವದ ಹೆಜ್ಜೆಯಾಗಿತ್ತು. ಸೈಮನ್ ಆಯೋಗ ವಿರೋಧಿ ಬಹಿಷ್ಕಾರ ಚಳುವಳಿಯ ಹಿನ್ನೆಲೆಯಲ್ಲಿ ಜನವರಿ 1928 ರಲ್ಲಿ ಮುಂಬೈಯಲ್ಲಿ ಡಬ್ಲ್ಯುಪಿಪಿಯ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಯುವಜನರ ಗುಂಪನ್ನು ಸಂಘಟಿಸಬೇಕೆಂಬ ಮೊದಲ ಔಪಚಾರಿಕ ತೀರ್ಮಾನವನ್ನು ಮಾಡಲಾಯಿತು. ಮಾರ್ಚ್ 1928 ರಲ್ಲಿ ಮುಂಬೈ ಮತ್ತು ಬಂಗಾಳದ ಪ್ರಾಂತೀಯ ಸಮ್ಮೇಳನಗಳು ಈ ತೀರ್ಮಾನವನ್ನು ಅನುಮೋದಿಸಿದವು. ಪಕ್ಷವು ಅಂಗೀಕರಿಸಿದ 'ಕಾರ್ಯಾಚರಣೆಗೊಂದು ಕರೆ'ಯು ಈ ಪ್ರಶ್ನೆಯನ್ನು ವಿಸ್ತಾರವಾಗಿ ನಿಭಾಯಿಸಿತು. ಈ ದಸ್ತಾವೇಜು, ಡಬ್ಲ್ಯುಪಿಪಿಯು "ಹೊಸದಾಗಿ ಸಂಘಟಿಸಲ್ಪಡುತ್ತಿದ್ದ ಯುವಜನ ಶಕ್ತಿಯನ್ನು ತನ್ನತ್ತ ಸೆಳೆದುಕೊಳ್ಳಬೇಕು ಮತ್ತು 'ಒಂದು ಸ್ವತಂತ್ರ ಯುವಜನ ಸಂಘಟನೆ'ಯನ್ನು ಸ್ಥಾಪಿಸಬೇಕು; ಪಾರಂಪರಿಕ ಯುವಜನ ಸಂಘಟನೆಯ 'ಸಾಮಾಜಿಕ ನೆಲೆಯನ್ನು ವಿಸ್ತರಿಸಲು' ಕಾರ್ಮಿಕ ವರ್ಗ ಹಾಗೂ ರೈತಾಪಿ ಯುವಜನರನ್ನು ಆ ಸಂಘಟನೆಗೆ ಭರ್ತಿಮಾಡಿಕೊಳ್ಳಬೇಕು" ಎಂದಿತ್ತು. ಇಂತಹ ಒಂದು ಯುವಜನ ಸಂಘಟನೆಗಾಗಿ ಅದು ಆರು ಅಂಶಗಳ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಸಿದ್ಧಪಡಿಸಿತು.

ಡಬ್ಲ್ಯುಪಿಪಿಯ ನೇರ ಮುತುವರ್ಜಿಯಿಂದ ಬಂಗಾಳದಲ್ಲಿ 1928ರ ಜುಲೈ ಕೊನೆಯಲ್ಲಿ ಯುವಜನ ಲೀಗ್ ರಚನೆಯಾಯಿತು; ಮತ್ತು 'ಕಾರ್ಯಕ್ರಮ ಮತ್ತು ನೀತಿ ಹೇಳಿಕೆ'ಯೊಂದನ್ನು ಲೀಗ್ ಅಂಗೀಕರಿಸಿತು. ಮುಂಬೈ ಪ್ರೆಸಿಡೆನ್ಸಿ ಯೂಥ್ ಲೀಗ್‌ನ ಮೊದಲ ಸಮ್ಮೇಳನವನ್ನು ಜನವರಿ 1928ರ ಕೊನೆಯಲ್ಲಿ ನಡೆಸಲಾಯಿತು. ಪಂಜಾಬಿನಲ್ಲಿ, ನೌಜವಾನ್ ಭಾರತ್ ಸಭಾ(ಅದರ ರಚನೆಯಲ್ಲಿ ಭಗತ್ ಸಿಂಗ್ ಪ್ರಮುಖ ಪಾತ್ರ ವಹಿಸಿದ್ದರು)ವನ್ನು ಏಪ್ರಿಲ್ 1928 ರಲ್ಲಿ ಅಣಿನೆರೆಸುವಲ್ಲಿ ಡಬ್ಲ್ಯುಪಿಪಿ ಸಂಘಟಕರು ಪ್ರಧಾನ ಪಾತ್ರ ವಹಿಸಿದ್ದರು. ಆದರೆ, ಈ ಎಲ್ಲಾ ಪ್ರಯತ್ನಗಳ ನಡುವೆಯೂ ಡಬ್ಲ್ಯುಪಿಪಿಯ ಅಖಿಲ ಭಾರತ ಸಮ್ಮೇಳನವು ಸಾಕಷ್ಟು ಗಮನವನ್ನು ಯುವಜನ ಸಂಘಟನೆಗೆ ನೀಡಲಿಲ್ಲ ಎಂಬುದನ್ನು ಗಮನಿಸಬೇಕು.

ಡಬ್ಲ್ಯುಪಿಪಿಯ ಅಖಿಲ ಭಾರತ ಸಮ್ಮೇಳನವು ಕಲ್ಕತ್ತಾದಲ್ಲಿ ಡಿಸೆಂಬರ್ 21-24, 1928 ರಂದು ಆಗ ಇದ್ದ ಎಲ್ಲಾ ಪ್ರಾಂತೀಯ ಸಂಘಟನೆಗಳ ಪಾಲ್ಗೊಳ್ಳುವಿಕೆಯ ಮೂಲಕ ನಡೆಯಿತು. ಮುಂಬೈ, ಪಂಜಾಬ್, ಯುಪಿ ಮತ್ತು ಬಂಗಾಳದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಭಗತ್ ಸಿಂಗ್ ಕೂಡ ಮಾರುವೇಷದಲ್ಲಿ ಬಂದು ಪಾಲ್ಗೊಂಡಿದ್ದರು. ಸಮ್ಮೇಳನವು ಒಂದು ಕರಡು ಸಂವಿಧಾನವನ್ನು ಅಂಗೀಕರಿಸಿತು. ಅದರಲ್ಲಿ "ಬಹುವಾಗಿ ಸಾಮ್ರಾಜ್ಯಶಾಹಿಗಳಿಂದ ಮತ್ತು ನಿರ್ದಿಷ್ಟವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಸಂಪೂರ್ಣ ಸ್ವಾತಂತ್ರ್ಯ ಗಳಿಸುವುದು ಮತ್ತು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಜನಸಮುದಾಯವನ್ನು ವಿಮೋಚನೆಗೊಳಿಸುವ ಆಧಾರದಲ್ಲಿ ಭಾರತವನ್ನು ಪ ಜಾಪ್ರಭುತ್ವೀಕರಣಗೊಳಿಸಬೇಕು ಎಂಬ ಉದ್ದೇಶವನ್ನು ಪಕ್ಷ ಹೊಂದಿದೆ" ಎಂದು ದಾಖಲಿಸಲಾಗಿದೆ. ಸಮ್ಮೇಳನವು "ರೈತ ಸಂಘಟನೆಗಳನ್ನು ಕಟ್ಟಬೇಕು ಮತ್ತು ಗೇಣಿ(ಅಧಿಯಾರ್ ಅಥವಾ ಬರ್ಗಾ) ಪದ್ಧತಿಯನ್ನು ರದ್ದು ಮಾಡಲು ಮತ್ತು ಯಾವುದೇ ಪರಿಹಾರ ನೀಡದೆ ಭೂಮಾಲೀಕತ್ವವನ್ನು ರದ್ದು ಮಾಡಲು ಹೋರಾಡಬೇಕು" ನಿರ್ಣಯ ಮಾಡಿತು. ಈ ಸಂವಿಧಾನ ಪಕ್ಷದ ಸದಸ್ಯರು ಯಾವುದೇ ಕೋಮುವಾದಿ ಸಂಘಟನೆಯಲ್ಲಿ ಅಥವಾ ಕೋಮು ಪ್ರಚಾರಗಳಲ್ಲಿ ತೊಡಗಿರುವ ಯಾವುದೇ ರೀತಿಯಲ್ಲಿ ತೊಡಗಬಾರದು ಎಂದು ನಿಷೇಧಿಸಿತು.

ಮೂರು ವರ್ಷಗಳಿಗೂ ಮೀರಿ ಕಮ್ಯುನಿಸ್ಟರ ಸಂಘಟನಾ ಕೆಲಸಗಳಿಂದಾಗಿ ಡಬ್ಲ್ಯುಪಿಪಿ ಸ್ಥಾಪನೆಗೊಂಡಿತು. ಜನರ ಕಣ್ಣಲ್ಲಿ ಡಬ್ಲ್ಯುಪಿಪಿಯು ಕಮ್ಯುನಿಸ್ಟ್ ಪಕ್ಷವಾಗಿ ಬೇರೆ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅಖಿಲ ಭಾರತ ಸಮ್ಮೇಳನವಾದ ಕೂಡಲೇ ಬ್ರಿಟಿಷ್ ಸರ್ಕಾರವು ಎಲ್ಲಾ ಪ್ರಮುಖ ಕಮ್ಯುನಿಸ್ಟರನ್ನು ಬಂಧಿಸಿತು; ಅದು ಡಬ್ಲ್ಯುಪಿಪಿಯ ಕಾರ್ಯನಿರ್ವಹಣೆಯನ್ನು ಬಾಧಿಸಿತು. ಈ ಎಲ್ಲಾ ಬಂಧಿತ ಮುಖಂಡರನ್ನು ಕುಖ್ಯಾತ ಮೀರಟ್ ಪಿತೂರಿ ಮೊಕದ್ದಮೆಯಡಿ ವಿಚಾರಣೆಗೆ ಗುರಿಪಡಿಸಲಾಯಿತು.

ಜಾಮಿಯಾ ಮಿಲಿಯ ವಿದ್ಯಾರ್ಥಿಗಳ ಮೇಲೆ ಪೋಲೀಸ್ ದಮನದ ನ್ಯಾಯಾಂಗ ತನಿಖೆ ನಡೆಸಿ ಕಾನೂನುಕ್ರಮ ಕೈಗೊಳ್ಳಬೇಕು- ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಆಗ್ರಹ

ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಪೋಲೀಸ್ ಕಾರ್ಯಾಚರಣೆ ಅನಗತ್ಯವಾಗಿತ್ತು, ಜನಗಳನ್ನು ಮತೀಯ ಆಧಾರದಲ್ಲಿ ವಿಭಜಿಸುವುದಕ್ಕಾಗಿ ಹಿಂಸಾಚಾರ ಸೃಷ್ಟಿಸುವ ಒಂದು ಪಿತೂರಿಯಿತ್ತು.

ಈ ತೀರ್ಮಾನಕ್ಕೆ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ನಿಯೋಗವೊಂದು ಬಂದಿದೆ. ಜಾಮಿಯಾ ಮಿಲಿಯಾದ ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿ ಕಲೆ ಹಾಕಿದ ಮಾಹಿತಿಗಳ ಆಧಾರದಲ್ಲಿ ಅದು ಈ ತೀರ್ಮಾನಕ್ಕೆ ಬಂದಿದೆ.

ಪೋಲೀಸ್ ಪಡೆಯನ್ನು ಕೋಮುಗ್ರಸ್ತಗೊಳಿಸುವ ಒಂದು ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಅಲ್ಪಸಂಖ್ಯಾತರನ್ನು, ಅದರಲ್ಲೂ ಮುಸ್ಲಿಮರನ್ನು ಮತೀಯ ದೃಷ್ಟಿಯಿಂದ ಗುರಿಮಾಡಲಾಗುತ್ತಿದೆ. ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯ ಮತ್ತು ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಪೋಲೀಸ್ ಹಲ್ಲೆಗಳು ಉನ್ನತ ಮಟ್ಟದಲ್ಲಿ ನಡೆಸಿರುವ ಒಂದು ಪಿತೂರಿಯ ಭಾಗ, ಇದರ ಬಗ್ಗೆ ಸುಪ್ರಿಂ ಕೋರ್ಟಿನ ಒಬ್ಬ ನ್ಯಾಯಾಧೀಶರ ತನಿಖೆ ಮಾಡಬೇಕಾಗಿದೆ ಎಂದಿರುವ ನಿಯೋಗ ಗೃಹಮಂತ್ರಿಗಳು ದಿಲ್ಲಿ ಪೋಲೀಸರ ಕಾರ್ಯಾಚರಣೆಯ ಹೊಣೆ ಹೊರಬೇಕಾಗುತ್ತದೆ ಎಂದು ಹೇಳಿದೆ.

ಇಂತಹ ಅಮಾನುಷ ಪೋಲೀಸ್ ಅತ್ಯಾಚಾರಗಳು ಇನ್ನ ಮುಂದೆ ಯಾವುದೇ ವಿ.ವಿ.ಯಲ್ಲಿ ನಡೆಯಬಾರದು ಎಂದು ನಿಯೋಗ ಆಗ್ರಹಿಸಿದೆ.

ಜಾಮಿಯಾ ವಿದ್ಯಾರ್ಥಿಗಳ ಮೇಲೆ ಪೋಲಿಸ್ ದಾಳಿಗೆ ಎಬಿವಿಪಿ ಕಾರ್ಯಕರ್ತರನ್ನು ಉಪಯೋಗಿಸಿಕೊಳ್ಳಲಾಗಿದೆ ಎಂಬೊಂದು ತೀವ್ರ ಆರೋಪವಿದೆ. ದಿಲ್ಲಿಯಲ್ಲಿ ಬಸ್ಸು ಸುಡುವುದು, ಅಗ್ನಿ ಸ್ಪರ್ಶ ಮುಂತಾದ ಕೃತ್ಯಗಳಿಗೂ ಅವರೇ ಹೊಣೆ ಎಂದೂ ಹೇಳಲಾಗುತ್ತಿದೆ. ಈ ಗಂಬೀರ ಆಪಾದನೆಯಲ್ಲಿನ ನಿಜಸಂಗತಿಗಳನ್ನು ದಿಲ್ಲಿ ಪೋಲೀಸ್ ಸ್ಪಷ್ಟಗೊಳಿಸಬೇಕು ಎಂದು ನಿಯೋಗ ಆಗ್ರಹಿಸಿದೆ.

ಪೋಲೀಸ್ ಹಿಂಸಾಚಾರ ಕುರಿತಂತೆ ಒಂದು ಶಾಸನಬದ್ಧ ತನಿಖೆ ನಡೆಸಬೇಕು ಎಂದು ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿವಿಯ ಉಪಕುಲಪತಿಗಳು ಆಗ್ರಹಿಸಿದ್ದಾರೆ. ತನ್ನ ಆವರಣದಲ್ಲಿ ಹಿಂಸಾಚಾರ ನಡೆಸಿದ ಪೋಲೀಸರ ಮೇಲೆ ವಿವಿ ಎಫ್ಐಆರ್ ದಾಖಲಿಸುವುದಾಗಿ ಹೇಳಿದೆ. ಪೋಲೀಸರು ವಿವಿಯ ಸೆಕ್ಯುರಿಟಿ ಗಾರ್ಡ್‌ಗಳ ಮೇಲೆ ಹಲ್ಲೆ ಮಾಡಿದ್ದಾರೆ, ಸುಮಾರು 200 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ, ಒಬ್ಬ ವಿದ್ಯಾರ್ಥಿನಿ ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿದೆ, ಲೈಬ್ರೆರಿ ಸೇರಿದಂತೆ ವಿವಿಯ ಕಟ್ಟಡಗಳಿಗೆ ವ್ಯಾಪಕವಾದ ನಷ್ಟ ಉಂಟಾಗಿದೆ ಎಂದು ವಿವಿಯ ಪ್ರೋಕ್ಟರ್ ಪ್ರೊ. ವಸೀಮ್ ಅಹಮದ್ ಖಾನ್ ನಿಯೋಗಕ್ಕೆ ಹೇಳಿದರು.

ಪ್ರಧಾನ ಮಂತ್ರಿಗಳು ಪ್ರತಿಭಟನಾಕಾರರ ಉಡುಗೆಗಳ ಮೆಲೆ ಟಿಪ್ಪಣಿ ಮಾಡಿರುವುದು ಅತ್ಯಂತ ಖಂಡನೀಯ ಎಂದಿರುವ ನಿಯೋಗ, ಇಂತಹ ವ್ಯಕ್ತಿಗೆ ಭಾರತದ ಪ್ರಧಾನ ಮಂತ್ರಿಯ ಸ್ಥಾನದಲ್ಲಿ ಮುಂದುವರೆಯುವ ನೈತಿಕ ಹಕ್ಕು ಉಳಿದಿಲ್ಲ ಎಂದು ಹೇಳಿದೆ. ಪ್ರತಿಭಟನೆ ಮತ್ತು ಪರಕೀಯ ಭಾವ ಕಾಡ್ಗಿಚ್ಚಿನಂತೆ ಹರಡಲು ಮೋದಿ–ಷಾ ರವರೇ ಹೊಣೆ. ಮೋದಿ ಸರಕಾರ ಸಿಎಎ ಮತ್ತು ಎನ್‌ಆರ್‌ಸಿಯನ್ನು ಹೇರುವ ಮೂಲಕ ದೇಶಾದ್ಯಂತ ಕಾನೂನುಹೀನತೆ ಮತ್ತು ಹಿಂಸಾಚಾರವನ್ನು ತಂದಿದೆ. ಆರೆಸ್ಸೆಸ್ ಪ್ಯಾಲೆಸ್ತೀನಿಯರನ್ನು ದಮನ ಮಾಡುವ ಇಸ್ರೇಲಿ ಜನಾಂಗ ದ್ವೇಷಿ ಮಾದರಿಯನ್ನು ಭಾರತದಲ್ಲಿ ತರಲು ಬಿಜೆಪಿ ಸರಕಾರವನ್ನು ಬಳಸಿಕೊಳ್ಳುತ್ತಿದೆ ಎಂದು ನಿಯೋಗ ಅಭಿಪ್ರಾಯ ಪಟ್ಟಿದೆ.

ದೇಶಾದ್ಯಂತ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟವನ್ನು ಕಾರ್ಮಿಕರು, ರೈತರು, ಯುವಜನ, ಮಹಿಳೆಯರು, ಕಲಾವಿದರು ಮತ್ತಿತರ ಎಲ್ಲ ಜನವಿಭಾಗಗಳು ಬೆಂಬಲಿಸುತ್ತವೆ. ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಈ ಹೋರಾಟವನ್ನು ಎಲ್ಲ ಬೇಡಿಕೆಗಳೂ ಈಡೇರುವ ವರೆಗೆ ಮುಂದುವರೆಸುವ ಬಗ್ಗೆ ನಿರ್ಧರಿಸುತ್ತವೆ ಎಂದಿರುವ ನಿಯೋಗ ಸರಕಾರದ ಮುಂದೆ ಈ ಕೆಳಗಿನ ಬೇಡಿಕೆಗಳನ್ನು ಇಟ್ಟಿದೆ:

- ಸುಪ್ರಿಂ ಕೋರ್ಟಿನ ಹಾಲಿ ನ್ಯಾಯಾಧೀಶರಿಂದ ಒಂದು ನಿಷ್ಪಕ್ಷಪಾತ ಮತ್ತು ಸಮಯಬದ್ಧ ನ್ಯಾಯಾಂಗ ತನಿಖೆ ನಡೆಸಬೇಕು
- ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿರುವ ಪೋಲೀಸ್ ಸಿಬ್ಬಂದಿಯ ಮೇಲೆ ಕ್ರಮಕೈಗೊಳ್ಳಬೇಕು.
- ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ಮತೀಯ, ಕೋಮುವಾದಿ ಆಧಾರದಲ್ಲಿ ಗುರಿಯಿಡುವುದನ್ನು ನಿಲ್ಲಿಸಬೇಕು.
- ಇನ್ನು ಮುಂದೆ ಸೂಕ್ತ ಅನುಮತಿಯಿಲ್ಲದೆ ಪೋಲೀಸರು ವಿವಿ ಕ್ಯಾಂಪಸ್‌ಗಳನ್ನು ಪ್ರವೇಶಿಸಲು ಬಿಡಬಾರದು.
- ವಿದ್ಯಾರ್ಥಿ ಪ್ರತಿಭಟನಾಕಾರರನ್ನು ಗುರಿ ಮಾಡಿ ಕಿರುಕುಳ–ಬೇಟೆ ನಡೆಸಬಾರದು.
- ಜಾಮಿಯ ಮಿಲಿಯ ಇಸ್ಲಾಮಿಯ, ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯ ಮತ್ತು ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಬಗ್ಗೆ ದ್ವೇಷ ಹರಡಿಸುವುದನ್ನು ನಿಲ್ಲಿಸಬೇಕು

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಮತ್ತು ಪಿ.ಕೃಷ್ಣಪ್ರಸಾದ್, ಸಿಐಟಿಯುವಿನ ವೀರೇಂದ್ರ ಗೌರ್, ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಬಿ.ವೆಂಕಟ್ ಮತ್ತು ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಆಯಿಷೆ ಘೋಷ್ ಈ ನಿಯೋಗದಲ್ಲಿದ್ದರು.

ಕೇಳಿಸಿದ್ದು

ಜನಹತ್ಯಾಕಾಂಡದ ಹತ್ತು ಘಟ್ಟಗಳು

ಸಾಮೂಹಿಕ ಹತ್ಯಾಕಾಂಡಗಳ ಅಧ್ಯಯನ ಮಾಡಿರುವ ತಜ್ಞರು ಹತ್ತು ಘಟ್ಟಗಳನ್ನು ಗುರುತಿಸುತ್ತಾರೆ

1. **ವರ್ಗೀಕರಣ :** 'ನಾವು' ಮತ್ತು 'ಅವರು' ಎಂದು ವಿಭಜಿಸುವುದು
2. **ಸಂಕೇತೀಕರಣ :** ಜನ ತಮ್ಮ ನಿರ್ದಿಷ್ಟ ಜನಾಂಗ/ಮತ/ಜಾತಿ ಗುಂಪಿಗೆ ಆತುಕೊಳ್ಳುವಂತೆ ಮಾಡುವುದು
3. **ತಾರತಮ್ಯ :** ವ್ಯವಸ್ಥಿತ ಪಕ್ಷಪಾತ ಆರಂಭಗೊಳಿಸುವುದು
4. **ಅಪಮಾನವೀಕರಣ :** ಜನರನ್ನು ಪ್ರಾಣಿ ಮಟ್ಟಕ್ಕೆ ಇಳಿಸುವುದು ಉದಾ: ಗೆದ್ದಲುಹುಳ, ನಾಯಿಕುನ್ನಿ, ಹಂದಿ
5. **ಸಂಘಟನೆ :** ನಿರ್ದಿಷ್ಟ ಖಾಸಗಿ/ಅರೆ ಸರ್ಕಾರಿ ಜಾರಿ ಪಡೆಗಳ ನಿರ್ಮಾಣ
6. **ಧ್ರುವೀಕರಣ :** ನಿರ್ದಿಷ್ಟ ಗುಂಪಿನ ವಿರುದ್ಧ ಅಪಪ್ರಚಾರ
7. **ಸಿದ್ಧತೆ :** ಜನಗಳನ್ನು ಎತ್ತಂಗಡಿ ಮಾಡುವ ಅಧಿಕೃತ ಕ್ರಿಯೆ
8. **ಉತ್ಪೀಡನೆ :** ಕಿರುಕುಳ, ಕೊಲೆ, ಸುಲಿಗೆ, ಪ್ರಾಯೋಗಿಕ ಹತ್ಯಾಕಾಂಡ
9. **ನಿರ್ನಾಮ :** ಇಡೀ ಗುಂಪನ್ನು ನಾಮಾವಶೇಷಗೊಳಿಸುವುದು
10. **ನಿರಾಕರಣೆ :** ಯಾವುದೇ ತಪ್ಪು ಮಾಡಿಲ್ಲ ಎಂದು ಸರಕಾರ ನಿರಾಕರಿಸುವುದು

ಭಾರತದಲ್ಲಿ ನಾವೀಗ ಏಳನೇ ಮತ್ತು ಎಂಟನೇ ಘಟ್ಟದಲ್ಲಿ ಇದ್ದೇವೆ ಎನ್ನಲಾಗುತ್ತಿದೆ.

ಸಿಎಎ ಪ್ರತಿಭಟನಾಕಾರರ ಮೇಲೆ ದಮನಚಕ್ರ – ಕೇಂದ್ರ ಕಾರ್ಮಿಕ ಸಂಘಟನೆಗಳ ಖಂಡನೆ

ಬಿಜೆಪಿ ಸರಕಾರ ಆತುರಾತುರದಿಂದ ಪೌರತ್ವ ತಿದ್ದುಪಡಿ ಕಾನೂನು ತಂದು ದೇಶದಲ್ಲಿ ಅನಗತ್ಯವಾಗಿ ವ್ಯಾಪಕ ಕ್ಷೋಭೆಯನ್ನು ಉಂಟು ಮಾಡಿದೆ ಎಂದು ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಬಲವಾಗಿ ಖಂಡಿಸಿವೆ. ಅಸ್ಸಾಂನಲ್ಲಿ ಮೂವರು ಹತರಾಗಿದ್ದಾರೆ. ಜಾಮಿಯ ಮಿಲಿಯ ಮತ್ತು ಅಲಿಗಡ್ ವಿ.ವಿ.ಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲಿಸರ ಹಲ್ಲೆಗಳಲ್ಲಿ ಹಲವರು ಗಾಯಗೊಂಡಿದ್ದಾರೆ.

ದೇಶದಲ್ಲಿ ಒಡಕು ಉಂಟು ಮಾಡಲು, ಜನಗಳ ನಿಜವಾದ ಪ್ರಶ್ನೆಗಳಿಂದ ಅವರ ಗಮನವನ್ನು ಬೇರೆಡೆಗೆ ತಿಗಿಸಲಿಕ್ಕೆ ಕೂಡ ಮೋದಿ ಸರಕಾರ ಇದನ್ನು ಬಳಸಿಕೊಳ್ಳುತ್ತಿದೆ. ಈ ಮೂಲಕ ಬಿಜೆಪಿ ಸರಕಾರದ ಜನ–ವಿರೋಧಿ ಧೋರಣೆಗಳ ವಿರುದ್ಧ ಐಕ್ಯ ಪ್ರತಿಭಟನೆ ನಡೆಯದಂತೆ ವಿಭಜನೆಗಳನ್ನು ಸೃಷ್ಟಿಸುವುದು ಅದರ ಹುನ್ನಾರ ಎಂದು ಈ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ ಮತ್ತಿತರ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದು ಜಂಟಿ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿವೆ.

ಸರ್ಕಾರ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಬೇಕು, ಎನ್‌ಆರ್‌ಸಿ ನಡೆಸಲು ಮುಂದಾಗಬಾರದು ಮತ್ತು ಪ್ರತಿಭಟನಾಕಾರರ ಮೇಲೆ ಪೋಲೀಸ್ ಅತ್ಯಾಚಾರಗಳನ್ನು ನಿಲ್ಲಿಸಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿರುವ ಈ ಕಾರ್ಮಿಕ ಸಂಘಟನೆಗಳು ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸುವಂತೆ ಕಾರ್ಮಿಕರ ನಡುವೆ ವ್ಯಾಪಕ ಪ್ರಚಾರಕಾರ್ಯ ನಡೆಸಬೇಕು ಎಂದು ತಮ್ಮ ಸಂಯೋಜಿತ ಕಾರ್ಮಿಕ ಸಂಘಗಳಿಗೆ ಕರೆ ನೀಡಿವೆ.

ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಸಿಪಿಐ(ಎಂ) ಅರ್ಜಿ

ಪುಟ 2 ರಿಂದ

ಬಂಧಿಸಲಾಗಿದೆ, ಸಿಪಿಐ(ಎಂ)ನ ಹಲವು ಜಿಲ್ಲಾ ಮುಖಂಡರನ್ನೂ ಬಂಧಿಸಲಾಗಿದೆ, ಇಂಟರ್ನೆಟ್ ಸಂಪರ್ಕವನ್ನು ಕಡಿತ ಮಾಡಲಾಗಿದೆ. ಕಾಶ್ಮೀರದಲ್ಲಿ ಸತತ ನಾಲ್ಕು ತಿಂಗಳಿಗೂ ಹೆಚ್ಚು ಕಾಲದಿಂದ ಮಾಡಿರುವುದನ್ನು ಈಗ ಈಶಾನ್ಯ ಭಾರತಕ್ಕೂ ವಿಸ್ತರಿಸಲಾಗಿದೆ. ಭಾರತ ಈಗ ಜಗತ್ತಿನಲ್ಲೇ ಅತಿ ಹೆಚ್ಚು ಇಂಟರ್ನೆಟ್ ಕಡಿತಗಳನ್ನು ಕಾಣುತ್ತಿರುವ ದೇಶ ಎಂಬ ಕುಖ್ಯಾತಿಗೆ ಒಳಗಾಗುತ್ತಿದೆ ಎಂದು ಯೆಚುರಿ ಖೇದ ವ್ಯಕ್ತ ಪಡಿಸಿದರು.

ಇಂತಹ ಕುಖ್ಯಾತಿಯನ್ನಯ ತಪ್ಪಿಸಬೇಕು, ಸಿಎಎ ಯನ್ನು ಹಿಂದಕ್ಕೆ ಪಡೆಯಬೇಕು, ಸೇನಾಪಡೆಗಳನ್ನು ಹಿಂದಕ್ಕೆ ಕರೆಸಬೇಕು, ಬಂಧಿತರೆಲ್ಲರನ್ನೂ ಬಿಡುಗಡೆ ಮಾಡಬೇಕು, ಸಾವಿಗೀಡಾದವರ ಕುಟುಂಬಗಳಿಗೆ ತಲಾ 20 ಲಕ್ಷ ರೂ. ಪರಿಹಾರ ನೀಡಬೇಕು, ಇಂಟರ್ನೆಟ್ ಸಂಪರ್ಕಗಳನ್ನು ಕೂಡಲೇ ಮರುಸ್ಥಾಪಿಸಬೇಕು ಎಂದು ಯೆಚುರಿ ಸರಕಾರವನ್ನು ಆಗ್ರಹಿಸಿದರು.

ದೇಶದ ಭವಿಷ್ಯದೊಂದಿಗೂ ಆಟವಾಡುತ್ತಿದ್ದಾರೆ:

ದೇಶದ ಇತರ ಭಾಗಗಳಲ್ಲೂ ಧರ್ಮ, ಪಂಗಡ, ಜಾತಿ, ಭಾಷೆ, ಲಿಂಗದ ಭೇದ–ಭಾವವಿಲ್ಲದೆ ಎಲ್ಲರೂ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 15ರಂದು ಜಾಮಿಯಾ ಮಿಲಿಯಾದ ವಿದ್ಯಾರ್ಥಿಗಳೊಂದಿಗೆ ದಿಲ್ಲಿ ಪೋಲೀಸರ ಅಮಾನುಷ ವರ್ತನೆ ಖಂಡಿತಾ ಒಪ್ಪತಕ್ಕಂತ್ತದ್ದಲ್ಲ, ಸಿಪಿಐ(ಎಂ) ಇದನ್ನು ಬಲವಾಗಿ ಖಂಡಿಸುತ್ತದೆ ಎಂದು ಯೆಚುರಿ ಹೇಳಿದರು. ದಿಲ್ಲಿ ಪೋಲೀಸ್ ನೇರವಾಗಿ ಕೇಂದ್ರ ಗೃಹಮಂತ್ರಿಗಳ ಅಡಿಯಲ್ಲಿ ಇದೆ. ಆದ್ದರಿಂದ ಪೋಲೀಸರ ಈ ವರ್ತನೆಯ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆಲ್ಲ ಅವರು ಉತ್ತರ ನೀಡಬೇಕಾಗಿದೆ. ಕ್ಯಾಂಪಸ್‌ನೊಳಕ್ಕೆ ಪ್ರವೇಶಿಸುವ ಮೊದಲು ಪೋಲೀಸರು ಸಂಬಂಧಪಟ್ಟ ವಿದ್ಯಾಸಂಸ್ಥೆಯ ಮುಖ್ಯಸ್ಥರು, ಉಪಕುಲಪತಿಗಳ ಅನುಮತಿ ಪಡೆಯಬೇಕು, ವಿ.ವಿ. ಅಧಿಕಾರಿಗಳು ಕರೆದರೆ ಮಾತ್ರ ಹೋಗಬೇಕು ಎಂಬುದು ಈ ದೇಶದ ಕಾನೂನಿನಲ್ಲಿದೆ. ಇದನ್ನು ಉಲ್ಲಂಘಿಸಿ, ಕ್ಯಾಂಪಸ್‌ನೊಳಕ್ಕೆ ನುಗ್ಗಿ ಪೋಲೀಸರು ಧಾಂಧಲೆ ನಡೆಸಿದ್ದನ್ನು ಇಡೀ ದೇಶ ನೋಡಿದೆ. ಹೀಗೆ ಮಾಡಲು ಅವರಿಗೆ ಅಧಿಕಾರ ನೀಡಿದವರು ಯಾರು ಎಂದು ಯೆಚುರಿ ಪ್ರಶ್ನಿಸಿದರು. ವಿದ್ಯಾರ್ಥಿಗಳೊಂದಿಗೆ, ಅಂದರೆ ದೇಶದ ಭವಿಷ್ಯದೊಂದಿಗೆ ಇಂತಹ ವರ್ತನೆ ಅತ್ಯಂತ ಆಘಾತಕಾರಿ ಎಂದು ಅವರು ಹೇಳಿದರು.

ದೇಶವನ್ನು ಬಾಧಿಸುತ್ತಿರುವ ಜನಗಳ ಜೀವನೋಪಾಯಗಳ ಪ್ರಶ್ನೆಗಳು, ಆರ್ಥಿಕ ಮಂದಗತಿ, ನಿರುದ್ಯೋಗ, ನಿಜ ಆದಾಯ ಇಳಿಕೆ ಇವುಗಳತ್ತ ಗಮನ ನೀಡುವ ಬದಲು ಈ ಸರಕಾರ ಈ ರೀತಿ ಜನಗಳನ್ನು ವಿಭಜಿಸುವ ಕೆಲಸ ಮಾಡುತ್ತಿದೆ. ಇದರ ವಿರುದ್ಧ ಶಾಂತಿಯುತ ಪ್ರತಿಭಟನೆಯನ್ನು ನಾವು ಮುಂದುವರೆಸುತ್ತೇವೆ, ಮತ್ತು ಜನಗಳಿಗೂ ಶಾಂತಿಯುತವಾಗಿ, ಹಿಂಸೆಗೆ ಅವಕಾಶ ನೀಡದೆ, ಕೋಮುವಾದೀಕರಿಸುವ ಆಳುವ ಪಕ್ಷದ ಪ್ರಯತ್ನಗಳಿಗೆ ಬಲಿಯಾಗದೆ ಈ ಹೋರಾಟವನ್ನು ಮುಂದುವರೆಸಬೇಕು ಎಂದು ಸೀತಾರಾಂ ಯೆಚುರಿಯವರು ಮನವಿ ಮಾಡಿದರು.

ವಿ.ವಿ. ಕ್ಯಾಂಪಸ್‌ಗಳ ಮೇಲೆ ಅಘೋಷಿತ ತುರ್ತು ಪರಿಸ್ಥಿತಿ ಹೇರಿಕೆ–ಎಐಡಿಡಬ್ಲ್ಯುಎ ಖಂಡನೆ

ಡಿಸೆಂಬರ್ 15 ರಂದು ಜಾಮಿಯ ಮಿಲಿಯ ಇಸ್ಲಾಮಿಯದಲ್ಲಿ ದಿಲ್ಲಿ ಪೋಲೀಸರು ಅಧಿಕಾರವಿಲ್ಲದೆ ಪ್ರವೇಶಿಸಿ ವಿದ್ಯಾರ್ಥಿಗಳ ಮೇಲೆ, ವಿದ್ಯಾರ್ಥಿನಿಯರ ಮೇಲೂ ಯಾವುದೇ ಕಾರಣವಿಲ್ಲದೆ ಲಾಠಿ, ಅಶ್ರುವಾಯು, ಬುಲೆಟ್‌ಗಳನ್ನು ಪ್ರಯೋಗಿಸಿರುವುದು, ಲೈಬ್ರೆರಿ ಆವರಣದಲ್ಲೂ ಅನಗತ್ಯವಾಗಿ ಪ್ರಹಾರ ಮಾಡಿರುವುದು ಮೋದಿ ಆಳ್ವಿಕೆಯಲ್ಲಿ ಪ್ರಭುತ್ವದ ಹಿಂಸಾಚಾರ ಫ್ಯಾಸಿಸ್ಟ್ ಮಾದರಿಯ ಬಲ ಗಳಿಸಿರುವುದಕ್ಕೆ ಇನ್ನೊಂದು ಉದಾಹರಣೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಹೇಳಿದೆ. ಈ ಮೊದಲು ಜೆಎನ್‌ಯುನಲ್ಲಿ ಶುಲ್ಕ ಏರಿಕೆಗಳ ವಿರುದ್ಧ ಹೋರಾಟದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ದಾಳಿಗಳ ನಂತರ ಅಸ್ಸಾಂನಲ್ಲಿ ಸಿ.ಎ.ಬಿ./ಸಿ.ಎ.ಎ. ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆಗಳಲ್ಲಿ ಇದು ಕಂಡು ಬಂದಿತ್ತು. ಜಾಮಿಯ ವಿ.ವಿ.ಯಂತೆ ಅಲಿಘಡ ವಿ.ವಿ.ಯಲ್ಲೂ ಹಿಂಸಾಚಾರ ನಡೆಸಿದ್ದಾರೆ, ಬಲವಂತವಾಗಿ ಹಾಸ್ಟೆಲುಗಳನ್ನು ಮುಚ್ಚಿಸಿ ರಜಾ ಕಾಲ ಘೋಷಿಸಿ ಅವರು ಕ್ಯಾಂಪಸ್‌ನೊಳಗಡೆ ಯಾವುದೇ ಚಟುವಟಿಕೆ ನಡೆಸದಂತೆ ಮಾಡಿದ್ದಾರೆ.

ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ ಹಕ್ಕುಗಳನ್ನು ಧ್ವಂಸ ಮಾಡುವ ಇಂತಹ ಪ್ರಯತ್ನಗಳ ವಿರುದ್ಧ ಧೈರ್ಯದಿಂದ ಎದ್ದು ನಿಂತಿರುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ಸೌಹಾರ್ದ ವ್ಯಕ್ತಪಡಿಸುತ್ತ ಎಐಡಿಡಬ್ಲ್ಯುಎ ವಿ.ವಿ. ಕ್ಯಾಂಪಸ್‌ಗಳ ಮೇಲೆ ಅಘೋಷಿತ ತುರ್ತುಪರಿಸ್ಥಿತಿ ಹೇರುತ್ತಿರುವುದರ ವಿರುದ್ಧ ಎಲ್ಲ ನಾಗರಿಕರು ದನಿಗೂಡಿಸಬೇಕು, ವಿಚಾರಶೂನ್ಯ ಸರ್ವಾಧಿಕಾರಶಾಹಿ ಹೊಡೆತಗಳಿಂದ ದೇಶದ ಮೂಲಸ್ವರೂಪವನ್ನು ರಕ್ಷಿಸಿಕೊಳ್ಳಲು, ಎತ್ತಿಹಿಡಿಯಲು ಒಂದಾಗಬೇಕು ಎಂದು ಕರೆ ನೀಡಿದೆ.

ನವ ಉದಾರ ವಿತ್ತೀಯ ಆಳ್ವಿಕೆಯ ವಿಕೃತಿ-2

ಖಾಸಗೀಕರಣ ಎಂಬ ಬೌದ್ಧಿಕ ಅಪ್ರಾಮಾಣಿಕತೆ ಮತ್ತು ದೇಶದ್ರೋಹಿ ಕೃತ್ಯ



ದೇಶದ ಅದೃಷ್ಟಹೀನ ಅಲ್ಪ ಸಂಖ್ಯಾತರ ಮೇಲೆ ಆರ್ಭಟಿಸುವ, ಜಬರ್ದಸ್ತು ಮಾಡುವ, ಆಡಂಬರದ ಗಂಡಸುತನ ತೋರಿಸುವ, ಆದರೆ ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳದ ವಿರುದ್ಧ ನಿಲ್ಲುವ ಎದೆಗಾರಿಕೆ ಹೊಂದಿಲ್ಲದ, ಅದೇ ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಆಘಾತ ತಲುಪಿಸುವಂತಹ ಆಜ್ಞೆಗಳನ್ನು ಕೊಂಡೊಯ್ಯುವ ಕೊಳವೆಯ ಪಾತ್ರ ವಹಿಸುತ್ತಿರುವ ಮೋದಿ ಸರಕಾರ ರಾಜ್ಯಗಳನ್ನು ಆರ್ಥಿಕವಾಗಿ ಹಿಂಡಲು ಮುಂದಾಗಿದೆ ಎಂಬುದನ್ನು ಈ ಲೇಖನದ ಮೊದಲ ಭಾಗದಲ್ಲಿ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ನವ ಉದಾರ ಆಳ್ವಿಕೆಯ ಇನ್ನೊಂದು ವಿಕೃತಿಯ ಅಂದರೆ ದೇಶದ ಆಸ್ತಿಗಳ ಖಾಸಗೀಕರಣ..

ತನ್ನ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವುದರ ಬದಲಾಗಿ ಮೋದಿ ಸರ್ಕಾರವು ರಾಜ್ಯಗಳನ್ನು ಹಿಂಡುತ್ತಿರುವ ಕ್ರಮವು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಒಡ್ಡಿದರೆ, ಸಾರ್ವಜನಿಕ ವಲಯವನ್ನು ಖಾಸಗೀಕರಣಗೊಳಿಸುವ ಕ್ರಮವು ದೇಶವನ್ನು ವಿದೇಶಿ ಮತ್ತು ದೇಶೀಯ ಏಕಸ್ವಾಮ್ಯ ಬಂಡವಾಳಶಾಹಿಗಳು ಕೊಳ್ಳೆ ಹೊಡೆಯಲು ಅವಕಾಶ ಕಲ್ಪಿಸುವ ದೇಶದ್ರೋಹಿ ಕೃತ್ಯವಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ನವ ಉದಾರ ಆಳ್ವಿಕೆಯಲ್ಲಿ ಹಣ ಕಾಸಿನ ಬಿಕ್ಕಟ್ಟಿಗೆ ಒಳಗಾಗಿರುವ ಕೇಂದ್ರ ಸರ್ಕಾರವು ಅದರಿಂದ ನುಣಿಚಿಕೊಳ್ಳಲು ಕುಯುಕ್ತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಅಂತಹ ಪ್ರಯತ್ನಗಳಲ್ಲಿ ಮೊದಲನೆಯದು, ತಾನು ಹೊರಬೇಕಾಗಿರುವ ವಿತ್ತೀಯ ಭಾರವನ್ನು, ಬಲವಂತವಾಗಿ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯನ್ನು ಉಲ್ಲಂಘಿಸಿ, ರಾಜ್ಯ ಸರ್ಕಾರಗಳ ಹೆಗಲಿಗೆ ಹೊರಿಸುವುದು. ಇನ್ನೊಂದು ಪ್ರಯತ್ನವೆಂದರೆ, ಸಾರ್ವಜನಿಕ ವಲಯವದ ಅನೇಕ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟಮಾಡುವುದು.

ಸಾರ್ವಜನಿಕ ವಲಯದ ಖಾಸಗೀಕರಣದ ಬಗ್ಗೆ ಸರ್ಕಾರವು ಒಂದಲ್ಲಾ ಒಂದು ಘೋಷಣೆ ಮಾಡದ ದಿನವೇ ಇಲ್ಲ. ಹರ್‌ದೀಪ್ ಪುರಿ ಎಂಬ ವಿಮಾನಯಾನ ಖಾತೆಯ ಸಚಿವರು ಏರ್ ಇಂಡಿಯಾ ಸಂಸ್ಥೆಯನ್ನು ಖಾಸಗೀಕರಿಸದಿದ್ದರೆ ಅದನ್ನು ಮುಚ್ಚಬೇಕಾಗುತ್ತದೆ ಎಂದು ಹೇಳಿದ್ದಾರೆ. ಎರಡು ಕಾರಣಗಳಿಂದ ಈ ಹೇಳಿಕೆ ಗಮನ ಸೆಳೆಯುತ್ತದೆ: ಮೊದಲನೆಯದು, ಖಾಸಗಿ ಕೊಳ್ಳುಗನೊಬ್ಬ ಏರ್ ಇಂಡಿಯಾ ಮತ್ತೆ ಕಾರ್ಯಾಚರಿಸುವಂತೆ ಮಾಡುವುದು ಸಾಧ್ಯವಾದರೆ (ಇಲ್ಲವಾದರೆ ಅದನ್ನು ಯಾರಾದರೂ ಏಕೆ ಕೊಳ್ಳುತ್ತಾರೆ), ಸರ್ಕಾರವೇ ಅದನ್ನು ಮಾಡಬಾರದೇಕೆ? ಎರಡನೆಯದು, ಹರ್‌ದೀಪ್ ಪುರಿಯವರ ಹೇಳಿಕೆ ಸರಿ ಇದೆ ಎಂಬುದನ್ನು ವಾದಕ್ಕಾಗಿ ಒಪ್ಪಿಕೊಂಡರೂ ಸಹ, ಅದೊಂದು ವಿಲಕ್ಷಣವಾದ ಹೇಳಿಕೆ. ಏಕೆಂದರೆ, ಒಬ್ಬ ಸಂಭಾವ್ಯ ಕೊಳ್ಳುಗನಿಗೆ ಹರಾಜಿನಲ್ಲಿ ಕೂಗುವ ಬೆಲೆಯನ್ನು ಇಳಿಸುವಂತೆ ಅದು ಸೂಚಿಸುತ್ತದೆ. ಟ್ರೇಡ್ ಯೂನಿಯನ್‌ಗಳ ಮಾತಿಗೆ ಕಿವಿಗೊಡದ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳದ ಅಸನ್ಸಾಲ್-ದುರ್ಗಾಪುರ ಪ್ರದೇಶದ ಅನೇಕ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಕರಣಗೊಳಿಸುವ ಹವಣಿಕೆಯಲ್ಲಿದೆ. ಮಾರುವ ಉದ್ದೇಶದಿಂದಲೇ ಬಿಎಸ್‌ಎನ್‌ಎಲ್ ಸಂಸ್ಥೆಯನ್ನು ನಿರ್ವೀರ್ಯಗೊಳಿಸಿ ಅದೊಂದು ಕೆಲಸಕ್ಕೆ ಬಾರದ ಸಂಸ್ಥೆ ಎನ್ನುವಂತೆ ಮಾಡಿ, ತಮಗೆ ಬೇಕಾದವರಿಗೆ ಅಗ್ಗದ ಬೆಲೆಯಲ್ಲಿ ಮಾರುವ ಸಲುವಾಗಿ ಬಿಎಸ್‌ಎನ್‌ಎಲ್ ನೌಕರರನ್ನು ಐಚ್ಛಿಕ ನಿವೃತ್ತಿ ಪಡೆಯುವಂತೆ ಒತ್ತಾಯಿಸಲಾಗಿದೆ. ಇಂತಹ ಅನೇಕ ಉದಾಹರಣೆಗಳಿವೆ.

ಸಾರ್ವಜನಿಕ ವಲಯದ ಮಹತ್ವದ ಅರಿವಿಲ್ಲದ ಮತ್ತು ಕಾರ್ಪೊರೇಟ್ ಕುಳಗಳೊಂದಿಗೆ ಒಡನಾಟ ಇಟ್ಟುಕೊಂಡಿರುವ ಬಿಜೆಪಿಯು ಸಾರ್ವಜನಿಕ ವಲಯವನ್ನು ಮಾರಲು ಉತ್ಸುಕವಾಗಿರುವುದು ಅದರ ಸಹಜ ಪ್ರವೃತ್ತಿ. ಆರ್ಥಿಕ ಮಂದಗತಿ ಉಂಟುಮಾಡಿರುವ ಬಿಕ್ಕಟ್ಟಿನ ಹಣಕಾಸಿನ ಪರಿಸ್ಥಿತಿಯಿಂದ ಹೊರ ಬರಲು ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಮಾರಲು ಬಿಜೆಪಿ ಸರ್ಕಾರವು ತಡೆದುಕೊಳ್ಳಲಾರದಷ್ಟು ಅವಸರದಲ್ಲಿದೆ.

ಖಾಸಗೀಕರಣವನ್ನು ಚುರುಕುಗೊಳಿಸುವ ಸಲುವಾಗಿ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಅದರ ನಾಯಕ ಸಂಸ್ಥೆಗಳಾದ ಐಎಂಎಫ್ ಮತ್ತು ವಿಶ್ವ ಬ್ಯಾಂಕ್ ಒಂದು ಮೋಸದ ಲೆಕ್ಕಾಚಾರಕ್ಕೆ ಇಳಿದಿದೆ. ಅವುಗಳ ಪ್ರಕಾರ, ಸಾರ್ವಜನಿಕ ವಲಯದ ಸಂಸ್ಥೆಗಳ ಮಾರಾಟದಿಂದ ಬಂದ (ಹುಟ್ಟುವಳಿ) ಹಣವನ್ನು ವಿತ್ತೀಯ ಕೊರತೆಯ ಮೊತ್ತದಿಂದ ಕಳೆಯಲಾಗುತ್ತದೆ. ಅಂದರೆ, ವಿತ್ತೀಯ ಕೊರತೆಯ ಗಾತ್ರವು ಸಣ್ಣದಾಗಿ ಕಾಣಿಸುವ ಮೂಲಕ "ವಿತ್ತೀಯ ಹೊಣೆಗಾರಿಕೆ" ಶಿಸ್ತು ಪಾಲನೆಯಾಗುತ್ತದೆ. ಆದರೆ, ಇದೊಂದು ಸಂಪೂರ್ಣ ಅನೈತಿಕ ನಡವಳಿಕೆ. ಆದರೂ ಸಹ, ಸೈದ್ಧಾಂತಿಕ ಕಾರಣಗಳಿಗಾಗಿ ಖಾಸಗೀಕರಣವನ್ನು ಜಾರಿಗೊಳಿಸಲಾಗುತ್ತಿದೆ.

ಸಾರ್ವಜನಿಕ ಸಂಸ್ಥೆಗಳ ಮಾರಾಟ ಹುಟ್ಟುವಳಿ ಹಣದ ಮೂಲಕ ವಿತ್ತೀಯ ಕೊರತೆಯ ಮಟ್ಟವನ್ನು ಇಳಿಸುವ ಕ್ರಮವು ಒಂದು ಸಂಪೂರ್ಣ ಅನೈತಿಕ ನಡವಳಿಕೆ ಹೇಗೆ ಎಂಬುದು ಸರಳವಾಗಿದೆ. ಒಂದು ಬೇಡಿಕೆಯನ್ನು ಮಿತಗೊಳಿಸುವ ಸನ್ನಿವೇಶದಲ್ಲಿ, ಅಂದರೆ ನಿರುದ್ಯೋಗ ಮತ್ತು ಸ್ಥಾಪಿತ ಸಾಮರ್ಥ್ಯಗಳು ಬಳಕೆಯಾಗದೆ ಉಳಿದ ಸನ್ನಿವೇಶದಲ್ಲಿ, ವಿತ್ತೀಯ ಕೊರತೆಯಿಂದಾಗಿ ಅರ್ಥವ್ಯವಸ್ಥೆಯ ಮೇಲೆ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ವಕ್ತಾರರು ಹೇಳುವ ಹಾಗೆ, ಯಾವುದೇ ಅಡ್ಡ-ಪರಿಣಾಮಗಳು ಬೀಳುವುದಿಲ್ಲ: ವಿತ್ತೀಯ ಕೊರತೆಯ ಹೆಚ್ಚಳದಿಂದಾಗಿ ಖಾಸಗಿ ಹೂಡಿಕೆಗೆ ಜಾಗವಿಲ್ಲದಂತಾಗಿ ಅದು ಹೊರಹೋಗುವ ಪರಿಸ್ಥಿತಿಯೂ ಉಂಟಾಗುವುದಿಲ್ಲ, ಮತ್ತು, ಅದರಿಂದ ಹಣದುಬ್ಬರವೂ ಉಂಟಾಗುವುದಿಲ್ಲ. ಏಕೆಂದರೆ, ವಾಸ್ತವವಾಗಿ ಉಳಿತಾಯಗಳ ಒಂದು "ನಿಗದಿತ ಭಂಡಾರ"" ಎಂಬುದೇನೂ ಇರುವುದಿಲ್ಲ, ಆದ್ದರಿಂದ ಖಾಸಗಿ ಹೂಡಿಕೆಗೆ ಜಾಗವಿಲ್ಲದಾಗುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ವಿತ್ತೀಯ ಕೊರತೆಯ ಹೆಚ್ಚಳದಿಂದಾಗಿಯೇ (ಅಧಿಕ ಖರ್ಚುಗಳ ಮೂಲಕ) ಅಧಿಕವಾಗಿ ಬೇಡಿಕೆ ಸೃಷ್ಟಿಯಾಗುತ್ತದೆ. ಪರಿಣಾಮವಾಗಿ ವರಮಾನಗಳು ಹೆಚ್ಚುವುದರಿಂದ ಉಳಿತಾಯಗಳೂ ಹೆಚ್ಚುತ್ತವೆ. ವಿತ್ತೀಯ ಕೊರತೆಯಿಂದಾಗಿ ಹಣದುಬ್ಬರ ಉಂಟಾಗುವುದಿಲ್ಲ, ಏಕೆಂದರೆ, ನಿರುದ್ಯೋಗ ಮತ್ತು ಸ್ಥಾಪಿತ ಸಾಮರ್ಥ್ಯಗಳು ಬಳಕೆಯಾಗದೆ ಉಳಿದಿರುತ್ತವೆ. ಬೇಡಿಕೆ ಅಧಿಕವಾಗಿ ಸೃಷ್ಟಿಯಾದಾಗ ವಸ್ತುಗಳ ಬೆಲೆ ಏರಿಕೆಯಾಗುವುದರ ಬದಲು ವಸ್ತುಗಳ ಉತ್ಪಾದನೆ ಹೆಚ್ಚುತ್ತದೆ. ಒಂದು ವೇಳೆ, ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ವಕ್ತಾರರು ಹೇಳುವ ಹಾಗೆ, **ವಿತ್ತೀಯ ಕೊರತೆಯಿಂದಾಗಿ ಅರ್ಥವ್ಯವಸ್ಥೆಯ ಮೇಲೆ ಅಡ್ಡ-ಪರಿಣಾಮಗಳು ಬೀಳುತ್ತವೆ ಎಂದುಕೊಂಡರೂ ಸಹ, ಸಾರ್ವಜನಿಕ ಸಂಸ್ಥೆಗಳ ಮಾರಾಟ ಹುಟ್ಟುವಳಿಯು (ಹಣ) ಅಂತಹ ಅಡ್ಡ-ಪರಿಣಾಮಗಳನ್ನೇನೂ ನಿವಾರಿಸುವುದಿಲ್ಲ.**

ಒಂದು ವೇಳೆ, ಉಳಿತಾಯಗಳ ಒಂದು "ನಿಗದಿತ ಭಂಡಾರ" ಇದೆ ಎಂದುಕೊಂಡರೂ ಸಹ, ಉದಾಹರಣೆಯಾಗಿ ಹೇಳುವುದಾದರೆ, ಆ ಉಳಿತಾಯಗಳ ನಿಧಿಯಿಂದ ಸರ್ಕಾರವೇ ಹೆಚ್ಚು ಸಾಲ ಪಡೆದುಕೊಂಡರೆ, ಆಗ, ಖಾಸಗಿ ವಲಯಕ್ಕೆ ಹೂಡಿಕೆ ಮಾಡುವ ಹಣದ ಲಭ್ಯತೆ ಕಡಿಮೆಯಾಗಿ, ಅವನ್ನು ಹೊರತಳ್ಳುವಂತಾಗುತ್ತದೆ ಎಂದಿಟ್ಟುಕೊಂಡರೂ ಕೂಡ, ಸಾರ್ವಜನಿಕ ಸಂಸ್ಥೆಗಳ ಮಾರಾಟ ಹುಟ್ಟುವಳಿಯಿಂದ (ಹಣದಿಂದ) ಉಳಿತಾಯಗಳ "ನಿಗದಿತ ನಿಧಿ" ಎಳ್ಳಷ್ಟೂ ಹೆಚ್ಚುವುದಿಲ್ಲ. ಅದೇ ರೀತಿಯಲ್ಲಿ, ವಿತ್ತೀಯ ಕೊರತೆಯ ಹೆಚ್ಚಳದಿಂದಾಗಿ ಅಧಿಕ ಬೇಡಿಕೆ ಸೃಷ್ಟಿಯಾಗುವ ಕಾರಣದಿಂದ ಹಣದುಬ್ಬರ ಉಂಟಾಗುತ್ತದೆ ಎಂದುಕೊಂಡರೂ ಸಹ, ಆಗ, ಸಾರ್ವಜನಿಕ ಸಂಸ್ಥೆಗಳ ಮಾರಾಟವು ಈ ಬೇಡಿಕೆ ಅಧಿಕವಾಗಿ ಸೃಷ್ಟಿಯಾಗುವುದನ್ನು ಎಳ್ಳಷ್ಟೂ ತಗ್ಗಿಸುವುದಿಲ್ಲ. ಏಕೆಂದರೆ, ಈ ಸಾರ್ವಜನಿಕ ಸಂಸ್ಥೆಗಳ ಕೊಳ್ಳುಗರು ತಮಗೆ ಬೇಕಾಗುವ ವಸ್ತುಗಳು ಮತ್ತು ಸೇವೆಗಳ ಮೇಲೆ ತಮ್ಮ ಬೇಡಿಕೆಯನ್ನು ತಗ್ಗಿಸುವುದಿಲ್ಲ. ಈ ರೀತಿಯಲ್ಲಿ, ಸಾರ್ವಜನಿಕ ಸಂಸ್ಥೆಗಳ ಮಾರಾಟವು, ವಾಸ್ತವವಾಗಿ, ವಿತ್ತೀಯ ಕೊರತೆಯನ್ನು ಮುಕ್ತಾಯಗೊಳಿಸುವುದಿಲ್ಲ. ಆದಾಗ್ಯೂ, ವಿತ್ತೀಯ ಕೊರತೆಯನ್ನು ಖಂಡ ತುಂಡವಾಗಿ ವಿರೋಧಿಸುವ ಹಣಕಾಸು ಬಂಡವಾಳವು ಸಾರ್ವಜನಿಕ ಸಂಸ್ಥೆಗಳ ಮಾರಾಟವು ವಿತ್ತೀಯ ಕೊರತೆಯನ್ನು ತಗ್ಗಿಸುವ ಒಂದು ಸಾಧನ ಎಂದು ಸಂಪೂರ್ಣವಾಗಿ ಸಮರ್ಥಿಸುತ್ತದೆ. ಅಂದರೆ, ಹಣಕಾಸು ಬಂಡವಾಳವು ಸಾರ್ವಜನಿಕ ಸಂಸ್ಥೆಗಳ ಮಾರಾಟವನ್ನು ಸರ್ಕಾರ ತೆರಿಗೆ ವಿಧಿಸುವ ಕ್ರಮಕ್ಕೆ ಸರಿಸಮನಾದ ಕ್ರಮವೆಂದು ಬಗೆಯುತ್ತದೆ.



ಏರ್ ಇಂಡಿಯಾ ತಗೊಳ್ಳಿ -ಬಿಪಿಸಿಎಲ್ ತಗೊಳ್ಳಿ -ಭಾರತ ತಗೊಳ್ಳಿ

ಅರ್ಥಶಾಸ್ತ್ರದಲ್ಲಿ "ಪರಿಚಲನೆ"(flow) ಮತ್ತು "ಸಂಗ್ರಹ" (stock)ಗಳ ನಡುವಿನ ಭಿನ್ನತೆಯನ್ನು ಗುರುತಿಸಲಾಗುತ್ತದೆ. ಸರ್ಕಾರದ ವರಮಾನ(ಒಂದು ಪರಿಚಲನೆ) ಮತ್ತು ಖರ್ಚುಗಳ(ಇನ್ನೊಂದು ಪರಿಚಲನೆ) ನಡುವಿನ ವ್ಯತ್ಯಾಸವೇ ವಿತ್ತೀಯ ಕೊರತೆ. ತೆರಿಗೆ ಆದಾಯ(ಪರಿಚಲನೆ) ಹೆಚ್ಚಿಸುವ ಮೂಲಕ ಅಥವಾ ಖರ್ಚುಗಳನ್ನು(ಪರಿಚಲನೆ) ತಗ್ಗಿಸುವ ಮೂಲಕ, ಅಂದರೆ, ಈ ಎರಡು ಪರಿಚಲನೆಯ ಅಂಶಗಳನ್ನು ಸಮನ್ವಯಗೊಳಿಸುವ ಮೂಲಕ ವಿತ್ತೀಯ ಕೊರತೆಯನ್ನು ಮುಕ್ತಾಯಗೊಳಿಸಬಹುದು.

ಇನ್ನೊಂದೆಡೆಯಲ್ಲಿ, ಸಾರ್ವಜನಿಕ ಸಂಸ್ಥೆಗಳ ಆಸ್ತಿ ಮಾರಾಟದ ಹುಟ್ಟುವಳಿಯು (ಹಣ), ಆಯ-ವ್ಯಯ ಪಟ್ಟಿಯಲ್ಲಿ(balance sheet) ಒಂದು ಸಂಗ್ರಹ ಎಂದು ಸೂಚಿತವಾಗುತ್ತದೆ. ಸಂಗ್ರಹ ಸಂಬಂಧಿತ ಈ ಆಸ್ತಿಯ ವ್ಯವಹಾರವು, ತೆರಿಗೆ ಅಥವಾ ಖರ್ಚುಗಳ ಪರಿಚಲನೆಯ ಏರು ಪೇರುಗಳಿಂದ ಉಂಟಾಗುವ ಯಾವ ಅಡ್ಡ-ಪರಿಣಾಮಗಳನ್ನು ನಿವಾರಿಸುವುದಿಲ್ಲ. ಆದರೂ, **ವಿತ್ತೀಯ ಕೊರತೆಯನ್ನು ಮುಕ್ತಾಯಗೊಳಿಸಲು ಸಾರ್ವಜನಿಕ ಸಂಸ್ಥೆಗಳ ಮಾರಾಟದ ಮೂಲಕ ಬರುವ ಹಣವು ಒಂದು ನ್ಯಾಯ ಸಮ್ಮತ ಸಾಧನವೆಂದು ಐಎಂಎಫ್ ಮತ್ತು ಇತರ ಸಂಸ್ಥೆಗಳು ಬಗೆಯುತ್ತವೆ. ಇದು ಅವರ ಅಪ್ರಮಾಣಿಕತನವನ್ನು ತೋರಿಸುತ್ತದೆ.** ಅವರ ಬೌದ್ಧಿಕ ನಿಲುವು ವೈಜ್ಞಾನಿಕ ಆಲೋಚನಾ ಕ್ರಮಕ್ಕೆ ಅಧೀನವಾಗಿರುವುದರ ಬದಲು ಸಮಯ ಸಾಧಕ ಬಯಕೆಗಳಿಂದ ಕೂಡಿದ ಖಾಸಗೀಕರಣ ಸಿದ್ಧಾಂತಕ್ಕೆ ಅಧೀನವಾಗಿದೆ.

ಈ ಬೌದ್ಧಿಕ ಅಪ್ರಾಮಾಣಿಕತೆ ಅಲ್ಲಿಗೇ ನಿಲ್ಲುವುದಿಲ್ಲ. ಒಂದು ಖಾಸಗಿ ಕಂಪೆನಿಯು ಸಾರ್ವಜನಿಕ ಸಂಸ್ಥೆಯೊಂದನ್ನು ಕೊಳ್ಳುವಾಗ ಯಾರೊ ಒಬ್ಬ ಕಿರಾಣಿ ಅಂಗಡಿಯವನು ಹೊಟ್ಟೆ ಬಟ್ಟೆ ಕಟ್ಟಿ ಉಳಿಸಿಕೊಂಡ ಹಣದಿಂದ ಒಂದು ಆಸ್ತಿ ಕೊಳ್ಳುವ ರೀತಿಯಲ್ಲಿ ಹಣ ಹೊಂದಿಸಿಕೊಳ್ಳುವುದಿಲ್ಲ. ಖಾಸಗಿ ಕಂಪೆನಿಯು ಆಸ್ತಿ ಕೊಳ್ಳುವಾಗ ಸಾಲ ಮಾಡುತ್ತದೆ ಅಥವಾ ಬೇರೆ ಕೆಲವು ಸ್ವತ್ತುಗಳನ್ನು ಕೊಳ್ಳುವುದನ್ನು ಮುಂದೂಡುತ್ತದೆ. ಆ ಕಂಪೆನಿಯ ಆಯ-ವ್ಯಯ ಪಟ್ಟಿಯಲ್ಲಿ ಈ ಎಲ್ಲ ವ್ಯವಹಾರಗಳೂ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ, ಸರ್ಕಾರದ ವಿತ್ತೀಯ ಕೊರತೆ 100ರೂ ಗಳಷ್ಟಿದೆ ಮತ್ತು ಅದನ್ನು ಸರಿದೂಗಿಕೊಳ್ಳಲು ಸರ್ಕಾರವು 100ರೂ ಗಳನ್ನು ಬ್ಯಾಂಕಿನಿಂದ ಸಾಲ ಪಡೆಯುತ್ತದೆ. ಆದರೆ, ಬ್ಯಾಂಕಿನಿಂದ ಸಾಲ ಪಡೆಯುವ ಬದಲು ಸರ್ಕಾರವು 100ರೂ ಬೆಲೆ ಬಾಳುವ ತನ್ನ ಆಸ್ತಿಯೊಂದನ್ನು ಮಾರುತ್ತದೆ. ಆದರೆ, ಆ ಆಸ್ತಿಯನ್ನು ಕೊಳ್ಳುವ ಖಾಸಗಿ ಕಂಪೆನಿಯು 100ರೂ ಗಳನ್ನು ಬ್ಯಾಂಕಿನಿಂದಲೇ ಸಾಲ ಪಡೆಯುತ್ತದೆ. ಇಂತಹ ಒಂದು ಸನ್ನಿವೇಶದಲ್ಲಿ, **ಸರ್ಕಾರವು ವಿತ್ತೀಯ ಕೊರತೆಗೆ ಒಳಗಾದರೆ ಅರ್ಥವ್ಯವಸ್ಥೆಗೆ ಕೇಡಾಗುತ್ತದೆ; ಆದರೆ, ಸಾರ್ವಜನಿಕ ಸಂಸ್ಥೆಗಳನ್ನು ಮಾರುವುದು ಸರಿಯಾಗುತ್ತದೆ ಎಂದು ಹೇಳುವುದು ಆಷಾಢಭೂತಿತನವಾಗುತ್ತದೆ.** ತನ್ನ ಖರ್ಚುಗಳನ್ನು ಸರಿದೂಗಿಸಿಕೊಳ್ಳಲು ಸರ್ಕಾರ 100ರೂ ಗಳನ್ನು ಸಾಲ ಮಾಡಿದರೆ ಅರ್ಥವ್ಯವಸ್ಥೆಗೆ ಕೇಡಾಗುತ್ತದೆ. ಸರ್ಕಾರದ ಆಸ್ತಿ ಕೊಳ್ಳುವವನು ಅದೇ 100ರೂ ಗಳನ್ನು ಬ್ಯಾಂಕಿನಿಂದ ಸಾಲ ಪಡೆದರೆ ಅರ್ಥವ್ಯವಸ್ಥೆಯು ಚೆನ್ನಾಗಿರುತ್ತದೆ ಎಂದು ಹೇಳಿದಂತಾಗುತ್ತದೆ! ಈ ವಾದದಲ್ಲಿ ಯಾವ ಆರ್ಥಿಕ ತರ್ಕಾಧಾರವೂ ಇಲ್ಲ.

ಈ ವಿಷಯವನ್ನು ಇನ್ನೊಂದು ರೀತಿಯಲ್ಲೂ ನೋಡಬಹುದು. ವಿತ್ತೀಯ ಕೊರತೆಯಿಂದ ಸರ್ಕಾರದ ಸಾಲ ಹೆಚ್ಚುತ್ತದೆ. ಆ ಸಾಲವನ್ನು ಸರ್ಕಾರವು ಸಾಲ ಪತ್ರಗಳ ಮಾರಾಟದ ಮೂಲಕ ಪಡೆಯುತ್ತದೆ. ಸಾರ್ವಜನಿಕ ಸಂಸ್ಥೆಗಳ ಷೇರುಗಳನ್ನು

ಪುಟ 14 ನೋಡಿ

ಖಾಸಗೀಕರಣ ಎಂಬ ಬೌದ್ಧಿಕ ಅಪ್ರಾಮಾಣಿಕತೆ ಮತ್ತು ದೇಶದ್ರೋಹಿ ಕೃತ್ಯ

ಪುಟ 13 ರಿಂದ

ಖಾಸಗಿಯವರಿಗೆ ಮಾರುವ ಮೂಲಕ ಸರ್ಕಾರದ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಗುತ್ತದೆ. **ಖಾಸಗೀಕರಣವು ಅಪಾಯಕಾರಿಯಲ್ಲ. ಆದರೆ, ವಿತ್ತೀಯ ಕೊರತೆ ಅಪಾಯಕಾರಿ ಎಂಬ ವಾದವು ಸರ್ಕಾರ ತನ್ನ ಷೇರುಗಳನ್ನು ಖಾಸಗಿಯವರಿಗೆ ಮಾರಿದರೆ ಅದು ಅಪಾಯಕಾರಿಯಲ್ಲ; ಸರ್ಕಾರವು ಸಾಲ ಪತ್ರಗಳನ್ನು (ಬಾಂಡುಗಳು) ಮಾರುವ ಕ್ರಮ ಮಾತ್ರ ಅಪಾಯಕಾರಿ ಎಂದು ಹೇಳಿದಂತಾಗುತ್ತದೆ. ಇದೊಂದು ಸಮರ್ಥನೀಯವೇ ಅಲ್ಲದ ವಾದ. ಇದೊಂದು ಖಾಸಗೀಕರಣವನ್ನು ಜಾರಿಗೊಳಿಸುವ ತಂತ್ರವಷ್ಟೇ.**

ಬ್ಯಾಂಕ್ ಸಾಲ ಮತ್ತು ಇತರ ಸೌಲಭ್ಯಗಳು ದೊಡ್ಡ ಬಂಡವಾಳಶಾಹಿಗಳಿಗೆ ಮಾತ್ರ ಲಭಿಸುತ್ತಿದ್ದ ಪರಿಸ್ಥಿತಿಗೆ ತಡೆ ಒಡ್ಡುವ ಉದ್ದೇಶದಿಂದ ಸಾರ್ವಜನಿಕ ವಲಯವನ್ನು ಹುಟ್ಟಿಹಾಕಲಾಗಿತ್ತು. ಸಾಮ್ರಾಜ್ಯಶಾಹಿಗಳ ಹಿಡಿತದಿಂದ ಅರ್ಥವ್ಯವಸ್ಥೆಯನ್ನು ವಿಮುಕ್ತಿಗೊಳಿಸುವ ಅಜೆಂಡಾದ ಭಾಗವಾಗಿ ಸಾರ್ವಜನಿಕ ವಲಯವನ್ನು ಹುಟ್ಟಿಹಾಕಲಾಗಿತ್ತು. ಆದರೆ, ನವ ಉದಾರ ಆಳ್ವಿಕೆಯಲ್ಲಿ ಸರ್ಕಾರಗಳು ದೊಡ್ಡ ಬಂಡವಾಳಶಾಹಿಗಳ ಓಲೈಕೆಯಲ್ಲಿ ತೊಡಗಿವೆ. ಆದಾಗ್ಯೂ, ತಮ್ಮ ಏಕಸ್ವಾಮ್ಯದ ಶಕ್ತಿಯನ್ನು ಬಳಸಿಕೊಂಡು ದೇಶದ ಸಂಪನ್ಮೂಲಗಳನ್ನು ಕಬಳಿಸುವ ದೊಡ್ಡ ಬಂಡವಾಳಶಾಹಿಗಳ ಪ್ರಭಾವವನ್ನು ಸೀಮಿತಗೊಳಿಸುವಲ್ಲಿ ಸಾರ್ವಜನಿಕ ವಲಯವು ಒಂದು ಪ್ರಮುಖ ಪಾತ್ರ ವಹಿಸಬಲ್ಲದು. ದೇಶದ ಹಿತಾಸಕ್ತಿಗಳ ಬಗ್ಗೆ ಕಾತರ ಉಳ್ಳ ಯಾವುದೇ ಒಂದು ಸರ್ಕಾರವು, ಅದು ನವ ಉದಾರವಾದದ ಬಲೆಯಲ್ಲಿ ಸಿಕ್ಕಿದ್ದರೂ ಸಹ, ದೇಶದ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ, ವಿದೇಶಿ ಮತ್ತು ದೇಶೀಯ ಏಕಸ್ವಾಮ್ಯ ಬಂಡವಾಳವು ಕೊಳ್ಳೆ ಹೊಡೆಯುತ್ತಿರುವುದರ ವಿರುದ್ಧವಾಗಿ, ಸಾರ್ವಜನಿಕ ವಲಯವನ್ನು ಪೋಷಿಸುತ್ತದೆ. ಆದರೆ, **ತಮ್ಮ ಟೀಕಾಕಾರರನ್ನು "ರಾಷ್ಟ್ರ-ವಿರೋಧಿ ಎಂದು ಆಪಾದನೆ ಹೊರಿಸುವ ನಮ್ಮ ಹಿಂದುತ್ವವಾದಿಗಳಿಗೆ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವಿದೇಶಿ ಮತ್ತು ದೇಶೀಯ ಏಕಸ್ವಾಮ್ಯ ಬಂಡವಾಳದ ಹಿತ ರಕ್ಷಣೆ ಮಾಡುವುದೇ ಒಂದು ಪ್ರಿಯವಾದ ಕೆಲಸ. ಸಾಮ್ರಾಜ್ಯಶಾಹಿಗಳ ಭೀಕರ ವಿರೋಧವನ್ನು ಲೆಕ್ಕಿಸದೆ ಸ್ಥಾಪಿಸಿದ ಸಾರ್ವಜನಿಕ ವಲಯದ ನಾಶದ ಬಗ್ಗೆ ಅವರಿಗೆ ಸ್ವಲ್ಪವೂ ವ್ಯಥೆ ಇಲ್ಲ.**

ಈ ಎಲ್ಲ ಅಂಶಗಳಿಂದ ನವ ಉದಾರ ವಿತ್ತೀಯ ನೀತಿಯ ಕಾರ್ಯವೈಖರಿ ಹೇಗಿದೆ ಎಂಬುದು ಸ್ಪಷ್ಟವಾಗುತ್ತದೆ. ನವ ಉದಾರವಾದವು ವಿತ್ತೀಯ ನೀತಿಯನ್ನು "ಆವರ್ತ-ವಿರೋಧಿ"ಯಾಗಿಸುವ ಬದಲು "ಆವರ್ತ-ಪರ"ವಾಗಿಸುತ್ತದೆ. ಅರ್ಥವ್ಯವಸ್ಥೆಯು ಇಳಿಮುಖವಾದಾಗ ಆದಾಯಗಳೂ ಇಳಿಯುತ್ತವೆ. ಅಂತಹ ಪರಿಸ್ಥಿತಿಯಲ್ಲಿ ತನ್ನ ಖರ್ಚು ವೆಚ್ಚಗಳನ್ನು ಭರಿಸಲು ಕೇಂದ್ರ ಸರ್ಕಾರಕ್ಕೆ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಮೇಲೆ ತೆರಿಗೆ ಹೇರಲೂ ಆಗುತ್ತಿಲ್ಲ; ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳಲೂ ಆಗುತ್ತಿಲ್ಲ. ಸರ್ಕಾರವು ತನ್ನ ಖರ್ಚು ವೆಚ್ಚಗಳನ್ನು ಕಡಿತಗೊಳಿಸಿದ್ದರೆ ಉಂಟಾಗುತ್ತಿದ್ದ ತೊಂದರೆಗಳಿಗೆ ಹೋಲಿಸಿದರೆ, ಬಂಡವಾಳಶಾಹಿಗಳ ಮೇಲೆ ತೆರಿಗೆ ಹೇರಿದ್ದರೆ, ಅವರ ಲಾಭಕ್ಕೆ ಯಾವ ಧಕ್ಕೆಯೂ ಆಗುತ್ತಿರಲಿಲ್ಲ. ತನ್ನ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳುವುದರ ಬದಲಾಗಿ ಕೇಂದ್ರ ಸರ್ಕಾರವು ರಾಜ್ಯಗಳನ್ನು ಹಿಂಡುತ್ತಿರುವ ಕ್ರಮವು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಒಡ್ಡುತ್ತದೆ. ಸಾರ್ವಜನಿಕ ವಲಯವನ್ನು ಖಾಸಗೀಕರಣಗೊಳಿಸುವ ಕ್ರಮವು ದೇಶವನ್ನು ವಿದೇಶಿ ಮತ್ತು ದೇಶೀಯ ಏಕಸ್ವಾಮ್ಯ ಬಂಡವಾಳಶಾಹಿಗಳು ಕೊಳ್ಳೆ ಹೊಡೆಯಲು ಅವಕಾಶ ಕಲ್ಪಿಸುತ್ತದೆ.

ಮೌಲ್ಯಗಳ ಮರು ಸ್ಥಾಪನೆಗೆ ಹೋರಾಟ ನಡೆಸಬೇಕು......

ಪುಟ 16 ರಿಂದ

ಸಿ.ಬಸವಲಿಂಗಯ್ಯ ನಿರ್ದೇಶನದ ಲಕ್ಷ್ಮೀಪತಿ ಕೋಲಾರ ರಚಿಸಿದ "ಕನ್ನಗತ್ತಿ" ನಾಟಕವನ್ನು ಪ್ರದರ್ಶಿಸಲಾಯಿತು.

ಪ್ರತಿನಿಧಿ ಅಧಿವೇಶನದ ಕಲಾಪಗಳು

ಮೊದಲನೆಯ ದಿನದ (ಡಿಸೆಂಬರ್ 14) ಸಂಜೆಗೆ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ನಡೆಸಿಕೊಡಲು ಅಚ್ಯುತ, ಫ್ಲೋರಾ, ಬಿ.ಐ.ಈಳಿಗೇರ, ವಾಸುದೇವ ಉಚ್ಚಿಲ್ ಹಾಗೂ ವಿಠ್ಠಲ ಭಂಡಾರಿ ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ರಚಿಸಲಾಯಿತು. ಕಲಾಪ ದಾಖಲು, ನಿರ್ಣಯ ಮತ್ತು ಅರ್ಹತಾ ಪರಿಶೀಲನಾ ಸಮಿತಿಗಳನ್ನೂ ನೇಮಿಸಲಾಯಿತು. ವಿಠ್ಠಲ್ ಭಂಡಾರಿ ಅವರು ಮಂಡಿಸಿದ ಶ್ರದ್ಧಾಂಜಲಿ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು. ಪ್ರಧಾನ ಕಾರ್ಯದರ್ಶಿ ಎಸ್. ದೇವೇಂದ್ರಗೌಡ ಸಮ್ಮೇಳನದ ಪ್ರಮುಖ ಅಜೆಂಡಾ ಆದ ರಾಜ್ಯ ಸಮಿತಿಯ ಕರಡು ವರದಿಯನ್ನು ಚರ್ಚೆಗೆ ಮಂಡಿಸಿದರು. ಮೊದಲ ಭಾಗ ಇಂದಿನ ಸಾಂಸ್ಕೃತಿಕ ಪರಿಸ್ಥಿತಿಯ ವಿವರವಾದ ನೋಟ ಕೊಡುವಂಥದಾಗಿತ್ತು. ಈ ಹಿನ್ನೆಲೆಯಲ್ಲಿ ಮುಂಬರುವ ಅವಧಿಯಲ್ಲಿ ಸಮುದಾಯದ ಕರ್ತವ್ಯಗಳನ್ನೂ ಗುರುತಿಸಲಾಗಿತ್ತು. ಎರಡನೆಯ ಭಾಗದಲ್ಲಿ ಸಂಘಟನಾ ಪರಿಸ್ಥಿತಿಯ ಪರಾಮರ್ಶೆ ಸಹ ಇತ್ತು. ಮೂರನೆಯ ಭಾಗದಲ್ಲಿ ಈಗಾಗಲೇ ಸಮುದಾಯದ ಘಟಕಗಳ ವಿಸ್ತರಣೆ, ಪ್ರಧಾನವಾಗಿ ಮಾಡುತ್ತಾ ಬಂದಿರುವ ರಂಗ ಚಟುವಟಿಕೆಗಳು, ವಿಚಾರ ಸಂಕಿರಣ, ಸಾಂಸ್ಕೃತಿಕ ವಿದ್ಯಮಾನಗಳಿಗೆ ಸ್ಪಂದನ, ಸಾಂಸ್ಕೃತಿಕ ಮಧ್ಯಪ್ರವೇಶ ಮುಂತಾದವುಗಳಲ್ಲಿ ವಿಸ್ತರಣೆ ಮತ್ತು ನಿರ್ದಿಷ್ಟ ಯೋಜನೆಯೂ ಇತ್ತು. ಆ ಮೇಲೆ ಲೆಕ್ಕಪತ್ರ ವರದಿಯನ್ನು ಮಂಡಿಸಲಾಯಿತು.. ಮೊದಲ ದಿನ ಸಂಜೆ ಪ್ರತಿನಿಧಿಗಳ ಗುಂಪು ರಚಿಸಿ, ಸಭೆ ಸೇರಿ ಚರ್ಚಿಸಲು ಸೂಚಿಸಲಾಯಿತು.

ಎರಡನೇ ದಿನ ಕರಡು ವರದಿಯ ಮೇಲೆ ಚರ್ಚೆ ಮುಖ್ಯ ಕಲಾಪವಾಗಿತ್ತು. 24 ಪ್ರತಿನಿಧಿಗಳು ಕರಡು ವರದಿಯ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. ವರದಿ ಪುಷ್ಟೀಕರಿಸಲು ಸಲಹೆಗಳು, ವರದಿಯ ಬಗ್ಗೆ ವಿಮರ್ಶೆ-ಟೀಕೆ, ಬಿಟ್ಟು ಹೋಗಿರುವ ವಿಷಯಗಳನ್ನು ಸೇರಿಸಲು ಸೂಚನೆಗಳು, ಚರ್ಚೆ ನಡೆಯಿತು. ಈ ಚರ್ಚೆಗೆ ಉತ್ತರ ನೀಡಿದ ಪ್ರಧಾನ ಕಾರ್ಯದರ್ಶಿ ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡಿದರು. ಕೆಲವು ಸಲಹೆ-ಸೂಚನೆಗಳನ್ನು ಅಂಗೀಕರಿಸಿದರು. ಈ ಮಾರ್ಪಾಡುಗಳೊಂದಿಗೆ ಸಮ್ಮೇಳನ ಕರಡು ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಲೆಕ್ಕಪತ್ರದ ವರದಿಯನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು. ಕರಡು ವರದಿ ಬಗ್ಗೆ ಚರ್ಚೆ ನಡೆಸುತ್ತಿದ್ದಂತೆ ಹಲವು ನಿರ್ಣಯಗಳು ಸಮ್ಮೇಳನದಲ್ಲಿ ಸೂಚಿತವಾದವು. 5 ನಿರ್ಣಯಗಳನ್ನು (ಬಾಕ್ಸ್ ನಲ್ಲಿವೆ) ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು. ಸಮ್ಮೇಳನ 29 ಸದಸ್ಯರಿರುವ ಹೊಸ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆರಿಸಿತು. ಹೊಸದಾಗಿ ಚುನಾಯಿತವಾದ ರಾಜ್ಯ ಸಮಿತಿ ಸಭೆ ಸೇರಿ ಪದಾಧಿಕಾರಿಗಳನ್ನು ಆರಿಸಿತು. ಸಮುದಾಯ ಕರ್ನಾಟಕದ ಗೌರವ ಅಧ್ಯಕ್ಷರಾಗಿ ಬೊಳುವಾರು ಮಹಮ್ಮದ್ ಕುಂಞ ಅವರನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಅಚ್ಯುತ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ದೇವೇಂದ್ರಗೌಡ ಪುನರಾಯ್ಕೆಯಾದರು. ಪದಾಧಿಕಾರಿಗಳ ಪೂರ್ಣ ಪಟ್ಟಿ ಜೊತೆಗಿರುವ ಬಾಕ್ಸಿನಲ್ಲಿದೆ.

'ಸಂಘ ಪರಿವಾರದಲ್ಲಿರುವವರಿಗೆ ತಿಳುವಳಿಕೆ ನೀಡಿ'

ಸಂಘಪರಿವಾರದಲ್ಲಿರುವ ಮಿತ್ರರು ದಾರಿ ತಪ್ಪುತ್ತಿರುವ ಗೂಡಿನಲ್ಲಿದ್ದು, ಅವರಿಗೆ ತಿಳುವಳಿಕೆ ನೀಡಿ ಸಮಾಜ ಮುಖಿಯಾಗಿ ಕರೆತರುವ ಪ್ರಯತ್ನ ಆಗಬೇಕು, ಎಂದು ಲಕ್ಷ್ಮೀಪತಿ ಕೋಲಾರ ಎರಡನೇ ದಿನ ಸಂಜೆ (ಡಿಸೆಂಬರ್ 15) ನಡೆದ ಸಮಾರೋಪದಲ್ಲಿ ಮಾತನಾಡುತ್ತಾ ಕರೆ ನೀಡಿದರು. 'ವಿಚಾರ ಗೊತ್ತಿಲ್ಲದವರ ಕಡೆಯಿಂದ ದೇಶದಲ್ಲಿ ಪ್ರಗತಿಪರರ ಕೊಲೆಗಳು ನಡೆಯುತ್ತಿವೆ. ಅವರ ಎದೆಯಲ್ಲಿ ಬೇಡವಾದ ವಿಚಾರಗಳನ್ನು ತುಂಬಿಸಿ ಶಾಂತಿಯನ್ನು ನಾಶ ಮಾಡಲು ಹೊರಟಿದ್ದಾರೆ. ಇಂತಹವರ ತಲೆಯಲ್ಲಿ ತುಂಬಿರುವ ಕಲ್ಮಶವನ್ನು ತೆಗೆದುಹಾಕಿ ಹೊಸ ವಿಚಾರಗಳನ್ನು ತರುವ ನಿಟ್ಟಿನಲ್ಲಿ ಆಲೋಚಿಸಬೇಕು ಎಂದು ಅವರು ಸಲಹೆ ನೀಡಿದರು.

ದೇಶದಲ್ಲಿ ಆಳುವ ಸರ್ಕಾರಗಳು ತಮ್ಮ ನೀತಿಗಳಿಂದ ಎಲ್ಲಾ ಸಮುದಾಯಗಳನ್ನು ದಮನ ಮಾಡಲು ಹೊರಟಿದ್ದಾರೆ. ಕಲೆ ಮತ್ತು ಸಾಹಿತ್ಯದ ಮೂಲಕ ಸಮುದಾಯ ಸಂಘಟನೆ ಎಚ್ಚರಿಸುವ ಕೆಲಸ ಮಾಡಬೇಕಾಗಿದೆ, ಎಂದು ಸಮಾರೋಪ ಗೋಷ್ಠಿಗೆ ಅತಿಥಿಯಾಗಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ವಿ.ಗೀತಾ ಮಾತನಾಡುತ್ತಾ ಹೇಳಿದರು. ಚಿಂತನೆ ಮತ್ತು ಹೋರಾಟ ಒಟ್ಟಿಗೆ ಸೇರಿ ದೇಶದ ಬೆಳವಣಿಗೆಗೆ ಕೊಡುಗೆಯಾಗಬೇಕು. ಸಂವಿಧಾನ ಉಲ್ಲಂಘನೆ ಮಾಡಲು ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಇಂತಹ ಸಂದರ್ಭದಲ್ಲಿ ಸಂವಿಧಾನ ಓದು ಅಭಿಯಾನ, ಜಾಥಾಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಮೂಲಕ ಸಂವಿಧಾನ ಉಳಿಸಿಕೊಳ್ಳಬೇಕು' ಎಂದು ಹೇಳಿದರು. ಬಹುತ್ವ ಒಡೆಯುವ ಶಕ್ತಿಗಳನ್ನು ಮೆಟ್ಟಿ ನಿಲ್ಲುವ ಬರವಣಿಗೆಗಳ ಮೂಲಕ ಯುವಕರಲ್ಲಿ ಹೊಸ ವಿಚಾರಗಳನ್ನು ಮತ್ತು ಆಲೋಚಿಸುವ ಶಕ್ತಿಯನ್ನು ಸಮುದಾಯ ತುಂಬಬೇಕೆಂದು ಅಭಿಪ್ರಾಯ ಪಟ್ಟರು.

ಬೊಳುವಾರ ಮಹಮದ ಕುಂಞ ಪೌರತ್ವ ತಿದ್ದುಪಡಿ ಮಸೂದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ರಿಜಿಸ್ಟರ್ (ಎನ್.ಪಿ.ಆರ್.) ಜಾರಿಯ ಅಪಾಯಗಳ ಬಗ್ಗೆ ಎಚ್ಚರಿಸಿದರು. ಇವುಗಳು (ಸಿಎಎ/ಎನ್.ಪಿ.ಆರ್.) ಬರಿಯ ಮುಸ್ಲಿಂ-ವಿರೋಧಿ ಮಾತ್ರವಲ್ಲ. ಎಲ್ಲ ಕೆಳ ಜಾತಿ ಕೆಳ ವರ್ಗಗಳ ವಿರುದ್ಧ ದಾಳಿ. ಇದರ ವಿರುದ್ಧ ಸಮುದಾಯ ಎಲ್ಲ ಸಾಂಸ್ಕೃತಿಕ ಸಂಘಟನೆಗಳನ್ನು ಒಗ್ಗೂಡಿಸಿ ಹೋರಾಡಬೇಕು ಎಂದರು. ಅತಿಥಿಗಳಾಗಿ ಆಗಮಿಸಿದ್ದ ಸಿ.ಎಸ್.ವೆಂಕಟೇಶ್ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಭಾಗವಹಿಸಿದ್ದರು. ಸಮುದಾಯದ ಉಪಾಧ್ಯಕ್ಷರುಗಳಾದ ಟಿ.ಸುರೇಂದ್ರ ರಾವ್ ಮತ್ತು ಬಿ.ಐ.ಈಳಿಗೇರ ಅವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಪಿಚ್ಚಳ್ಳಿ ಶ್ರೀನಿವಾಸ ವಹಿಸಿದ್ದರು.

ಸಮಾರೋಪದ ನಂತರ ಸೂಫಿ ಗಾಯಕ ಮುಕ್ತಿಯಾರ್ ಅಲಿ ಅವರ ತಂಡದಿಂದ ಎಲ್ಲರ ಮನಸ್ಸಿಗೆ ತಾಗುವ ಸೂಫಿ ಗಾಯನ ಅದ್ಭುತವಾಗಿ ಮೂಡಿಬಂತು.

ಪದಾಧಿಕಾರಿಗಳು

ಗೌರವಾಧ್ಯಕ್ಷರು: ಬೊಳವಾರು ಮಹಮ್ಮದ್ ಕುಂಞ
ಅಧ್ಯಕ್ಷರು : ಅಚ್ಯುತ
ಉಪಾಧ್ಯಕ್ಷರು : ಟಿ.ಸುರೇಂದ್ರ ರಾವ್, ವಾಸುದೇವ ಉಚ್ಚಿಲ್, ಬಿ.ಐ.ಈಳಿಗೇರ
ಪ್ರಧಾನ ಕಾರ್ಯದರ್ಶಿ :ಎಸ್.ದೇವೇಂದ್ರ ಗೌಡ
ಸಹ ಕಾರ್ಯದರ್ಶಿಗಳು : ವಿಮಲ ಕೆ.ಎಸ್, ಉದಯ ಗಾಂವ್ಕರ್, ಶಶಿಧರ್ ಜೆ.ಸಿ
ಖಜಾಂಚಿ : ವಸಂತರಾಜ ಎನ್.ಕೆ.
ಸಂಘಟನಾ ಕಾರ್ಯದರ್ಶಿ: ಡಾ.ವಿಠ್ಠಲ ಭಂಡಾರಿ

ಶುಭಕೋರಿ ಮಾತನಾಡಿದವರು

ಪಿ.ಯಾದಗಿರಿ-ಪ್ರಜಾ ನಾಟ್ಯ ಮಂಡಳಿ, ಆಂಧ್ರ ಪ್ರದೇಶ
ಬಿ.ರಾಜು -ಎಸ್‌ಎಫ್‌ಐ
ವಿಜಯಕುಮಾರಿ-ಜನವಾದಿ ಮಹಿಳಾ ಸಂಘಟನೆ
ಶೇಖರಪ್ಪ - ಬಿ.ಇ.ಎಂ.ಎಲ್.ಸಿ.ಡಬ್ಲ್ಯುಸಿ

ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

1. ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ರಾಷ್ಟ್ರೀಯ ಪೌರರ ದಾಖಲಾತಿ ವಿರೋಧಿಸಿ ಹೋರಾಟಕ್ಕೆ ಕರೆ
2. ಅಕಾಡಮಿ ಮತ್ತು ಪ್ರಾಧಿಕಾರ ಪುನರ್ ರಚನೆ ಸಮಯದಲ್ಲಿ ನಡೆದಿರುವ ವಿದ್ಯಮಾನಗಳ ಬಗ್ಗೆ ಆತಂಕ ವ್ಯಕ್ತಪಡಿಸಿ
3. ಸರಕಾರಿ ಶಾಲೆಗಳನ್ನು ಉಳಿಸಲು ಮತ್ತು ಗುಣಮಟ್ಟ ಉತ್ತಮ ಪಡೆಸಲು ಅಗ್ರಹ
4. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ವಿರೋಧಿಸಿ
5. ದ್ವೇಷ-ಪ್ರೇರಿತ ಅಪರಾಧಗಳನ್ನು ತಡೆಯಲು ಕಠಿಣ ಕ್ರಮಕ್ಕೆ ಅಗ್ರಹ

ಕಿಚ್ಚಿಲ್ಲದ ಬೇಗೆಯ 'ಕುದಿ ಎಸರು'.........

ಪುಟ 6 ರಿಂದ

ನಾಶವಾಗಿ ಹೋಗಬಹುದಾಗಿದ್ದ ಬದುಕನ್ನು ಅತ್ಯಂತ ಕ್ರಿಯಾಶೀಲವಾಗಿ ಕಟ್ಟಿಕೊಂಡಿದ್ದು ಅವರ ಈ ಜೀವನಯಾನದ ಹಿರಿಮೆ. ರಂಗಭೂಮಿ, ಸಾಹಿತ್ಯ, ಸಿನಿಮಾ, ಪತ್ರಿಕೋದ್ಯಮ ಹೀಗೆ ಹಲವು ರಂಗಗಳಲ್ಲಿ ವಿಸ್ತರಿಸಿಕೊಂಡಿರುವ ವಿಜಯಮ್ಮ ಸ್ವಯಂ ವಿಕಾಸದ ಒಂದು ಮಾದರಿ ನಮಗೆ.

'ಕುದಿ ಎಸರು' ಎಂಬ ಆತ್ಮಕಥಾನಕವನ್ನು ಕಟ್ಟುವಾಗಲೂ ಅವರ ವಿಕಾಸಶೀಲ ಮನಸ್ಸಿನ ಪಕ್ವತೆ ಅನುಭವಕ್ಕೆ ಬರುತ್ತದೆ. ಆದ್ದರಿಂದಲೇ ಅವರಿಗೆ ಬದುಕು ಕಪ್ಪು-ಬಿಳುಪುಗಳಲ್ಲಿ ಮಾತ್ರ ಕಾಣುವುದಿಲ್ಲ. ಸರ್ವಚಟಗಳಿಗೂ ದಾಸನಾಗಿದ್ದ ತಂದೆಯಲ್ಲೂ ಉಜ್ವಲ ಮಾನವೀಯತೆ, ತಾಯಿಯ ಮಮತೆಯನ್ನವರು ಕಾಣುತ್ತಾರೆ. ಗಂಡನ ಕ್ರೌರ್ಯದಲ್ಲೂ ಅವನ ಅಸಹಾಯಕತೆಯನ್ನು ಗುರುತಿಸುತ್ತಾರೆ. ಅಜ್ಞಾನದಿಂದ ಕ್ಷುಲ್ಲಕವಾಗಿ ವರ್ತಿಸುವ ಬಂಧುಗಳನ್ನೂ ಅವರು ಕ್ಷಮಿಸುತ್ತಾರೆ. ಸಿದ್ಧ ನೈತಿಕತೆಗಿಂತ ಮಾನವೀಯ ತುಡಿತಗಳು ಅವರಿಗೆ ಮುಖ್ಯವಾಗುತ್ತವೆ. ತಮ್ಮ ಬದುಕಿನ ದಾರುಣತೆಯನ್ನು ಚಿತ್ರಿಸುತ್ತಲೇ ಆ ಬದುಕಿ ಸಾಂಸ್ಕೃತಿಕ ಸೌಂದರ್ಯವನ್ನು ತೋರಿಸಲು ಅವರು ಮರೆಯುವುದಿಲ್ಲ. ಅಡಿಗೆ, ಉಡುಗೆ, ಹಬ್ಬ, ಹರಿದಿನ ಆಚರಣೆಗಳಲ್ಲಿ ಸಮೃದ್ಧ ಸಾಂಸ್ಕೃತಿಕ ವಿವರಗಳಿವೆ. ಅಂದಿನ ಬೆಂಗಳೂರಿನ ಸಾಂಸ್ಕೃತಿಕ ಲೋಕದ ಚಿತ್ರಗಳಿವೆ. ಸಾಹಿತ್ಯ, ಪತ್ರಿಕೋದ್ಯಮ... ಅಲ್ಲಿನ ಒಳಸುಳಿಗಳು ತೆರೆದುಕೊಳ್ಳುತ್ತವೆ. ಕರ್ನಾಟಕ ಲೇಖಕಿಯರ ಸಂಘದ ಬೆಳವಣಿಗೆ.. ಸ್ತ್ರೀಯರು ಸಾಹಿತ್ಯ ಹಾಗೂ ಕಲಾಕ್ಷೇತ್ರಗಳ ನಾಯಕತ್ವ ವಹಿಸುವಂತಹ ವಾತಾವರಣ ನಿಧಾನವಾಗಿ ವಿಕಾಸವಾಗುತ್ತಿರುವ ವಿವರಗಳೆಲ್ಲ ಅಲ್ಲಿ ಲಭ್ಯವಾಗುತ್ತದೆ. ಮಾಸ್ತಿ, ಕಂಬಾರರಂತಹ ಹಿರಿ ಜೀವಗಳ ಔದಾರ್ಯ, ಕಿರಿಯರ ಬೆಂಬಲಗಳು ಮನತುಂಬುತ್ತವೆ. ತೆಲುಗು-ತಮಿಳು ಭಾಷಿಕ ಪರಿಸರ, ಸಾಮಾಜಿಕ ರಾಜಕೀಯ ಚಿತ್ರಗಳೂ ಅಲ್ಲಲ್ಲಿ ಬೆರೆಯುತ್ತ ಆ ಕಾಲದ ಚರಿತ್ರೆಯನ್ನು ಕಟ್ಟುವಲ್ಲಿ ಒಂದು ಭಾಗವಾಗಿ ಬೆರೆಯುತ್ತವೆ.

ಇನ್ನು 'ಕುದಿ ಎಸರು' ಎಂಬ ಶೀರ್ಷಿಕೆ! ಇದೂ ಕೂಡ ಕುದಿದು ಕುದಿದೇ ಅನ್ನವಾಗಿ ವಿಕಾಸವಾಗಬೇಕಾದ ಸತ್ವವನ್ನು ಹೇಳುತ್ತಿದೆ. ಕುದಿಯುವುದು ನೋವಿನ ಅನುಭವವಾದರೂ ಮನಸ್ಸು-ಪ್ರಜ್ಞೆಗಳ ವಿಕಾಸದಲ್ಲಿ ಕುದಿತದ ಪಾಲೂ ಇದೆಯಲ್ಲ! ಓದಿನ ಕೊನೆಗೊಂದು ಆಹ್! ಎಂಬ ಉದ್ಗಾರ ಹೊಮ್ಮುತ್ತದೆ. ವಿಜಯಮ್ಮನ ಚೈತನ್ಯಕ್ಕೊಂದು ಸಲಾಂ.

ಒಂದು ದಶಕದ ಹಿಂದೆಯೇ ‘ಹವಾಮಾನ ಬದಲಾವಣೆ’ ಎಂಬ ಪದ, ಸಮಸ್ಯೆಯ ತೀವ್ರತೆಯನ್ನು ಸಮರ್ಪಕವಾಗಿ ಸೆರೆಹಿಡಿಯಲಿಲ್ಲ ಎಂಬ ಬಲವಾದ ಟೀಕೆಗಳು ಕೇಳಿ ಬಂದಿದ್ದವು. ಆದರೀಗ, ಹವಾಮಾನ ಬಿಕ್ಕಟ್ಟು ಅಥವಾ ಹವಾಮಾನ ತುರ್ತುಸ್ಥಿತಿ ಎಂದು ಕರೆಯುವ ಮಟ್ಟಕ್ಕೆ ಪರಿಸ್ಥಿತಿ ಬಿಗಡಾಯಿಸಿದೆ ಎಂದು ಹಲವು ಹವಾಮಾನ ತಜ್ಞರ ಅಭಿಪ್ರಾಯವಾಗಿದೆ. ಉತ್ತರ ಧ್ರುವದ ಹಿಮವು ಅಪಾಯಕಾರಿ ಮಟ್ಟದಲ್ಲಿ ಕರಗುತ್ತಿದೆ. ಇದು ಡಬ್ಲ್ಯೂ.ಎಮ್.ಓ ಊಹೆಗಿಂತಲೂ ವೇಗವಾಗಿ ಅದರಲ್ಲೂ, ಸಮುದ್ರದ ಮಟ್ಟದ ಏರಿಕೆಯ ತೀವ್ರತೆಯನ್ನು ಹೆಚ್ಚಿಸುತ್ತದೆ.

ಒಟ್ಟಾರೆ ಯಾಗಿ ಶ್ರೀಮಂತ ರಾಷ್ಟ್ರ ಗಳು ಈ ಸಮಸ್ಯೆ ಗಳಿಗೆ ತಾವೇ ಕಾರಣವೆಂದು ಒಪ್ಪಿಕೊಳ್ಳಬೇಕು. ಪ್ರಮುಖವಾಗಿ ಅಮೆರಿಕಾ ಇಂಗಾಲ ಆಧಾರಿತ ಇಂಧನಗಳ ಬಳಕೆಯನ್ನು ತಗ್ಗಿಸಿ, ವಿಶ್ವ ಸಂಸ್ಥೆಯ ಹಸಿರು ಹವಾಮಾನ ನಿಧಿಗೆ ಹೆಚ್ಚಾಗಿ ಹಣ ವಿನಿಯೋಗಿಸಬೇಕು. ಜೊತೆಗೆ, ಪ್ಯಾರಿಸ್ ಒಪ್ಪಂದದಂತೆ, ಇಂಗಾಲದ ಹೊರಸೂಸುವಿಕೆ ಮೇಲೆ ಹೆಚ್ಚು ತೆರಿಗೆಗಳನ್ನು ಹಾಕಬೇಕು. ಪಳೆಯುಳಿಕೆ ಇಂಧನಗಳಿಗೆ ಲಕ್ಷಾಂತರ ಡಾಲರ್ ಸಬ್ಸಿಡಿಗಳು ಕೊನೆಗೊಳ್ಳಬೇಕು. ಕಲ್ಲಿದ್ದಲಿನಿಂದ ಉತ್ಪಾದಿಸಲ್ಪಡುವ ವಿದ್ಯುತ್ ಕೇಂದ್ರ ಗಳ ನಿರ್ಮಾಣ ಗಳು 2020 ರ ವೇಳೆಗೆ ಕೊನೆಗೊಳ್ಳಬೇಕು.

ಸ್ಪೇನ್‌ನಲ್ಲಿ ಸಿಒಪಿ 25

ಹವಾಮಾನ ಬದಲಾವಣೆ ಸಮ್ಮೇಳನ ಏಕೆ ವಿಫಲ?

ನಾಗರಾಜ ನಂಜುಂಡಯ್ಯ

ಈ ಮೂರು ಪ್ರಸ್ತಾವನೆಗಳನ್ನು ನಿಯಮ ಬದ್ಧವಾಗಿ ಜಾರಿಗೊಳಿಸಲು ರಾಜಕೀಯ ದೃಡತೆ ಇರಬೇಕು. ಆದರೆ, ಅಭಿವೃದ್ಧಿ ಹೊಂದಿರುವ ಶ್ರೀಮಂತ ದೇಶಗಳು ಈ ಎಲ್ಲಾ ಪ್ರಸ್ತಾವಗಳನ್ನು ನಿರಾಕರಿಸುತ್ತವೆ.

ಕಳೆದ ವಾರ (ಡಿಸೆಂಬರ್ 3–13) ಹತ್ತು ದಿನಗಳ ಕಾಲ, ಸಿಒಪಿ 25 (ಕಾನ್ಫರೆನ್ಸ್ ಆಫ್ ಪಾರ್ಟೀಸ್ 25) ಹವಾಮಾನ ಬದಲಾವಣೆಗೆ ಸಂಬಂಧಿಸಿದ ಸಮಾವೇಶ ಸ್ಪೇನಿನ ರಾಜಧಾನಿ ಮ್ಯಾಡ್ರಿಡ್ ನಲ್ಲಿ ನಡೆಯಿತು. ಹವಾಮಾನ ಬದಲಾವಣೆ ಕುರಿತಂತೆ ಯಾವುದೇ ಮೂಲ ಉದ್ದೇಶಗಳು ಕೈಗೂಡಲಿಲ್ಲದೆ ಶೃಂಗಸಭೆ ವಿಫಲವಾಗಿದೆ. ಈ ಸಮಾವೇಶ ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಚೌಕಟ್ಟು ಅಡಿಯಲ್ಲಿ ನಡೆಯುವ ವಾರ್ಷಿಕ ಶೃಂಗ ಸಭೆ.

ಈ ಸಮ್ಮೇಳನವು ಮೊದಲಿಗೆ ನವೆಂಬರ್ ಅಂತ್ಯದಲ್ಲಿ ಬ್ರೆಜಿಲ್ ನಲ್ಲಿ ನಡೆಯಬೇಕಿತ್ತು. ಆದರೆ ಹೊಸದಾಗಿ ಚುನಾಯಿತರಾದ ಬಲಪಂಥೀಯ ಮತ್ತು ಹವಾಮಾನ ಸಂದೇಹವಾದಿ ಅದ್ಯಕ್ಷ ಜೈರ್ ಬೋಲ್ಸನಾರೊ ಅವರು ಅದನ್ನು ಆಯೋಜಿಸಲು ಹಿಂದೆ ಸರಿದರು. ಅಮೇಜಾನ್ ಕಾಡಿಗೆ ಬೆಂಕಿ ಹಚ್ಚಿಸಿದ ಆರೋಪ ಅವರ ಹೆಗಲಿಗೆ ಏರಿತ್ತು. ಆ ನಂತರ ಚಿಲಿ ದೇಶವು ವಾರ್ಷಿಕ ಶೃಂಗ ಸಭೆಯನ್ನು ನಡೆಸಲು ಸ್ವಯಂ ಪ್ರೇರಣೆಯಿಂದ ಮುಂದೆ ಬಂದಿತ್ತು. ಆದರೆ ಅಲ್ಲಿ ಹಿಂಸಾತ್ಮಕ ಬೀದಿ ಪ್ರತಿಭಟನೆ ಗಳು ಭುಗಿಲ್ಲೆದ್ದ ಕಾರಣ ಅಲ್ಲಿನ ಅದ್ಯಕ್ಷ ಸೆಬಾಸ್ಟಿಯನ್ ಪಿನೆರಾ ಕೂಡಾ ಹಿಂದೆ ಸರಿದರು. ಆ ನಂತರ ಸ್ಪೇನ್ ಆಯೋಜಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿತು.

ಹವಾಮಾನ ಬದಲಾವಣೆಯ ಅಪಾಯ ಮತ್ತು ಬೆದರಿಕೆಗಳು ಹೆಚ್ಚುತ್ತಿರುವ ಈ ಸಮಯದಲ್ಲೂ, ಮ್ಯಾಡ್ರಿಡ್ ನ ಈ ಶೃಂಗಸಭೆಯು ಹವಾಮಾನ ಬದಲಾವಣೆ ಎದುರಿಸುತ್ತಿರುವ ಸಮಸ್ಯೆಗಳನ್ನು ಗಂಭೀರವಾಗಿ ಚರ್ಚಿಸಲು ವಿಫಲ ವಾಗಿದೆ. ಇದರ ಹೊರತಾಗಿಯೂ, ವಿಶ್ವದಾದ್ಯಂತ ಅನೇಕ ಬಲಪಂಥೀಯ ಮತ್ತು ಸಂಪ್ರದಾಯವಾದಿ ಸರ್ಕಾರಗಳು, ಕಾರ್ಬನ್ ಡೈಆಕ್ಸೈಡ್ (CO_2) ಹೊರಸೂಸುವಿಕೆ ಪ್ರಮಾಣವನ್ನು ಕಡಿತಗೊಳಿಸುವ ಬದ್ಧತೆಗಳಿಗೆ ಬೆನ್ನು ತಿರುಗಿಸಿರುವುದು ವಿಷಾದಕರ ಬೆಳವಣಿಗೆಯಾಗಿದೆ. ಅಮೇರಿಕಾದ ಅಧ್ಯಕ್ಷ ಟ್ರಂಪ್ ಪ್ಯಾರಿಸ್ ಒಪ್ಪಂದದಿಂದ ಹಿಂಪಡೆದುಕೊಳ್ಳುವಿಕೆಯ ನಡೆಯಿಂದ ಇವರಿಗೆ ಕುಮ್ಮಕ್ಕು ಸಿಕ್ಕಿದಂತಾಗಿದೆ.

ಹವಾಮಾನ ತುರ್ತು ಸ್ಥಿತಿ

ಒಂದು ದಶಕದ ಹಿಂದೆಯೇ ‘ಹವಾಮಾನ ಬದಲಾವಣೆ’ ಎಂಬ ಪದ, ಸಮಸ್ಯೆಯ ತೀವ್ರತೆಯನ್ನು ಸಮರ್ಪಕವಾಗಿ ಸೆರೆಹಿಡಿಯಲಿಲ್ಲ ಎಂಬ ಬಲವಾದ ಟೀಕೆಗಳು ಕೇಳಿ ಬಂದಿದ್ದವು. ಆದರೀಗ, ಹವಾಮಾನ ಬಿಕ್ಕಟ್ಟು ಅಥವಾ ಹವಾಮಾನ ತುರ್ತುಸ್ಥಿತಿ ಎಂದು ಕರೆಯುವ ಮಟ್ಟಕ್ಕೆ ಪರಿಸ್ಥಿತಿ ಬಿಗಡಾಯಿಸಿದೆ ಎಂದು ಹಲವು ಹವಾಮಾನ ತಜ್ಞರ ಅಭಿಪ್ರಾಯ ವಾಗಿದೆ. ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯೂ.ಎಮ್.ಓ.) ಪ್ರಕಾರ, ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್ ಸಾಂದ್ರತೆಯು 408 ಪಿಪಿಎಮ್ ತಲುಪಿದೆ ಮತ್ತು ದಿನ ನಿತ್ಯ ಹೆಚ್ಚುತ್ತಲೇ ಇದೆ (ಪಿಪಿಎಮ್ – ದಶಲಕ್ಷಕ್ಕೆ ಒಂದು ಭಾಗದಂತೆ) ಎಂದು ಎಚ್ಚರಿಕೆ ನೀಡಿದೆ. 400 ಪಿಪಿಎಮ್ ಹವಾಮಾನವನ್ನು ಬದಲಾವಣೆಯನ್ನು



ಹಿಂತಿರುಗಿಸುವುದು ಅಸಾಧ್ಯವಾಗುವ ಮಟ್ಟ ಎಂದು ಪರಿಗಣಿಸಲಾಗಿತ್ತು. ಆದರೆ, ಇದೀಗ, 408 ಪಿಪಿಎಮ್ ದಾಟಿರುವುದು ಅಪಾಯದ ಅಂಚು ಎನ್ನಲಾಗಿದೆ. ಇಂತಹ ಹವಾಮಾನ ಬದಲಾವಣೆಯನ್ನು 3 ರಿಂದ 4 ದಶಲಕ್ಷ ವರ್ಷಗಳ ಹಿಂದೆ ಇಂತಹ ಕಾರ್ಬನ್ ಡೈಆಕ್ಸೈಡ್ ಸಾಂದ್ರತೆ ಯನ್ನು ಕಂಡಿತ್ತು. ಆಗ, ತಾಪಮಾನವು ಇಂದಿನ ಮಟ್ಟಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿತ್ತು. ಇದರಂತೆಯೇ ಸಮುದ್ರ ಮಟ್ಟವು 10–20 ಮೀಟರ್ ಹೆಚ್ಚಾಗಿರುವುದನ್ನು ಇದೀಗ ಕಾಣಬಹುದಾಗಿದೆ ಎಂದು ಡಬ್ಲ್ಯೂ.ಎಮ್.ಓ ಹೇಳಿದೆ. ತಾಪಮಾನ ಏರಿಕೆ ಅಡೆತಡೆಯಿಲ್ಲದೆ ಮುಂದುವರಿಯುತ್ತಿದೆ ಮತ್ತು ಪ್ರತಿ ವರ್ಷವು, ಹಿಂದಿನ ವರ್ಷದ ಏರಿಕೆಯ ಮಟ್ಟವನ್ನು ಹಿಂದಕ್ಕೆ ಹಾಕುತ್ತಿದೆ. ಕಳೆದ ಐದು ವರ್ಷಗಳು, ಇದುವರೆಗಿನ ಅತ್ಯಂತ ಬಿಸಿಯಾದ ವರ್ಷಗಳಾಗಿವೆ ಎಂದು ಗುರುತಿಸಲ್ಪಟ್ಟಿದೆ.

ಜಗತ್ತಿನ ವಿವಿಧ ಭಾಗಗಳಲ್ಲಿ ದೀರ್ಘಕಾಲದ ಶಾಖದ ಅಲೆಗಳು ಮತ್ತು ಶುಷ್ಕ ಋತುಗಳು ಅಥವಾ ಬರ ಮತ್ತು ಪ್ರವಾಹ ಗಳು ಹೆಚ್ಚಳವಾಗಿರುವುದನ್ನು ಈ ಹಿನ್ನಲೆಯಲ್ಲಿಯೇ ಗಮನಿಸಬಹುದಾಗಿದೆ. ಉಷ್ಣವಲಯ ಮತ್ತು ಇತರೆ ಚಂಡಮಾರುತ ಗಳ ತೀವ್ರತೆ ಮತ್ತು ಆವರ್ತನ ಎರಡರಲ್ಲೂ ಹೆಚ್ಚಳ ಉಂಟಾಗಿರುವುದನ್ನು ಕಾಣಬಹುದಾಗಿದೆ. ಕಳೆದ ಎರಡು ವರ್ಷಗಳಲ್ಲಿ, ಕೇರಳ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಕಂಡು, ಅನುಭವಿಸಿದಂತೆ, ವಿಪರೀತ ಮಳೆ, ಪ್ರವಾಹದ ಘಟನೆಗಳು, ಉಷ್ಣತೆ ಹೆಚ್ಚಳಕ್ಕೆ ಉದಾಹರಣೆಗಳಾಗಿವೆ. ಹವಾಮಾನ ಬದಲಾವಣೆಯ ವೈಪರೀತ್ಯಗಳು ಅಪಾಯದ ಮುನ್ಸೂಚನೆ ಎಂದು ಪರಿಗಣಿಸಲಾಗಿದೆ.

ಉತ್ತರ ಧ್ರುವದ ಹಿಮವು ಅಪಾಯಕಾರಿ ಮಟ್ಟದಲ್ಲಿ ಕರಗುತ್ತಿದೆ. ಇದು ಡಬ್ಲ್ಯೂ.ಎಮ್.ಓ ಊಹೆಗಿಂತಲೂ ವೇಗವಾಗಿ ಅದರಲ್ಲೂ, ಸಮುದ್ರದ ಮಟ್ಟದ ಏರಿಕೆಯ ತೀವ್ರತೆಯನ್ನು ಹೆಚ್ಚಿಸುತ್ತದೆ. ಸಾಗರ ಪ್ರವಾಹಗಳು ಮತ್ತಷ್ಟು ಹೆಚ್ಚಾಗಿ ಹವಾಮಾನ ಬದಲಾವಣೆಯನ್ನು ಬಾರಿ ಅಪಾಯದತ್ತ ಕೊಂಡೊಯ್ಯುತ್ತದೆ. ಇದರಿಂದ, ಶಾಶ್ವತ ಮಂಜುಗಡ್ಡೆಯ ಅಡಿಯಲ್ಲಿ ಸಿಕ್ಕಿಬಿದ್ದ ಬೃಹತ್ ಪ್ರಮಾಣದ ಇಂಗಾಲದ ಡೈಆಕ್ಸೈಡ್ ಮತ್ತು ಮಿಥೇನ್ ಅನಿಲಗಳು ಹಠಾತ್ತನೆ ಬಿ ಡ ುಗ ಡೆ ಯ ಾಗ ಲು ಕಾರಣವಾಗಬಹುದು. ಇದು ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯನ್ನು ತೀವ್ರ ಅಪಾಯಕಾರಿ ಮಟ್ಟಕ್ಕೇರಿಸುತ್ತದೆ ಎಂದು ಡಬ್ಲ್ಯೂ ಎಮ್ ಓ, ಎಚ್ಚರಿಸಿದೆ.



ಉತ್ತರ ಧ್ರುವದಲ್ಲಿನ ಬದಲಾವಣೆಗಳು ಎಷ್ಟು ವೇಗವಾಗಿ ಮತ್ತು ವ್ಯಾಪಕವಾಗಿ ನಡೆಯುತ್ತಿವೆ ಎಂದರೆ, ಯುಎಸ್, ಕೆನಡಾ, ರಷ್ಯಾ ಮತ್ತು ಚೀನಾ ದೇಶಗಳು ಈಗಾಗಲೇ ಜಾಗಕ್ಕಾಗಿ ಹುಡುಕಲಾರಂಭಿಸಿವೆ. ತೈಲ, ಅನಿಲ ಕ್ಕಾಗಿ ಶ್ರೀಘ್ರದಲ್ಲಿ ಸಂಚರಿಸಬಹುದಾದ, ಆರ್ಕ್ಟಿಕ್ ಪ್ರದೇಶದ ದೊಡ್ಡ ಪ್ರಮಾಣದ ಪರಿಶೋಧನೆಗಾಗಿ ಪ್ರಾಥಮಿಕ ಕ್ರಮಗಳನ್ನು ಕೈಗೊಳ್ಳುತ್ತಿವೆ. ಹಾಗೆಯೇ, ಇದು ಖನಿಜ ಹೊರ ತೆಗೆಯುವ ಅನಿರೀಕ್ಷಿತ ಪರಿಣಾಮಗಳೊಂದಿಗೆ, ಶೇ 90 ರಷ್ಟು ಇಂಗಾಲದ ಡೈಆಕ್ಸೈಡ್ ಅನ್ನು ಸಾಗರ ನೀರು ಹೀರಿಕೊಳ್ಳುವಂತೆ ಮಾಡುತ್ತದೆ. ಇದರಿಂದಾಗಿ ಸಾಗರ ನೀರು ಗಂಭೀರ ಸ್ವರೂಪದಲ್ಲಿ ಅಪಾಯಕಾರಿಯಾಗಿ ಬೆಚ್ಚಗಾಗುತ್ತದೆ ಮತ್ತು ಆಮ್ಲೀಯ ವಾಗುತ್ತದೆ. ಇದು ತೀವ್ರವಾದ ಪ್ರವಾಹಕ್ಕೆ ಕಾರಣವಾಗುತ್ತದೆ.

ಈ ಮಧ್ಯೆ ವಿಶ್ವ ಸಂಸ್ಥೆಯ ಮಹಾಕಾರ್ಯದರ್ಶಿ ಆಂಟೋನಿಯೋ ಗುಟೆರೆಸ್ ಶೃಂಗಸಭೆಯ ಮುನ್ನಾ ದಿನದಂದು, ಹವಾಮಾನ ದುರಂತವು ಇನ್ನು ಮುಂದೆ ದಿಗಂತದಲ್ಲೇ ಇರುವುದಿಲ್ಲ, ಬದಲಿಗೆ, ನಮಗೆ ಇದು ಗೋಚರವಾಗುತ್ತಿದೆ. ಅದು ನಮ್ಮೆಲ್ಲರಿಗೂ ಅಪಾರ ನೋವನ್ನು ಉಂಟುಮಾಡುತ್ತದೆ. ಆದ್ದರಿಂದ, ವಿಶ್ವದಲ್ಲಿನ ಸರ್ಕಾರಗಳು ಮತ್ತು ಸಂಸ್ಥೆಗಳು ಜವಾಬ್ದಾರಿಯುತವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದಿದ್ದಾರೆ.

ಹೊರಸೂಸುವಿಕೆ ಅಂತರ

ಪ್ಯಾರಿಸ್ ಒಪ್ಪಂದ (ಪಿಎ), ಜಾಗತಿಕ ತಾಪಮಾನದ ಏರಿಕೆಯ ಗುರಿಯನ್ನು ಸರಾಸರಿ 2 ಡಿಗ್ರಿ ಸೆಲ್ಸಿಯಸ್ ಗೆ ಸೀಮಿತಗೊಳಿಸಲು ನಿರ್ಣಯಿಸಿತ್ತು. ಆದಾಗ್ಯೂ, 1.5 ಡಿಗ್ರಿ ಸೆಲ್ಸಿಯಸ್ ಗೆ ಕಡಿತಗೊಳಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿತ್ತು ಕೂಡಾ. ಏಕೆಂದರೆ, 1.5 ಡಿಗ್ರಿ ಸೆಲ್ಸಿಯಸ್ ಹಂತವನ್ನು ಮೀರಿದರೆ ಸಣ್ಣ ದ್ವೀಪದೇಶಗಳ ಅಸ್ತಿತ್ವಕ್ಕೆ ಬೆದರಿಕೆ ಉಂಟಾಗುವ ಸಂಭವವಿದೆ. ಅಭಿವೃದ್ಧಿ ಹೊಂದದ ದೇಶಗಳ (ಎಲ್.ಡಿ.ಸಿ) ಒತ್ತಾಯದ ಮೇರೆಗೆ 2 ಡಿಗ್ರಿ ಸೆಲ್ಸಿಯಸ್ ಗುರಿಯನ್ನು ಅಳವಡಿಸಲಾಯಿತು. 1.5 ಡಿಗ್ರಿ ಸೆಲ್ಸಿಯಸ್ ಗುರಿ ವಾಸ್ತವವಾಗಿದೆಯೇ ಎಂದು ಪ್ರಶ್ನಿಸಬೇಕಾಗಿದೆ. ಭಾರತೀಯ ವಿಜ್ಞಾನಿಗಳ ಒಂದು ಗುಂಪು 1.5 ಡಿಗ್ರಿ ಸೆಲ್ಸಿಯಸ್ ಈಗಾಗಲೇ ಹಿಂದೆ ಬಿದ್ದಿದೆ ಅಂದರೆ, ಈಗಾಗಲೇ ಆ ಹಂತವನ್ನು ಮೀರಿದ್ದಾಗಿದೆ ಎನ್ನುತ್ತದೆ. 1.5 ಡಿಗ್ರಿ ಸೆಲ್ಸಿಯಸ್ ವಾಸ್ತವವಾಗಿ ಪ್ರಸ್ತುತ ಜಾಗತಿಕ ಗುರಿಯಾಗಿದೆ. ಆದರೆ, ಇಂದು 2 ಡಿಗ್ರಿ ಸೆಲ್ಸಿಯಸ್ ಗುರಿಯನ್ನು ಸಹಾ ಪೂರೈಸಲು, ಬಹಳ ಕಠಿಣ ಹೋರಾಟ ನಡೆಸಬೇಕಾಗಿರುವುದು ನೋವಿನ ಸಂಗತಿ ಎಂದು ಹವಾಮಾನ ತಜ್ಞರ ವಿಶ್ಲೇಷಣೆಯಾಗಿದೆ.

ವಿಶ್ವಸಂಸ್ಥೆ ಪರಿಸರ ರಕ್ಷಣೆ ಕಾರ್ಯಕ್ರಮ (ಯು.ಎನ್.ಇ.ಪಿ), ಈ ದಿನಗಳಲ್ಲಿ ಅದರ ಪ್ರಮಾಣಿತ ಅಭ್ಯಾಸದ ಪ್ರಕಾರ, ಸಿಒಪಿ 25 ಗೆ ಸ್ವಲ್ಪ ಮೊದಲು ಅದರ ಹೊರಸೂಸುವಿಕೆ ಅಂತರದ ವರದಿಯುನ್ನು (ಇಜಿಆರ್) ಬಿಡುಗಡೆ ಮಾಡಿತ್ತು. ಪ್ರಸ್ತುತ ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಮಟ್ಟ 230 ಡಿಗ್ರಿ ಸೆಲ್ಸಿಯಸ್. 1.5 ಡಿಗ್ರಿ ಸೆಲ್ಸಿಯಸ್ ಗುರಿಯನ್ನು ಸಾಧಿಸಿಲು 2030, 2050 ಮತ್ತು 2100 ರ ವರೆಗೂ ಬೇಕಾಗಬಹುದು ಎಂದು ವಿಶ್ಲೇಷಣೆ ಮಾಡಿದೆ. ಏಕೆಂದರೆ, ಪ್ರಸ್ತುತ ಇಂಗಾಲದ ಡೈಆಕ್ಸೈಡ್ ನ ಹೊರಸೂಸುವಿಕೆ ಮಟ್ಟಗಳು ಮತ್ತು ಯೋಜಿತ ಹೊರಸೂಸುವಿಕೆಯ ನಡುವಿನ ಅಂತರ ಅಗಾಧವಾಗಿದೆ ಎಂದು ಇಜಿಆರ್ ಆತಂಕ ವ್ಯಕ್ತಪಡಿಸಿದೆ.

ಅದೇನೇ ಇದ್ದರೂ, ಎಲ್ಲಾ ಅಗತ್ಯ ತಂತ್ರಜ್ಞಾನಗಳನ್ನು ಮತ್ತು ಆರ್ಥಿಕ ಸಾಮರ್ಥ್ಯವನ್ನು ಹೊಂದಿರುವ ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಹೊರಸೂಸುವಿಕೆ ಯನ್ನು 1990 ರ ಮಟ್ಟಕ್ಕಿಂತ ತೀವ್ರವಾಗಿ ಕಡಿತಗೊಳಿಸುವುದನ್ನು ಕಡಿಮೆ ಮಾಡುತ್ತಿವೆ ಎಂದು ವ್ಯಾಪಕವಾಗಿ ಒಪ್ಪಿಕೊಂಡಿವೆ. ಇದಕ್ಕೆ ಕಾರಣ, ಅಮೆರಿಕಾವು ಪ್ಯಾರಿಸ್ ಒಪ್ಪಂದ ದಿಂದ ಹೊರಬಂದು, ಸಂಪೂರ್ಣವಾಗಿ ಹೊರಸೂಸುವಿಕೆ ಯನ್ನು ನಿರಾಕರಿಸಿದ್ದು. ಮಾತ್ರವಲ್ಲ, ಟ್ರಂಪ್ ಕಲ್ಲಿದ್ದಲು ಆಧಾರಿತ ವಿದ್ಯುತ್ ಮತ್ತು ಪಳೆಯುಳಿಕೆ–ಇಂಧನ ಬಳಕೆಯನ್ನು, ಮತ್ತು ವಿಶೇಷವಾದ ಶೇಲ್ ತೈಲಾ ಮತ್ತು ನೈಸರ್ಗಿಕ ಅನಿಲವನ್ನು ವಿಸ್ತರಿಸುವಲ್ಲಿ ಸುತ್ತಿಗೆ ಮತ್ತು ಇಕ್ಕುಳ ಬಳಕೆಗೆ ಒತ್ತು ಕೊಟ್ಟಿದ್ದು, ಹವಾಮಾನ ಬದಲಾವಣೆ ಒಪ್ಪಂದದ ಗುರಿ ತಲುಪಲು ಹಿನ್ನಡೆ ಉಂಟು ಮಾಡಿದೆ.

ಆದಾಗ್ಯೂ, ಯುಎಸ್ ನ ರಾಷ್ಟ್ರೀಯ ಸರ್ಕಾರದ ನಕಾರಾತ್ಮಕ ಧೋರಣೆಯ ಹೊರತಾಗಿಯೂ, ಸಂಸತ್ತಿನ ಕೆಳಸದನದ ಅನೇಕ ಪ್ರತಿನಿಧಿಗಳು, ರಾಜ್ಯ ಗವರ್ನರ್ ಗಳು ಮತ್ತು ಪ್ರಮುಖ ನಗರಗಳ ಮೇಯರ್ ಗಳು, ಸಾಕಷ್ಟು ಅಸಾಧಾರಣ ಕಾಳಜಿ ಮತ್ತು ಬದ್ಧತೆ ಹೊಂದಿದ್ದು, ಹೊರಸೂಸುವಿಕೆ ಯನ್ನು ಕಡಿತ ಮಾಡುವ ಸಲುವಾಗಿ, ಮ್ಯಾಡ್ರಿಡ್ ಶೃಂಗಸಭೆ ಯಲ್ಲಿ ಭಾಗವಹಿಸಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಯುರೋಪಿಯನ್ ಒಕ್ಕೂಟ (ಇಯು), ಮತ್ತು ಇನ್ನಿತರೆ, 66 ಅಭಿವೃದ್ಧಿ ಹೊಂದಿದ ದೇಶಗಳು 2050 ರ ವೇಳೆಗೆ "ಶೂನ್ಯ ನಿವ್ವಳ ಹೊರಸೂಸುವಿಕೆ" ಸಾಧಿಸಲು ಬದ್ದವಾಗಿವೆ ಎಂದು ಘೋಷಿಸಿವೆ. ಆದರೆ, ಇದು ಸುಲಭವಲ್ಲವೆಂದು ಅವರಿಗೂ ತಿಳಿದಿದೆ.

ಒಟ್ಟಾರೆ ಯಾಗಿ ಶ್ರೀಮಂತ ರಾಷ್ಟ್ರ ಗಳು ಈ ಸಮಸ್ಯೆ ಗಳಿಗೆ ತಾವೇ ಕಾರಣವೆಂದು ಒಪ್ಪಿಕೊಳ್ಳಬೇಕು. ಪ್ರಮುಖವಾಗಿ ಅಮೆರಿಕಾ ಇಂಗಾಲ ಆಧಾರಿತ ಇಂಧನಗಳ ಬಳಕೆಯನ್ನು ತಗ್ಗಿಸಿ, ವಿಶ್ವ ಸಂಸ್ಥೆಯ ಹಸಿರು ಹವಾಮಾನ ನಿಧಿಗೆ ಹೆಚ್ಚಾಗಿ ಹಣ ವಿನಿಯೋಗಿಸಬೇಕು. ಜೊತೆಗೆ, ಪ್ಯಾರಿಸ್ ಒಪ್ಪಂದದಂತೆ, ಇಂಗಾಲದ ಹೊರಸೂಸುವಿಕೆ ಮೇಲೆ ಹೆಚ್ಚು ತೆರಿಗೆಗಳನ್ನು ಹಾಕಬೇಕು. ಪಳೆಯುಳಿಕೆ ಇಂಧನಗಳಿಗೆ ಲಕ್ಷಾಂತರ ಡಾಲರ್ ಸಬ್ಸಿಡಿಗಳು ಕೊನೆಗೊಳ್ಳಬೇಕು. ಕಲ್ಲಿದ್ದಲಿನಿಂದ ಉತ್ಪಾದಿಸಲ್ಪಡುವ ವಿದ್ಯುತ್ ಕೇಂದ್ರ ಗಳ ನಿರ್ಮಾಣ ಗಳು 2020 ರ ವೇಳೆಗೆ ಕೊನೆಗೊಳ್ಳಬೇಕು.

ಈ ಮೂರು ಪ್ರಸ್ತಾವನೆಗಳನ್ನು ನಿಯಮ ಬದ್ಧವಾಗಿ ಜಾರಿಗೊಳಿಸಲು ರಾಜಕೀಯ ದೃಡತೆ ಇರಬೇಕು. ಆದರೆ, ಅಭಿವೃದ್ಧಿ ಹೊಂದಿರುವ ಶ್ರೀಮಂತ ದೇಶಗಳು ಈ ಎಲ್ಲಾ ಪ್ರಸ್ತಾವಗಳನ್ನು ನಿರಾಕರಿಸುತ್ತವೆ. ಹಾಗಾಗಿ, ವಿಶ್ವಸಂಸ್ಥೆಯ ಹಸಿರು ಹವಾಮಾನ ಒಪ್ಪಂದ ಜಾರಿ ಸುಲಭವಲ್ಲ.

JANASHAKTHI KANNADA VARA PATRIKE DECEMBER 23-29, 2019 Price: Rs. 10/- Date of Publication: 20 DECEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ಕೋಲಾರದಲ್ಲಿ ಸಮುದಾಯ 7ನೇ ರಾಜ್ಯ ಸಮ್ಮೇಳನ

'ಮೌಲ್ಯಗಳ ಮರು ಸ್ಥಾಪನೆಗೆ ಹೋರಾಟ ನಡೆಸಬೇಕು': ನ್ಯಾ. ದಾಸ್

ವಸಂತರಾಜ ಎನ್.ಕೆ.

ಸಂವಿಧಾನದ ಉಲ್ಲಂಘನೆಯನ್ನು ತಡೆಯುವಲ್ಲಿ ಆಶಾಕಿರಣವಾಗಿದ್ದ ನ್ಯಾಯಾಂಗ ವ್ಯವಸ್ಥೆ ಬಗೆಗಿನ ವಿಶ್ವಾಸ ಹೋಗುತ್ತಿದೆ. ಇತ್ತೀಚಿನ – ಅಯೋಧ್ಯಾ ವಿವಾದ, ಕಾಶ್ಮೀರ, ಕರ್ನಾಟಕ ಶಾಸಕರ ಅನರ್ಹತೆ ಮುಂತಾದ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟಿನ ತೀರ್ಪುಗಳು ಅಸಂವಿಧಾನಿಕವಾಗುತ್ತಿವೆ ಮತ್ತು ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಹೀಗೆಂದವರು ಕರ್ನಾಟಕ ಹೈಕೋರ್ಟಿನ ವಿಶ್ರಾಂತ ನ್ಯಾಯಮೂರ್ತಿ ನಾಗಮೋಹನದಾಸ್. ಕೋಲಾರದ ಟಿ.ಚೆನ್ನಯ್ಯ ರಂಗಮಂದಿರದಲ್ಲಿ ಡಿಸೆಂಬರ್ 14–15ರಂದು ನಡೆದ ಸಮುದಾಯ ಕರ್ನಾಟಕ ಸಂಘಟನೆಯ 7ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

'ದೇಶದಲ್ಲಿ ಆರ್ಥಿಕ ದಿವಾಳಿತನದ ಜತೆಗೆ ನೈತಿಕ ಮತ್ತು ಸಾಂಸ್ಕೃತಿಕ ದಿವಾಳಿತನ ತಾಂಡವವಾಡುತ್ತಿದೆ. ದೇಶದಲ್ಲಿ ಬಹುಮುಖಿ ಸಂಸ್ಕೃತಿ ಹಾಳಾಗುತ್ತಿದ್ದು, ಏಕಮುಖಿ ಸಂಸ್ಕೃತಿ ಬೆಳೆಸುವ ಷಡ್ಯಂತ್ರ ನಡೆದಿದೆ. ರಾಷ್ಟ್ರದ ಒಟ್ಟಾರೆ ಆರ್ಥಿಕ ಸಂಪತ್ತು ಕೇವಲ ಶೇ 10ರಷ್ಟು ಮಂದಿಯ ಕೈ ಸೇರುತ್ತಿದೆ. ಶೇ 90ರಷ್ಟು ಜನ ಕೇವಲ 10ರಷ್ಟು ಸಂಪತ್ತನ್ನು ಅನುಭವಿಸುತ್ತಿದ್ದಾರೆ. ದಿನೇದಿನೇ ಅಸಮಾನತೆ ಹೆಚ್ಚುತ್ತಿದೆ. ರೈತರು, ಮಹಿಳೆಯರು, ಕಾರ್ಮಿಕರಲ್ಲಿ ಅತೃಪ್ತಿ ತಾಂಡವಾಡುತ್ತಿದೆ. ಅಸಮಾನತೆ, ಅತೃಪ್ತಿ ಇರುವವರೆಗೂ ಉದ್ಯೋಗ, ಅನ್ನಕ್ಕಾಗಿ ಹೋರಾಟ ನಡೆಯುತ್ತಲೇ ಇರುತ್ತದೆ. ಜತೆಗೆ ಹಿಂಸೆಯ ಕರಾಳತೆಯೂ ಇರುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಆರ್ಥಿಕ ದಿವಾಳಿತನದಿಂದ ಕಾರ್ಖಾನೆಗಳಲ್ಲಿ ಸಮಸ್ಯೆಗಳು ಎದುರಾಗಿ ಅವುಗಳನ್ನು ಮುಚ್ಚಲಾಗುತ್ತಿದೆ. ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ವಿದ್ಯಾರ್ಥಿ ಚಳವಳಿ ನಿಂತಿದೆ. ಅಸಮಾನತೆಯ ಭಾರತ ಕಟ್ಟುತ್ತಿರುವುದೇ ದೇಶದಲ್ಲಿ ಹಿಂಸೆ, ಕ್ರೌರ್ಯ, ಅತ್ಯಾಚಾರ ಹೆಚ್ಚಳಕ್ಕೆ ಪ್ರಮುಖ ಕಾರಣ' ಎಂದು ಹೇಳಿದರು.

'ಶ್ರೀಮಂತಿಕೆ ದೇಶದ ಎಲ್ಲರಿಗೂ ಸಮನಾಗಿ ಹಂಚಿಕೆಯಾಗಿಲ್ಲ. ನ್ಯಾಯಾಂಗ ವ್ಯವಸ್ಥೆ ಬಗೆಗಿನ ನಂಬಿಕೆ ಹಾಳು ಮಾಡುತ್ತಿದ್ದೇವೆ. ತೀರ್ಪುಗಳು ಅಸಂವಿಧಾನಿಕವಾಗುತ್ತಿವೆ ಮತ್ತು ಪ್ರಜಾಪ್ರಭುತ್ವ ವಿರೋಧಿಯಾಗಿವೆ. ಇಂತಹ ಸಂದರ್ಭದಲ್ಲಿ ಸೈದ್ಧಾಂತಿಕ ಸಂಘರ್ಷದಿಂದಲೇ ಬದಲಾವಣೆ ಸಾಧ್ಯ' ಎಂದು ಸಲಹೆ ನೀಡಿದರು.

'ಆಹಾರ ಕೊರತೆಯಿಂದ ನರಳುತ್ತಿದ್ದ ದೇಶವನ್ನು ಆಹಾರ ಸ್ವಾವಲಂಬಿ ರಾಷ್ಟ್ರವಾಗಿ ಮಾಡಿದ ರೈತಾಪಿ ವರ್ಗ ಈಗ ಆರ್ಥಿಕವಾಗಿ ದಿವಾಳಿಯಾಗಿದೆ. ಯುವಕರು ನಗರ ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಭೀಕರ ಕೃಷಿ ಬಿಕ್ಕಟ್ಟು ಸೃಷ್ಟಿಯಾಗಿದ್ದರೂ ರೈತರು ಧ್ವನಿ ಎತ್ತುತ್ತಿಲ್ಲ. ರೈತರನ್ನು ನಿದ್ದೆಯಿಂದ ಎಚ್ಚರಗೊಳಿಸಬೇಕು, ಅವರಲ್ಲಿ ಎಚ್ಚರ ಮೂಡಿಸಬೇಕು. ದೇಶದಲ್ಲಿ ನೈತಿಕ ಮೌಲ್ಯಗಳ ಅಧಃಪತನವಾಗುತ್ತಿದೆ. ಮೌಲ್ಯಗಳ ಮರು ಸ್ಥಾಪನೆಗೆ ಸಮುದಾಯ ಸೈದ್ಧಾಂತಿಕ ಹೋರಾಟ ನಡೆಸಬೇಕ."' ಎಂದು ಕಿವಿಮಾತು ಹೇಳಿದರು.



'ನಾನು 4 ದಶಕದಿಂದ ಸಮುದಾಯದ ಸಂಘಟನೆಯ ಒಡನಾಟದಲ್ಲಿದ್ದೇನೆ. ಸಂಘಟನೆಯು ಸಂವಿಧಾನ ಓದು ಅಭಿಯಾನವನ್ನು ರಾಜ್ಯದಲ್ಲೆಡೆ ಯಶಸ್ವಿಯಾಗಿ ನಡೆಸಿದೆ. ಸಮುದಾಯದ 7ನೇ ಸಮ್ಮೇಳನದಲ್ಲಿ ಭವಿಷ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಆರೋಗ್ಯಕರ ಚರ್ಚೆ ನಡೆಯಬೇಕು. ಚಾರಿತ್ರಿಕ ಸತ್ಯಗಳ ವಿರುದ್ಧ ದೇಶ ಆಳುವವರು ಬಹಳ ಕಾಲ ಉಳಿಯುವುದಿಲ್ಲ. ಜನ ಆಶಾವಾದಿಗಳಾಗಬೇಕು. ಸತ್ಯಕ್ಕೆ ಜಯ ಖಂಡಿತ' ಎಂದರು. ಇದಕ್ಕೆ ಮೊದಲು ನ್ಯಾ. ದಾಸ್ ಅವರು ಹಲಗೆ ಬಾರಿಸುವುದರ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಪ್ರಧಾನ ಕಾರ್ಯದರ್ಶಿ ಎಸ್. ದೇವೇಂದ್ರಗೌಡ ಸ್ವಾಗತ ಕೋರಿದರು.

ಡಿಸೆಂಬರ್ 14ರಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಟ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಚೇತನ ಮಾತನಾಡಿದರು. ಕಲೆಗಾಗಿ ಕಲೆ ಅಲ್ಲ, ಬದುಕಿಗಾಗಿ ಬದಲಾವಣೆಗಾಗಿ ಕಲೆ ಬಳಸಿಕೊಂಡ ಸಮುದಾಯ ಸಂಘಟನೆ ಬಗ್ಗೆ ಗೌರವವಿದೆ. ಸ್ವಯಂ ವಿಮರ್ಶೆಯಿಂದ ಬದಲಾವಣೆ ಆರಂಭವಾಗಲಿ. ಸಾಮಾಜಿಕ ಕ್ರಾಂತಿಗಿಂತಲೂ ಮಾನಸಿಕ ಕ್ರಾಂತಿ ಮುಖ್ಯ. ದೇಶ ಅಪಾಯಕಾರಿ ಸ್ಥಿತಿಯಲ್ಲಿರುವಾಗ ಬುದ್ಧ, ಬಸವ, ಅಂಬೇಡ್ಕರ, ಕುವೆಂಪು ಸಿದ್ಧಾಂತ ಮುಂದುವರೆಸಬೇಕು ಪ್ರಗತಿಪರ ಶಕ್ತಿಗಳೆಲ್ಲವೂ ಸೈದ್ಧಾಂತಿಕ ಸ್ಪಷ್ಟತೆಯಿಂದ ಒಗ್ಗೂಡಬೇಕು ಎಂದರು.

ಸಮುದಾಯದ ಜೊತೆಗಿನ ತಮ್ಮ ಅನುಭವಗಳನ್ನು ಕೆ. ಷರೀಪಾ ರವರು ಹಂಚಿಕೊಂಡರು. 'ಎಲ್ಲಿಂದ ಬಂದಿರೆಂದು ಕೇಳಬಹುದು ನೀವು ಜನರ ನಡುವಿನಿಂದ ಎಂದು ಹೇಳತೇವೆ ನಾವು, ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು, ಮತ್ತೆ ಜನರ ನಡುವೆ ಹೋಗುತೇವ ನಾವು" 70 ರ ದಶಕದ ಜನರ ಧ್ವನಿ ಇದು. ಕೆಜಿಎಫ್.ನಿಂದ 1970ರ ದಶಕದ ಕೊನೆಯಲ್ಲಿ ಪ್ರಾರಂಭವಾದ ಜಾಥಾದಲ್ಲಿ ಹಾಡುಗಾರನಾಗಿ ಪಯಣ ಆರಂಭಿಸಿದ ತಮ್ಮ ಅನುಭವವನ್ನು ಸ್ವಾಗತ ಸಮಿತಿ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ ತಮ್ಮ ಆಶಯ ಮಾತುಗಳಲ್ಲಿ ಹಂಚಿಕೊಂಡರು. 'ಬಹುತ್ವ ಭಾರತ, ಬಲಿಷ್ಠ ಭಾರತ' ಎಂಬ ಸಮ್ಮೇಳನದ ಘೋಷಣೆಯನ್ನು ವಿವರಿಸುತ್ತಾ ಇಂದಿನ ಪರಿಸ್ಥಿತಿ, ಹಿಂದಿನ ಅನುಭವ ಮತ್ತು ಮುಂದಿನ ದಾರಿ ಕುರಿತು ಸಂಘಟನಾ ಕಾರ್ಯದರ್ಶಿ ವಿಠ್ಠಲ ಭಂಡಾರಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ 'ಸಾಂಸ್ಕೃತಿಕ ಪರಿಭಾಷೆ ಮೂಲಕ ಪ್ರತಿರೋಧದ ನೆಲೆಗಳನ್ನು ಅರ್ಥಪೂರ್ಣಗೊಳಿಸುವುದೇ ಸಂಘಟನೆಯ ಮೂಲ ಆಶಯ' ಎಂದರು.

'ಸಂಘಟನೆ ಆರಂಭವಾದ ತುರ್ತು ಪರಿಸ್ಥಿತಿ ಕಾಲಕ್ಕಿಂತಲೂ ಈಗಿನ ಕಾಲಘಟ್ಟ ವಿಭಿನ್ನವಾಗಿದೆ. ಮುಂದಿನ ದಾರಿಯ ಬಗ್ಗೆ ಸಂಘಟನೆಗೆ ಸಮ್ಮೇಳನದ ಚರ್ಚೆಗಳು ದಾರಿದೀಪವಾಗಲಿ' ಎಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಅಚ್ಚುತ ಆಶಿಸಿದರು. ಉದ್ಘಾಟನಾ ಗೋಷ್ಠಿಯನ್ನು ಸ್ವಾಗತ ಸಮಿತಿ ಕಾರ್ಯದರ್ಶಿಯಾದ ಜೆ.ಜಿ.ನಾಗರಾಜ ನಡೆಸಿಕೊಟ್ಟರು.

'ಬಹುತ್ವ ಭಾರತಕ್ಕಾಗಿ ಸಾಂಸ್ಕೃತಿಕ ಅನುಸಂಧಾನ'

ಮುಂದಿನ 'ಬಹುತ್ವ ಭಾರತಕ್ಕಾಗಿ ಸಾಂಸ್ಕೃತಿಕ ಅನುಸಂಧಾನ' ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿ, 'ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೆ ದೇವರು ಧರ್ಮವನ್ನು ಮುಂದೆ ತಂದು ಜನಸಾಮಾನ್ಯರ ಬದುಕು ಬೀದಿಗೆ ತಂದಿದ್ದಾರೆ' ಎಂದು ರಾಷ್ಟ್ರೀಯ ನಾಟಕ ಶಾಲೆ (ಎನ್ಎಸ್‌ಡಿ) ನಿರ್ದೇಶಕ ಸಿ.ಬಸವಲಿಂಗಯ್ಯ ಅಭಿಪ್ರಾಯಪಟ್ಟರು.



'ಬಹುತ್ವವನ್ನು ಭಕ್ತಿಯಲ್ಲಿ ಮಾತ್ರ ತೋರಿಸಲು ಹೊರಟಿದ್ದಾರೆ. ಮತಾಂತರಕ್ಕೆ ಸಂವಿಧಾನ ಅವಕಾಶ ನೀಡಿದ್ದರೂ ದಮನಿತ ಜನಾಂಗವು ದೇವರ ಭಯದಲ್ಲಿ ಬದುಕುತ್ತಿದೆ. ಬುದ್ಧನ ಕಾಲದ ಸಂಘ ಪ್ರಸ್ತುತ ಕಾಲಕ್ಕೆ ಪರಿಕಲ್ಪನೆಯಾಗಬೇಕು. ಸಮಾನತೆಯ ಸಂಘಗಳ ಬದಲಿಗೆ ಮಠಗಳು, ಅಗ್ರಹಾರಗಳು, ದೇವಾಲಯಗಳು ಸೃಷ್ಟಿಯಾಗಿ ಬಂಡವಾಳಶಾಹಿಗಳಿಂದ ರಾಜಕೀಯ ಆರಂಭಿಸಿವೆ' ಎಂದು ಗುಡುಗಿದರು.

'ತಳ ಸಮುದಾಯಗಳು ಪ್ರಜಾಪ್ರಭುತ್ವವ್ಯವಸ್ಥೆಯಲ್ಲಿ ಎಷ್ಟೇ ಪ್ರತಿರೋಧ ತೋರಿದರೂ ಬೆಲೆ ಇಲ್ಲವಾಗಿದೆ. ರಾಜಕಾರಣಿಗಳು ತಳ ಸಮುದಾಯಗಳನ್ನು ಮತ ಬ್ಯಾಂಕ್‌ಗೆ ಮಾತ್ರ ಸೀಮಿತಗೊಳಿಸಿದ್ದಾರೆ. ಜ್ಞಾನ ಕೇಂದ್ರಗಳನ್ನು ಮುಚ್ಚುವ ಮೂಲಕ ಆಳುವ ವರ್ಗದ ಗುಲಾಮರಾಗುತ್ತಿದ್ದೇವೆ. ವಿದ್ಯೆಯು ಮತ್ತೆ ಶೋಷಣೆಗೆ ಕಾರಣವಾಗುತ್ತಿದ್ದು, ಜನರಿಗೆ ಸಾಂಸ್ಕೃತಿಕ ಅರಿವು ಮೂಡಿಸಬೇಕು' ಎಂದು ಹೇಳಿದರು.

'ಬಹುತ್ವದ ಪ್ರಶ್ನೆ ಬಂದಾಗ ಮೌಲ್ಯಗಳನ್ನು ನಾಶ ಮಾಡಿ ಅಧಿಕಾರಕ್ಕಾಗಿ ದ್ರೋಹ ಮಾಡಲು ಸಿದ್ಧರಿದ್ದಾರೆ. ದಮನಿತ ಸಮುದಾಯಗಳ ದುಡಿಮೆ ಬಗ್ಗೆ ಎಲ್ಲಿಯೂ ಹೇಳಲಿಲ್ಲ. ಆಹಾರ ಪದ್ಧತಿ ಬೇರೆಯಾಗಿದ್ದರೂ ಅನುಮಾನದಿಂದ ನೋಡುವಂತಾಗಿದೆ. ಪಠ್ಯದಲ್ಲಿ ಬಹುತ್ವದ ವಿಚಾರ ಬರಬೇಕೆಂದು ಯಾರೂ ಧ್ವನಿ ಎತ್ತುತ್ತಿಲ್ಲ. ಈ ಬಗ್ಗೆ ಮಾತುಕತೆ ಇಲ್ಲದೆ ಸಮುದಾಯಗಳ ಮಧ್ಯೆ ಜಗಳ ನಡೆಯುತ್ತಿದೆ' ಎಂದು ಮೈಸೂರಿನ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಆರ್.ಚಲಪತಿ ಅಭಿಪ್ರಾಯ ಪಟ್ಟರು.

ಸಾಹಿತಿ ಮತ್ತು ಸಮುದಾಯದ ಹಿರಿಯ ನಾಯಕರಲ್ಲಿ ಒಬ್ಬರಾದ ಆರ್.ಕೆ. ಹುಡಗಿ ಅಧ್ಯಕ್ಷತೆ ವಹಿಸಿದ್ದರು. ಖಜಾಂಚಿಯಾದ ವಸಂತರಾಜ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜನಾರ್ಧನ ವಿಚಾರ ಸಂಕಿರಣ ನಡೆಸಿಕೊಟ್ಟರು.

'ಜನಪರ ಚಳುವಳಿಗಳು: ಜನ ಕಲೆಗಳು' ಗೋಷ್ಠಿಯಲ್ಲಿ ಲಕ್ಷ್ಮೀಪತಿ ಕೋಲಾರ ಅವರು ಮಾತನಾಡಿ ಎಡ–ಪ್ರಗತಿಪರ ಶಕ್ತಿಗಳ 'ಸಂಸ್ಕೃತಿ ಇತಿಹಾಸದ ಮಹಾಮರೆವಿ'ನಿಂದಾಗಿ ಸಂಸ್ಕೃತಿ ಬಲಪಂಥೀಯರ ಹತಾರವಾದ ಸ್ಥಿತಿ ಉಂಟಾಗಿದೆ ಎಂದು ಹೇಳಿದರು. ಯಜಮಾನ ಸಂಸ್ಕೃತಿ ಮತ್ತು ಯಜಮಾನ ಧರ್ಮದ ವಿರುದ್ಧ, ಜನ ಸಂಸ್ಕೃತಿ ಮತ್ತು ಜನ ಧರ್ಮವನ್ನು ಮುಖಾಮುಖಿಯಾಗಿಸುವುದು ಸಾಧ್ಯವಾಗದಿರುವುದರಿಂದ ಇಂದಿನ ಕೋಮುವಾದಿ ಆತಂಕದ ಪರಿಸ್ಥಿತಿ ಉಂಟಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು. ರಾಮನ ಮತ್ತು ರಾಮಾಯಣದ ಸಾಂಸ್ಕೃತಿಕ ಇತಿಹಾಸದ ಉದಾಹರಣೆಯೊಂದಿಗೆ ಅವರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಇದೇ ಗೋಷ್ಠಿಯಲ್ಲಿ ಪಿಚ್ಚಳ್ಳಿ ಶ್ರೀನಿವಾಸ, ಶಾಂತಾ ಕುಲಕರ್ಣಿ, ರಾಜಪ್ಪ, ಮಂಜುಳಾ ಮತ್ತಿತರ ಸಂಗಾತಿಗಳು ರಂಗಗೀತೆ ಮತ್ತು ಹೋರಾಟದ ಹಾಡುಗಳನ್ನು ಪ್ರಸ್ತುತ ಪಡಿಸಿದರು. ಪ್ರಸಿದ್ಧ ಸಾಹಿತಿ ಬೊಳುವಾರು ಬೊಳವಾರು ಮಹಮ್ಮದ್ ಕುಂಞ ಅಧ್ಯಕ್ಷತೆ ವಹಿಸಿದ್ದರು. ಸಮುದಾಯ ಕರ್ನಾಟಕದ ಉಪಾಧ್ಯಕ್ಷರಾದ ವಾಸುದೇವ ಉಚ್ಚಿಲ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಜೆ ರಂಗನಿರಂತರ ತಂಡದಿಂದ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**